ಸಂಪುಟ: 04 ಸಂಚಿಕೆ: 321 ಪುಟಗಳು: 08 ಭಾನುವಾರ 02 ಫೆಬ್ರವರಿ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

9448225696 +91 8035841833

₹5

**ಮುಂಜಾನೆ ಮಾತು**

ನೀವು ಅನಗತ್ಯವಾಗಿ ಚಿಂತಿಸುತ್ತೀರಿ? ಯಾರಿಗಾಗಿಯೋ ಏಕೆ ಹೆದರುತ್ತೀರಿ? ಯಾರು ನಿಮ್ಮನ್ನು ಕೊಲ್ಲಲು ಸಾಧ್ಯ? ಅಂತಿಮವಾಗಿ ಆತ್ಮವು ಹುಟ್ಟುತ್ತದೆ ಅಥವಾ ಸಾಯುತ್ತದೆ ಅಷ್ಟೇ ಅಲ್ಲವೇ. ಸ್ವಯಂ ವಿನಾಶ ಮತ್ತು ನರಕಕ್ಕೆ ಮೂರು ದಾರಿಗಳಿವೆ, ಅದುವೇ ಕಾಮ, ಕೋಪ ಮತ್ತು ದುರಾಸೆ.



# ಉದಯ ವಾಹಿನಿ

UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ





# ಹೊಸ ಅಧ್ಯಾಯ ನಿರ್ಮಲಾ ಆಯವ್ಯಯ




• **ಉದಯವಾಹಿನಿ, ನವದೆಹಲಿ**

ಭಾರಿ ಕುತೂಹಲ, ನಿರೀಕ್ಷೆ ಮೂಡಿಸಿದ ಕೇಂದ್ರ ಬಜೆಟ್ ಮಂಡನೆಯಾಗಿದೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಹತ್ವದ ಬಜೆಟ್ ಮಂಡಿಸಿದ್ದಾರೆ. ಇದೀಗ ಎಲ್ಲೆಡೆ ತೆರಿಗೆ ವಿನಾಯಿತಿ ಕುರಿತು ಚರ್ಚೆಗಳು ನಡೆಯುತ್ತಿದೆ. ಎಷ್ಟು ತೆರಿಗೆ ವಿನಾಯಿತಿ ಸಿಕ್ಕಿದೆ, ಬದಲಾವಣೆ ಏನು ಅನ್ನೋ ಮಾತುಗಳೇ ಕೇಳಿಬರುತ್ತಿದೆ. ಪ್ರಮುಖವಾಗಿ ಈ ಬಾರಿಯ ಬಜೆಟ್ ಮಂಡನೆ ಬಳಿಕ ದೇಶದ ತೆರಿಗೆ ನೀತಿ, ಸೇರಿದಂತೆ ಕೆಲ ಕ್ಷೇತ್ರದಲ್ಲಿ ಪ್ರಮುಖ ಬದಲಾವಣೆಯಾಗುತ್ತಿದೆ. ಈ ಪೈಕಿ ಮೂರು ಬದಲಾವಣೆ ಎಂದರೆ ಆದಾಯ ತೆರಿಗೆ ವಿನಾಯಿತಿ, ಟಿಡಿಎಸ್ ಹಾಗೂ ಸ್ಟಾರ್ಟ್‌ಅಪ್ ಬೂಸ್ಟರ್, ಆರೋಗ್ಯ, ಶಿಕ್ಷಣ ಸೇರಿದಂತೆ ಕೆಲ ಪ್ರಮುಖ ಕ್ಷೇತ್ರಗಳು. ಆದಾಯ ತೆರಿಗೆ ವಿನಾಯಿತಿ

ಹೊಸ ಆದಾಯ ತೆರಿಗೆ ವಿನಾಯಿತಿ ಘೋಷಿಸಲಾಗಿದೆ. 7 ಲಕ್ಷ ರೂಪಾಯಿ ವರೆಗಿದ್ದ ತೆರಿಗೆ ವಿನಾಯಿಯನ್ನು 12 ಲಕ್ಷ ರೂಪಾಯಿ ವರೆಗೆ ಏರಿಕೆ ಮಾಡಲಾಗಿದೆ. ಇದರಿಂದ 12 ಲಕ್ಷ ರೂಪಾಯಿ ವರೆಗೆ ಆದಾಯ ಇರುವ ತೆರಿಗೆದಾರರು ಯಾವುದೇ ತೆರಿಗೆ ಪಾವತಿ ಮಾಡಬೇಕಿಲ್ಲ. ವಿಶೇಷ ಅಂದರೆ 12.75 ಲಕ್ಷ ರೂಪಾಯಿ ವರೆಗಿನ ವೇತನದಾರರಿಗೆ 75,000 ರೂಪಾಯಿ ಸ್ಟಾಂಡರ್ಡ್ ಡಿಡಕ್ಷನ್ ನೀಡಲಾಗಿದೆ. ಹೀಗಾಗಿ 12.75 ಲಕ್ಷ ರೂಪಾಯಿ ವರೆಗಿನ ವೇತನದಾರರು ತೆರಿಗೆ ವಿನಾಯಿತಿ ಲಾಭ ಪಡೆಯಲಿದ್ದಾರೆ.

**ದಾಖಲೆ ಬರೆದ ನಿರ್ಮಲಾ ಸೀತಾರಾಮನ್**


ಸಂಸತ್ತಿನಲ್ಲಿ ಪ್ರಸಕ್ತ ಸಾಲಿನ ಪೂರ್ಣ ಪ್ರಮಾಣದ ಬಜೆಟ್ ಮಂಡನೆ ಆರಂಭವಾಗಿದ್ದು, ಸತತ 8ನೇ ಬಾರಿಗೆ ಆಯವ್ಯಯ ಮಂಡನೆ ಮಾಡುವ ಮೂಲಕ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹೊಸ ದಾಖಲೆ ಬರೆದಿದ್ದಾರೆ. ಸತತ 8 ಬಾರಿ ಬಜೆಟ್ ಮಂಡಿಸಿದ ಸಚಿವೆ ಎಂಬ ಹೆಗ್ಗಳಿಕೆಗೆ ನಿರ್ಮಲಾ ಅವರು ಪಾತ್ರರಾಗಿದ್ದಾರೆ. ಈ ಮೂಲಕ ಮೊರಾರ್ಜಿ ದೇಸಾಯಿ ಅವರ ದಾಖಲೆಯನ್ನು ಸರಿಗಟ್ಟಿದ್ದಾರೆ. ಮೋದಿಯವರ ಎರಡನೇ ಅವಧಿ ಸರ್ಕಾರ ಅಂದರೆ 2019 ರಲ್ಲಿ ನಿರ್ಮಲಾ ಸೀತಾರಾಮನ್ ಅವರು ದೇಶದ ಮೊದಲ ಪೂರ್ಣಾವಧಿಯ ಮಹಿಳಾ ಹಣಕಾಸು ಸಚಿವೆಯಾದರು.

**ಬಜೆಟ್‌ನಿಂದ 3 ಮಹತ್ವದ ಬದಲಾವಣೆ**

2024ರಲ್ಲಿ ಮೂರನೇ ಅವಧಿಗೆ ಅಧಿಕಾರಕ್ಕೆ ಮೋದಿ ಸರ್ಕಾರದಲ್ಲಿ ಅವರು ಹಣಕಾಸು ಖಾತೆಯನ್ನು ಉಳಿಸಿಕೊಂಡರು. ಸತತ 8ನೇ ಬಜೆಟ್ ಮಂಡನೆ ಮಾಡಿರುವ ನಿರ್ಮಲಾ ಸೀತಾರಾಮನ್ ಅವರು, ಮಾಜಿ ಪ್ರಧಾನಿ ಮೊರಾರ್ಜಿ ದೇಸಾಯಿ ಅವರು ವಿವಿಧ ಅವಧಿಗಳಲ್ಲಿ ಮಂಡಿಸಿದ ಬಜೆಟ್‌ಗಳ ದಾಖಲೆಗಳನ್ನು ಸರಿಗಟ್ಟಿದ್ದಾರೆ. ಮಾಜಿ ಪ್ರಧಾನಿ ಮೊರಾರ್ಜಿ ದೇಸಾಯಿ ಅತಿ ಹೆಚ್ಚು ಬಾರಿ ಬಜೆಟ್ ಮಂಡಿಸಿದ ದಾಖಲೆ ಹೊಂದಿದ್ದಾರೆ. ಒಟ್ಟು 10 ಬಾರಿ ಬಜೆಟ್ ಮಂಡಿಸಿದ್ದರು. ಮೊರಾರ್ಜಿ ದೇಸಾಯಿ ಹಣಕಾಸು ಸಚಿವರಾಗಿದ್ದಾಗ, 1959ರಿಂದ 1964ರವರೆಗೆ ಸತತ ಆರು ಬಾರಿ ಮತ್ತು 1967ರಿಂದ 1969ರ ಅವಧಿಯಲ್ಲಿ ನಾಲ್ಕು ಬಾರಿ ಬಜೆಟ್ ಮಂಡಿಸಿದ್ದರು.ಮಾಜಿ ಹಣಕಾಸು ಸಚಿವ ಪಿ.ಚಿದಂಬರಂ 9 ಬಾರಿ ಬಜೆಟ್ ಮಂಡಿಸಿದ್ದರು. ಪ್ರಣಬ್ ಮುಖರ್ಜಿ ಭಾರತದ ಹಣಕಾಸು ಸಚಿವರಾಗಿದ್ದಾಗ ಎಂಟು ಬಾರಿ ಬಜೆಟ್ ಮಂಡಿಸಿದ್ದರು.


**ಬಡತನ ನಿರ್ಮೂಲನೆಗೆ ಹೆಚ್ಚಿನ ಒತ್ತು**

2025ರ ಕೇಂದ್ರ ಬಜೆಟ್‌ನಲ್ಲಿ ಆದಾಯ ತೆರಿಗೆ ಸ್ಲ್ಯಾಬ್‌ಗಳ ಪರಿಷ್ಕರಣೆ ಮತ್ತು ರಿಬೇಟ್ ಮಿತಿಯನ್ನು 7 ಲಕ್ಷ ರೂ.ಗಳಿಂದ 12 ಲಕ್ಷ ರೂ.ಗಳಿಗೆ ಹೆಚ್ಚಿಸುವುದು ಸೇರಿದಂತೆ ಹಲವು ಪ್ರಮುಖ ಘೋಷಣೆಗಳನ್ನು ಮಾಡಲಾಗಿದೆ. ಇದು 'ಜನರ ಧ್ವನಿ'ಗೆ ಸ್ಪಂದಿಸುವ ಬಜೆಟ್. "ರಿಬೇಟ್ ಮಿತಿ ಹೆಚ್ಚಳದಿಂದಾಗಿ ಸುಮಾರು ಒಂದು ಕೋಟಿ ತೆರಿಗೆದಾರರು ಯಾವುದೇ ಆದಾಯ ತೆರಿಗೆ ಪಾವತಿಸಬೇಕಾಗಿಲ್ಲ. ಸ್ಟ್ಯಾಂಡರ್ಡ್ ಕಡಿತವನ್ನು ಅನ್ವಯಿಸಿದ ನಂತರ ರಿಬೇಟ್‌ಗೆ 12 ಲಕ್ಷ ರೂ.ಗಳ ಮಿತಿ ವಾಸ್ತವವಾಗಿ 12.75 ಲಕ್ಷ ರೂ.ಗಳಾಗಿದ್ದು, ಎಲ್ಲರಿಗೂ ಅನ್ವಯವಾಗುವಂತೆ ಸ್ಟ್ಯಾಂಡರ್ಡ್ ಡಿಡಕ್ಷನ್‌ನ್ನು 75,000ಗೆ ನಿಗದಿ ಮಾಡಿರುವುದು ಕೂಡ ಜನಸ್ನೇಹಿಯಾಗಿದೆ.



**-ನಿರ್ಮಲಾ ಸೀತಾರಾಮನ್ , ಸಚಿವೆ**

## 2025-26ರ ಹೊಸ ಆದಾಯ ತೆರಿಗೆ ಸ್ಲ್ಯಾಬ್




- 4,00,000ರೂ. ದಿಂದ 8,00,000 ರೂ -ಶೇ. 5
- 8,00,0001 ರೂ. 12,00,000ರೂ. - ಶೇ. 10
- 12,00,001 ದಿಂದ 16 ಲಕ್ಷದವರೆಗೆ - ಶೇ. 15
- 16,00,001 ದಿಂದ 20 ಲಕ್ಷ ರೂ - ಶೇ. 20
- 20,00,001 ದಿಂದ 24ಲಕ್ಷದವರೆಗೆ ಶೇ. 25%
- 24 ಲಕ್ಷದ ಮೇಲ್ಪಟ್ಟು - ಶೇ. 30ರಷ್ಟು


## ಯಾವ ಇಲಾಖೆಗೆ ಎಷ್ಟು ಅನುದಾನ...?

| | |
|---|---|
| ರಕ್ಷಣಾ ವಲಯಕ್ಕೆ | 4,91,732 ಕೋಟಿ ರೂ. |
| ಗ್ರಾಮೀಣ ಅಭಿವೃದ್ಧಿ | 2,66,817 ಕೋಟಿ ರೂ. |
| ಗೃಹ ವ್ಯವಹಾರ | 2,33,211 ಕೋಟಿ ರೂ. |
| ಕೃಷಿ ಮತ್ತು ಇತರೆ ಚಟುವಟಿಕೆ | 1,71,437 ಕೋಟಿ ರೂ. |
| ಶಿಕ್ಷಣ | 1,28,650 ಕೋಟಿ ರೂ. |
| ಆರೋಗ್ಯ | 98,311 ಕೋಟಿ ರೂ. |
| ನಗರ ಅಭಿವೃದ್ಧಿ | 96,777 ಕೋಟಿ ರೂ. |
| ಐಟಿ ಮತ್ತು ಟೆಲಿಕಾಂ | 95,298 ಕೋಟಿ ರೂ. |
| ಇಂಧನ | 81,174 ಕೋಟಿ ರೂ. |
| ವಾಣಿಜ್ಯ ಮತ್ತು ಕೈಗಾರಿಕೆ | 65,553 ಕೋಟಿ ರೂ. |
| ಸಾಮಾಜಿಕ ಕಲ್ಯಾಣ | 60,052 ಕೋಟಿ ರೂ. |
| ವೈಜ್ಞಾನಿಕ ಇಲಾಖೆ | 55,679 ಕೋಟಿ ರೂ. |

## 12 ಲಕ್ಷ ರೂ. ವರೆಗೆ ತೆರಿಗೆ ವಿನಾಯಿತಿ

ಮಧ್ಯಮ ವರ್ಗದವರಿಗೆ ಬಜೆಟ್‌ನಲ್ಲಿ ಬಂಪರ್ ಘೋಷಣೆ. ''12 ಲಕ್ಷ ರೂ. ವರೆಗೆ ತೆರಿಗೆ ವಿನಾಯಿತಿ. ವೇತನ ಪಡೆಯುವ ತೆರಿಗೆದಾರರು 12.75 ಲಕ್ಷ ರೂ. ಗಳಿಗೆ ಆದಾಯ ತೆರಿಗೆ ಪಾವತಿಸಬೇಕಾಗಿಲ್ಲ'' ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್. ಪ್ರತಿ ಬಾರಿ ಬಜೆಟ್‌ನಲ್ಲಿ ಆದಾಯ ತೆರಿಗೆ ವಿನಾಯಿತಿಯನ್ನು ಹೆಚ್ಚಿಸಬೇಕು ಎಂಬ ಆಗ್ರಹ ಕೇಳಿ ಬರುತ್ತಿತ್ತು. ಹೀಗಾಗಿ ಈ ಬಾರಿ ಗರಿಷ್ಠ 10 ಲಕ್ಷ ರೂ.ವರೆಗೆ ತೆರಿಗೆ ವಿನಾಯಿತಿ ನೀಡಬಹುದು ಎಂಬ ಮಾತು ಕೇಳಿ ಬಂದಿತ್ತು. ಆದರೆ ಈ ಬಾರಿ ನಿರ್ಮಲಾ ಸೀತಾರಾಮನ್ ಅವರು ಬರೋಬ್ಬರಿ 12 ಲಕ್ಷ ರೂ. ವರೆಗೆ ತೆರಿಗೆ ವಿನಾಯಿತಿ ಘೋಷಣೆ ಮಾಡಿ ಮಧ್ಯಮ ವರ್ಗದವರಿಗೆ ಬಂಪರ್ ಘೋಷಣೆ ಮಾಡಿದ್ದಾರೆ. ಮುಂದಿನ ವಾರ ಸೀತಾರಾಮನ್ ಅವರು ಹೊಸ ಆದಾಯ ತೆರಿಗೆ ಮಸೂದೆಯನ್ನು ಮಂಡಿಸಲಿದ್ದಾರೆ. ಈ ಮಸೂದೆಯಲ್ಲಿ ಈ ವಿಚಾರದ ಬಗ್ಗೆ ಹೆಚ್ಚಿನ ಸ್ಪಷ್ಟತೆ ಸಿಗಲಿದೆ.



ಕರ್ನಾಟಕದ ತೆರಿಗೆ ಹಣದಿಂದ ಬಿಹಾರ ರಾಜ್ಯಕ್ಕೆ ಐದಾರು ಯೋಜನೆ ಕೊಟ್ಟಿದ್ದಾರೆ. ಕರ್ನಾಟಕದವರು ಕಡ್ಲೆ ಬೀಜ ತಿನ್ನೋಕೆ ಇರೋದಾ...? ಬಜೆಟ್‌ನಲ್ಲಿ ಕರ್ನಾಟಕಕ್ಕೆ ಬರೀ ಚೊಂಬು ಸಿಕ್ಕಿದೆ. ಕೇಂದ್ರದ ಬಿಜೆಪಿ ಸರಕಾರ ಕರ್ನಾಟಕಕ್ಕೆ ಮಾಡುತ್ತಿರುವ ದ್ರೋಹ ಇದಾಗಿದೆ. ಆದರೆ, ಬಜೆಟ್‌ನಲ್ಲಿ ಹಣಕಾಸು ಆಯೋಗ ರಾಜ್ಯಕ್ಕೆ 11,495 ಕೋಟಿ ರೂ. ಕೊಡುವಂತೆ ಹೇಳಿತ್ತು. ಆದರೆ, ಈ ಅನುದಾನದ ಬಗ್ಗೆ ಬಜೆಟ್‌ನಲ್ಲಿ ಚಕಾರ ಎತ್ತಿಲ್ಲ. ಭದ್ರಾ ಮೇಲ್ದಂಡೆ ಯೋಜನೆಗೆ ಒಂದು ಪೈಸೆ ಕೂಡ ಕೊಟ್ಟಿಲ್ಲ. ಕಲ್ಯಾಣ ಕರ್ನಾಟಕ, ಮಲೆನಾಡು ಕರ್ನಾಟಕ್ಕಕ್ಕೆ ಏನೂ ನೀಡಿಲ್ಲ

**-ಕೃಷ್ಣ ಬೈರೇಗೌಡ ಕಂದಾಯ ಸಚಿವ**

### ಬಡತನ ಮುಕ್ತ ಭಾರತ ಸಂಕಲ್ಪ



ರೈತರು, ಯುವಕರು, ಮಹಿಳೆಯರು, ಮಧ್ಯಮ ವರ್ಗದವರ ಅಭಿವೃದ್ಧಿಯ ಮಂತ್ರವನ್ನು ಬಜೆಟ್‌ನಲ್ಲಿ ಜಪಿಸಿರುವ ಕೇಂದ್ರದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು, 2047 ಕ್ಕೆ ವಿಕಸಿತ ಭಾರತದ ಗುರಿಯನ್ನು ಸಾಧಿಸಿ ಬಡತನ ಮುಕ್ತ ಭಾರತ ನಿರ್ಮಾಣದ ಸಂಕಲ್ಪ ಹೊಂದಿರುವ ಬಜೆಟ್‌ನ್ನು ಮಂಡಿಸಿದ್ದಾರೆ. ಲೋಕಸಭೆಯಲ್ಲಿಂದು 2025-26ನೇ ಸಾಲಿನ ಕೇಂದ್ರ ಬಜೆಟ್‌ನ್ನು ಮಂಡಿಸಿದ ಅವರು, ಸರ್ವರ ಅಭಿವೃದ್ಧಿಯನ್ನು ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದು, ಬಡತನ ನಿರ್ಮೂಲನೆಗೂ ಬಜೆಟ್‌ನಲ್ಲಿ ಒತ್ತು ನೀಡಿದ್ದಾರೆ. ಬಡವರು, ಮಹಿಳೆಯರು, ರೈತರು, ಯುವಕರ ಅಭಿವೃದ್ಧಿಗೆ ಪೂರಕವಾಗುವ ಹೊಸ ಯೋಜನೆಗಳನ್ನು ಬಜೆಟ್‌ನಲ್ಲಿ ಪ್ರಕಟಿಸುವ ಜತೆಗೆ ಮಧ್ಯಮ ವರ್ಗದವರ ಅಭಿವೃದ್ಧಿಗೂ ಕಾರಣವಾಗುವ ಭರಪೂರ ಯೋಜನೆಗಳನ್ನು ಪ್ರಕಟಿಸಿದ್ದಾರೆ.

### ಟಿಡಿಎಸ್, ಟಿಸಿಎಸ್ ನೀತಿಯಲ್ಲಿ ಬದಲಾವಣೆ



ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಆದಾಯ ತೆರಿಗೆ ಸುಧಾರಣೆಗಳನ್ನು ತರಲಾಗಿದೆ. ಈ ಮೂಲಕ ತೆರಿಗೆದಾರರ ಮೇಲಿನ ಹೊರೆ ಕಡಿಮೆ ಮಾಡಲು ಮಹತ್ವದ ಕ್ರಮ ಕೈಗೊಳ್ಳಲಾಗಿದೆ. ಪ್ರಮುಖವಾಗಿ ಆದಾಯ ಮೂಲದಲ್ಲಿ ಕಡಿತಗೊಳಿಸುವ ಟಿಡಿಎಸ್ ತರ್ಕಬದ್ಧಗೊಳಿಲಾಗಿದೆ. ಟಿಸಿಎಸ್ ಮಿತಿಯನ್ನು 7 ಲಕ್ಷ ರೂಪಾಯಿಯಿಂದ 10 ಲಕ್ಷ ರೂಪಾಯಿ ವರೆಗೆ ಹೆಚ್ಚಿಸಲಾಗಿದೆ. ಇನ್ನು ಬಾಡಿಗೆ ಮೇಲಿನ ಟಿಡಿಎಸ್ ಮಿತಿಯನ್ನು 6 ಲಕ್ಷ ರೂಪಾಯಿ ವರೆಗೆ ಏರಿಕೆ ಮಾಡಲಾಗಿದೆ. ಇದರಿಂದ ಮಧ್ಯಮ ವರ್ಗ ನಿಟ್ಟುಸಿರು ಬಿಟ್ಟಿದ್ದಾರೆ. ಶಿಕ್ಷಣ ಸಾಲದ ಮೇಲಿನ ಟಿಸಿಎಸ್ ಮಿತಿಯನ್ನು 10 ಲಕ್ಷ ರೂಪಾಯಿಗೆ ಹೆಚ್ಚಿಸಲಾಗಿದೆ. ಮತ್ತೊಂದು ಪ್ರಮುಖ ಬದಲಾವಣೆ ಎಂದರೆ ಟಿಸಿಎಸ್ ಪಾವತಿ ವಿಳಂಭವನ್ನು ಅಪರಾಧ ಎಂದು ಪರಿಗಣಿಸುವ ನೀತಿಗೆ ಬ್ರೇಕ್ ಹಾಕಲಾಗಿದೆ. ಇದೀಗ ಟಿಸಿಎಸ್ ಪಾವತಿಯನ್ನು ಅಪರಾಧ ಎಂದು ಪರಿಗಣಿಸಲಾಗುವುದಿಲ್ಲ. ಆರೋಗ್ಯ ಕ್ಷೇತ್ರದಲ್ಲಿ ಕೆಲ ಮಹತ್ವದ ಬದಲಾವಣೆ ಮಾಡಲಾಗಿದೆ. ಜೀವ ಉಳಿಸುವ 36 ಔಷಧಗಳ ಮೇಲಿನ ಸುಂಕವನ್ನು ಸಂಪೂರ್ಣ ಕಡಿತಗೊಳಿಸಲಾಗಿದೆ. ಸಮಾಜ ಕಲ್ಯಾಣಗಳ ಸರ್ಚಾರ್ಜ್ ಮೇಲೆ ಸದ್ಯ 82 ಟ್ಯಾರಿಫ್ ಲೈನ್ಸ್ ಅಡಿಯಲ್ಲಿ ಸುಂಕ ವಿನಾಯಿತಿ ನೀಡಲಾಗುತ್ತದೆ. ನಿರ್ಮಲಾ ಸೀತಾರಾಮನ್ ಮಂಡಿಸಿದ ಕೇಂದ್ರ ಬಜೆಟ್ ಇದೀಗ ಹಲವು ಬದಲಾವಣೆಗಳನ್ನು ಮಾಡಲಾಗಿದೆ.



ಕೂಲಿ ಕಾರ್ಮಿಕರು, ಸಣ್ಣ ಉದ್ದಿಮೆದಾರರು, ಹಿಂದುಳಿದ ವರ್ಗದವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಮುಂತಾದ ಸಮಾಜದ ಎಲ್ಲಾ ವರ್ಗಗಳನ್ನು ಒಳಗೊಳ್ಳುವ ಬಜೆಟ್ ಅನ್ವಯವಾಗುತ್ತದೆ.

**-ಪ್ರಲ್ಹಾದ್ ಜೋಶಿ ಕೇಂದ್ರ ಸಚಿವ**



ಕೃಷಿಕರ ಬಗ್ಗೆ ಅತಿ ಹೆಚ್ಚು ಕಾಳಜಿ ವಹಿಸಿದ ಬಜೆಟ್ ಇದಾಗಿದೆ, ಮಧ್ಯಮ ವರ್ಗದ ಜನರ ಬದುಕನ್ನು ಸುಲಭ, ಸರಳಗೊಳಿಸುವ ಬಜೆಟ್. ಪ್ರಧಾನಿ ಅವರ ದೂರದೃಷ್ಟಿ ಹಾಗೂ ರೈತಪರ ಆಲೋಚನೆಗಳಿಗೆ 2025ನೇ ಸಾಲಿನ ಬಜೆಟ್ ಕೈಗನ್ನಡಿ ಆಗಿದೆ.

**-ಕುಮಾರಸ್ವಾಮಿ, ಕೇಂದ್ರ ಸಚಿವ**




ಬಜೆಟ್ ರಾಜ್ಯ ಮತ್ತು ದೇಶದ ದೃಷ್ಟಿಯಿಂದ ಬಹಳ ನಿರಾಶಾದಾಯಕ ಬಜೆಟ್. ಮೋದಿ ಸರ್ಕಾರ ಕರ್ನಾಟಕಕ್ಕೆ ಚೊಂಬು ಕೊಡುವುದನ್ನು ಮುಂದುವರೆಸಿದೆ. ಕರ್ನಾಟಕದ ದೃಷ್ಟಿಯಿಂದ ಇದೊಂದು ನಿರಾಶದಾಯಕ ಮತ್ತು ದೂರದೃಷ್ಟಿ ಇಲ್ಲದ ಬಜೆಟ್. ಪೂರ್ವಭಾವಿ ಸಭೆಯಲ್ಲಿ ಕರ್ನಾಟಕ ಅನೇಕ ಬೇಡಿಕೆಗಳನ್ನು ಇಟ್ಟಿತ್ತು. ನಮ್ಮ ಬೇಡಿಕೆಗಳು ಬೇಡಿಕೆಗಳಾಗಿಯೇ ಉಳಿದಿವೆ. ಒಂದೇ ಒಂದು ಬೇಡಿಕೆಯೂ ಈಡೇರಿಲ್ಲ.

**- ಸಿದ್ದರಾಮಯ್ಯ ಸಿಎಂ**




ದೇಶವೇ ಹಣದುಬ್ಬರ, ನಿರುದ್ಯೋಗ ಸಮಸ್ಯೆಯಿಂದ ಬಳಲುತ್ತಿದೆ. ಮೋದಿ ಸರ್ಕಾರ ಸುಳ್ಳು ಹೊಗಳಿಕೆ ಗಳಿಸಲು ಹಠ ಹಿಡಿದಿದೆ. 900 ಇಲಿಗಳನ್ನು ತಿಂದ ನಂತರ ಬೆಕ್ಕು ಹಜ್‌ಗೆ ಹೋಯಿತು ಎಂಬ ಗಾದೆ ಈ ಬಜೆಟ್‌ಗೆ ಸಂಪೂರ್ಣವಾಗಿ ಹೊಂದಿಕೊಳ್ಳುತ್ತೆ. 10 ವರ್ಷಗಳಲ್ಲಿ, ಮೋದಿ ಸರ್ಕಾರವು ಮಧ್ಯಮ ವರ್ಗದಿಂದ 54.18 ಲಕ್ಷ ಕೋಟಿ ರೂ. ಆದಾಯ ತೆರಿಗೆಯನ್ನು ಸಂಗ್ರಹಿಸಿದೆ. ಈಗ ನೀಡುತ್ತಿರುವ 12 ಲಕ್ಷದವರೆಗಿನ ವಿನಾಯಿತಿಯ ಪ್ರಕಾರ 1 ವರ್ಷಕ್ಕೆ 80,000 ಉಳಿತಾಯ, ತಿಂಗಳಿಗೆ ಕೇವಲ 6,666 ರೂ ಮಾತ್ರ. ಕೇಂದ್ರ ಬಜೆಟ್‌ನಲ್ಲಿ ಯುವಕರಿಗೆ ಏನೂ ಇಲ್ಲ.

**-ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಅಧ್ಯಕ್ಷ**



ನಿರ್ಮಲಾ ಸೀತಾರಾಮನ್ ಮಂಡಿಸಿರುವ ಬಜೆಟ್‌ನಲ್ಲಿ ಬಿಹಾರಕ್ಕೆ ಹೆಚ್ಚಿನ ಪ್ಯಾಕೇಜ್ ನೀಡಲಾಗಿದೆ. ನಮ್ಮ ರಾಜ್ಯದ ಎಚ್‌ಡಿ ಕುಮಾರಸ್ವಾಮಿ ಮತ್ತು ಪ್ರಹ್ಲಾದ್ ಜೋಶಿ ಕೇಂದ್ರದಲ್ಲಿ ಪ್ರಭಾವಿ ಖಾತೆ ಹೊಂದಿದ್ದಾರೆ. ಹೀಗಿದ್ದರೂ ನಮಗೆ ಯಾವುದೇ ನೆರವು ಆಗಿಲ್ಲ. ಎಚ್‌ಡಿಕೆ ಹಾಗೂ ಪ್ರಹ್ಲಾದ್ ಜೋಶಿ ಆಟಕ್ಕುಂಟು, ಲೆಕ್ಕಕ್ಕಿಲ್ಲ.

**-ಕೆ ಎನ್ ರಾಜಣ್ಣ ಸಹಕಾರಿ ಸಚಿವ**




ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ ಕೇಂದ್ರ ಬಜೆಟ್ ಮಧ್ಯಮ ವರ್ಗಕ್ಕೆ ಅಚ್ಚರಿಯ ಉಡುಗೊರೆ ನೀಡಿದೆ. ಇದು ಆರ್ಥಿಕ ಮತ್ತು ಸಾಮಾಜಿಕ ವಲಯಗಳಲ್ಲಿ ಸಮತೋಲನವನ್ನು ಕಾಯ್ದುಕೊಳ್ಳುವ ಬಜೆಟ್ ಆಗಿದೆ. 2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರದ ದೃಷ್ಟಿಕೋನದತ್ತ ಕೊಂಡೊಯ್ಯುವ ಅಭಿವೃದ್ಧಿ ಆಧಾರಿತ ಬಜೆಟ್ ಇದಾಗಿದೆ.

**-ಬೊಮ್ಮಾಯಿ ಮಾಜಿ ಸಿಎಂ**



'ಬಜೆಟ್‌ನಲ್ಲಿ ಉಳಿತಾಯ, ಹೂಡಿಕೆ, ಬಳಕೆ ಮತ್ತು ಬೆಳವಣಿಗೆಗೆ ಹೆಚ್ಚಿನ ಉತ್ತೇಜನ ಸಿಗುವಂತಹ ಹಲವು ಅಂಶಗಳಿವೆ. ಜತೆಗೆ, ಗಿಗ್ ಕಾರ್ಮಿಕರ ಕಲ್ಯಾಣ ಕ್ರಮಗಳು ಕಾರ್ಮಿಕರ ಘನತೆಗೆ ಸರ್ಕಾರದ ಬದ್ಧತೆಯನ್ನು ಒತ್ತಿಹೇಳುತ್ತವೆ' 'ಈ ಬಾರಿಯ ಬಜೆಟ್‌ನಲ್ಲಿ ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಜತೆಗೆ, ಸಾಮಾನ್ಯ ಪ್ರಜೆಯ ಜೇಬು ತುಂಬಿಸುವ ಎಲ್ಲಾ ಪ್ರಯತ್ನಗಳನ್ನು ಮಾಡಲಾಗಿದೆ. 'ವಿಕಸಿತ ಭಾರತ'ದ ನಮ್ಮ ಧ್ಯೆಯವನ್ನು ಸಾಮಾನ್ಯ ಜನರು ಕೊಂಡೊಯ್ಯುತ್ತಾರೆ ಎಂಬುದಕ್ಕೆ ಇದುವೇ ಸಾಕ್ಷಿ.

**ನರೇಂದ್ರ ಮೋದಿ, ಪ್ರಧಾನ ಮಂತ್ರಿ**



ಗುಂಡಿನ ಗಾಯಗಳಿಗೆ ಬ್ಯಾಂಡ್-ಏಡ್. ಜಾಗತಿಕ ಅನಿಶ್ಚಿತತೆಯ ಮಧ್ಯೆ, ನಮ್ಮ ಆರ್ಥಿಕ ಬಿಕ್ಕಟ್ಟನ್ನು ಪರಿಹರಿಸಲು ಒಂದು ಮಾದರಿಯಾದ ಬದಲಾವಣೆ ಬೇಕಾಗಿತ್ತು. ಆದರೆ ಈ ಸರ್ಕಾರ ಹೊಸ ಚಿಂತನೆಗಳಿಲ್ಲದೆ ದಿವಾಳಿಯಾಗಿದೆ. ಆದಾಯ ತೆರಿಗೆ ಮಿತಿ ಹೆಚ್ಚಳದಂಥಹ ಕ್ರಮಗಳ ಮೂಲಕ ದೇಶದ ಜನರಿಗೆ ಅಲ್ಪ ಕೊಡುಗೆ ನೀಡಲಾಗಿದೆ. ಆದರೆ, ಆರ್ಥಿಕತೆಯನ್ನು ಮೇಲೆತ್ತಲು ಇದು ಸಾಕಾಗಲ್ಲ. ಮತ್ತಷ್ಟು ಕೊಡುಗೆಗಳು ಬೇಕಿತ್ತು ಎನ್ನುವ ಅರ್ಥದಲ್ಲಿ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಜೊತೆಗೆ, ಹೊಸ ಚಿಂತನೆಗಳಿಲ್ಲದೆ ಕೇಂದ್ರ ಸರ್ಕಾರ ದಿವಾಳಿಯಾಗಿದೆ

**-ರಾಹುಲ್ ಗಾಂಧಿ ಲೋಕಸಭೆ ವಿರೋಧ ಪಕ್ಷದ ನಾಯಕ**

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹8,449 /Gram24ct ₹7,745/Gram22ct ಬೆಳ್ಳಿ: ₹99.50/Gram



**ಸಿದ್ಧಸೂಕ್ತಿ**

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

## ಋಣಭಾವ

ನೆರವು ನೀಡಿದವರಿಗೆ ಕೃತಜ್ಞರಾಗಿರಬೇಕಾದುದು ಜೈವಿಕ ವ್ಯವಸ್ಥೆ. ಸಸ್ಯ ಪ್ರಾಣಿ ಪಕ್ಷಿಗಳಲ್ಲೂ ಕಾಣುತ್ತೇವೆ. ವಿಕಸಿತ ಮನೋಬುದ್ಧಿಯ ಮಾನವನಿಗಂತೂ ಹೆಚ್ಚಿಗಿರಬೇಕಾದುದು ನ್ಯಾಯ. ಋಣಭಾವವಿಲ್ಲದವ ಸಮಾಜ ಕಂಟಕ. ಗೊಬ್ಬರ ನೀರುಂಡು ತರು ಲತಾದಿಗಳು ಹೂ ಹಣ್ಣು ನೆರಳು ಗಾಳಿ ನೀಡಿ ಕೃತಜ್ಞತೆ ಮೆರೆಯುತ್ತವೆ.

ಮಾತು ಬರದ ಮೂಕ ಪ್ರಾಣಿಗಳೂ ಕೃತಜ್ಞತೆ ತೋರುತ್ತವೆ. ಮೊನ್ನೆ ಮೇಯಲು ಆಚೆ ಕಟ್ಟಿದ ಹಸುವನ್ನು ಯಾರೋ ಬಿಚ್ಚಿದ್ದರು, ಮೇಯುತ್ತ ಹೋದಾಗ ಯಾರೋ ಕಟ್ಟಿ ಥಳಿಸಿದ್ದರು ಎನಿಸುತ್ತೆ. ಮಾರನೇ ದಿನ ಸಿಕ್ಕಿತು. ಮತ್ತೆ ಮರುದಿನ ಮೇಯಲು ಕಟ್ಟಲು ಹೊರಟಾಗ ಹೆಜ್ಜೆ ಕಿತ್ತಲಿಲ್ಲ. ಅದಕ್ಕಿರುವ ಹೊರಗಿನ ಭಯ, ಯಜಮಾನನ ಮೇಲಿನ ಪ್ರೀತಿ ಗ್ರಹಿಕೆಯಾಯಿತು. ಎಂದಿಗೂ ಹೊಸ್ತಿಲ ಒಳಗೆ ಬರದ ನಮ್ಮ ನಾಯಿ ಹಿಂದೊಮ್ಮೆ ಒಳಗೇ ಬಂತು.

ಹೊರಗಿನ ನಾಯಿಗಳು ಕಚ್ಚಿದ್ದವು. ಇದು ನನ್ನ ಸುರಕ್ಷಿತ ಸ್ಥಳ ಎಂಬ ನಂಬಿಕೆ ಅದಕ್ಕೆ. ಕುಂಭಮೇಳದಲ್ಲಿ ಕಾಲ್ತುಳಿತದಿಂದ ಮೃತರಾದ ಬೆಳಗಾವಿಯ ತಾಯಿ ಜ್ಯೋತಿ ಮಗಳು ಮೇಘಾ ಸಾಕಿದ ನಾಯಿ ಅವರಿಲ್ಲದೇ ಆಹಾರ ಬಿಟ್ಟಿತ್ತು. ಅವರ ಶವ ಕಂಡೊಡನೆ ಮುಖ ಮೂಸಿತು. ಶವಗಳ ನಡುವೆಯೇ ಕುಳಿತಿತು. ಅಂತಿಮ ಯಾತ್ರೆಯಲ್ಲಿ ಹೆಜ್ಜೆ ಹಾಕಿತು. ಕಂಡ ಜನರ ಕಣ್ಣಾಲಿ ಒದ್ದೆಯಾದವು. ಮಾನವರಿಗೂ ಇಂಥ ನಂಬಿಕೆ ಕೃತಜ್ಞತೆಗಳು ಬಲವಾಗಿದ್ದಲ್ಲಿ ದ್ವೇಷ ಹಗೆತನ ಲಂಚ ವಂಚನೆ ನಿಲ್ಲುತ್ತವೆ.

## ಬಿಎಂಟಿಸಿ ನೌಕರರಿಗೆ 1.50 ಕೋಟಿ ಅಪಘಾತ ವಿಮಾ ಪರಿಹಾರಕ್ಕೆ ಸರ್ಕಾರ ಒಡಂಬಡಿಕೆ

• ಉದಯವಾಹಿನಿ ಬೆಂಗಳೂರು

ಬಿಎಂಟಿಸಿ ನೌಕರರಿಗೆ ಗುಡ್ ನ್ಯೂಸ್ ಎನ್ನುವಂತೆ ಕೆನರಾ ಬ್ಯಾಂಕ್ ನೊಂದಿಗೆ ರೂ.1.50ಕೋಟಿ ಅಪಘಾತ ಪರಿಹಾರ ವಿಮಾ ಯೋಜನೆಯ ಒಡಂಬಡಿಕೆಯನ್ನು ರಾಜ್ಯ ಸರ್ಕಾರ ಮಾಡಿಕೊಂಡಿದೆ. ಇದಲ್ಲದೇ ಮೃತಾವಲಂಬಿತರಿಗೆ ರೂ.1 ಕೋಟಿ ವಿಮಾ ಪರಿಹಾರ ಮೊತ್ತದ ಚೆಕ್ ವಿತರಣೆಯನ್ನು ಮಾಡಲಾಯಿತು.

ಬೆಂ.ಮ.ಸಾ.ಸಂಸ್ಥೆಯು ಒಟ್ಟು 51 ಘಟಕಗಳನ್ನು ಹೊಂದಿದೆ. ಪ್ರತಿದಿನ 5861 ಅನುಸೂಚಿಗಳಿಂದ 61536 ಸುತ್ತುವಳಿಗಳನ್ನು 12.04 ಲಕ್ಷ ಕಿ.ಮೀ.ಗಳಲ್ಲಿ ಆಚರಣೆಗೊಳಿಸಲಾಗುತ್ತಿದೆ. ಪ್ರತಿ ದಿನ ಸರಾಸರಿ 40 ಲಕ್ಷ ಪ್ರಯಾಣಿಕರು ಸಂಸ್ಥೆಯ ಸಾರಿಗೆಗಳ ಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದಾರೆ. ನಗರದಲ್ಲಿ ವಾಯುಮಾಲಿನ್ಯ ತಗ್ಗಿಸುವ ನಿಟ್ಟಿನಲ್ಲಿ ಪ್ರಸ್ತುತ 1279 ಎಲೆಕ್ಟ್ರಿಕ್ ಬಸ್ಸುಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ ಹಾಗೂ ಮುಂದಿನ ದಿನಗಳಲ್ಲಿ 352 ಎಲೆಕ್ಟ್ರಿಕ್ ಬಸ್ಸುಗಳನ್ನು ಸೇರ್ಪಡೆಗೊಳಿಸಲು ಯೋಜಿಸಲಾಗಿದೆ.ಪ್ರಸ್ತುತ ಒಟ್ಟು 6158 ವಾಹನಗಳನ್ನು ಹೊಂದಿದ್ದು ಪರಿಸರಸ್ನೇಹಿ ಹಾಗೂ ವಾಯುಮಾಲಿನ್ಯವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಎಲೆಕ್ಟ್ರಿಕ್ ಬಸ್ಸುಗಳನ್ನು ಕಾರ್ಯಾಚರಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

## ಗೃಹ ಪ್ರವೇಶ ವೇಳೆಯೇ ಗ್ಯಾಸ್ ದುರಂತ: 6 ಜನರ ಸ್ಥಿತಿ ಗಂಭೀರ

• ಉದಯವಾಹಿನಿ ದೇವನಹಳ್ಳಿ

ಹೊಸ ಮನೆ ಗೃಹ ಪ್ರವೇಶದ ವೇಳೆಯೇ ಅಗ್ನಿಅವಘಡ ಸಂಭವಿಸಿದೆ. ಗ್ಯಾಸ್ ಲೀಕ್ ಆಗಿ ಬೆಂಕಿ ಹೊತ್ತಿಕೊಂಡು 6 ಜನರ ಸ್ಥಿತಿ ಗಂಭೀರವಾಗಿರುವಂತಹ ಘಟನೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ಗ್ರಾಮಾಂತರ ದರ್ಗಾಜೋಗಹಳ್ಳಿಯಲ್ಲಿ ನಡೆದಿದೆ. ಅದೃಷ್ಟವಶಾತ್ ಮನೆಯಲ್ಲಿದ್ದವರೆಲ್ಲಾ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಸದ್ಯ ಗಾಯಾಳುಗಳಿಗೆ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. ರವಿಕುಮಾರ್ ಎಂಬುವರಿಗೆ ಸೇರಿದ ನೂತನ ಮನೆಯಲ್ಲಿ ಅವಘಡ ಸಂಭವಿಸಿದ್ದು, ರವಿಕುಮಾರ್(41), ವರ್ಷಿತಾ(21), ಅನುಸೂಯ(37), ಭಾಗ್ಯಮ್ಮ (55), ಚಿರಂತ್(11), ಮಿಥುನ್ (14) ಗಂಭೀರವಾಗಿ ಗಾಯಗೊಂಡವರು.

## ಹೆಚ್ ಡಿ ಕುಮಾರಸ್ವಾಮಿ ವಿರುದ್ಧ ಭೂಕಬಳಿಕೆ ಆರೋಪ: ತನಿಖೆಗೆ ಎಸ್ಐಟಿ ರಚನೆ

• ಉದಯವಾಹಿನಿ ಬೆಂಗಳೂರು

ಕೇಂದ್ರ ಸಚಿವ ಹೆಚ್‌ಡಿ ಕುಮಾರಸ್ವಾಮಿ ಮತ್ತು ಅವರ ಕುಟುಂಬ ಸದಸ್ಯರ ವಿರುದ್ಧ ಕೇಳಿಬಂದಿರುವ ರಾಮನಗರ ಜಿಲ್ಲೆ ಬಿಡದಿ ಹೋಬಳಿಯ ಕೇತಗಾನ ಹಳ್ಳಿ ಗ್ರಾಮದ ಸರ್ಕಾರಿ ಜಮೀನು ಕಬಳಿಸಿದ್ದಾರೆ ಎಂಬ ಆರೋಪದ ತನಿಖೆ ನಡೆಸಲು ರಾಜ್ಯ ಸರ್ಕಾರ ಹಿರಿಯ ಐಎಎಸ್ ಅಧಿಕಾರಿ ಅಮಲಾನ್ ಆದಿತ್ಯ ಬಿಸ್ವಾಸ್ ನೇತೃತ್ವದಲ್ಲಿ ಎಸ್‌ಐಟಿ ರಚನೆ ಮಾಡಿದೆ. ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಮತ್ತು ಕರ್ನಾಟಕ ಭೂ ಕಬಳಿಕೆ ನಿಷೇಧ ಕಾಯ್ದೆ-2011ರ ಅಡಿಯಲ್ಲಿ ಎಸ್‌ಐಟಿ ರಚನೆ ಮಾಡಲಾಗಿದೆ.

ಈ ಎಸ್‌ಐಟಿ ತಂಡದಲ್ಲಿ ಭೂ ಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯ ಜಂಟಿ ನಿರ್ದೇಶಕ ನಿಸ್ಸಾರ್ ಅಹಮ್ಮದ್, ಬೆಂಗಳೂರು ವಿಭಾಗದ ಹೆಚ್ಚುವರಿ ಪ್ರಾದೇಶಿಕ ಇಸ್ಲಾವುದ್ದೀ ಗದ್ಯಾಳ, ಕಂದಾಯ ಆಯುಕ್ತಾಲಯದ ತಹಶೀಲ್ದಾರ್ ಗಣಪತಿ ಶಾಸ್ತ್ರಿ ಇದ್ದಾರೆ.ಹೆಚ್ ಡಿ ಕುಮಾರಸ್ವಾಮಿ ಮತ್ತು ಅವರ ಕುಟುಂಬದವರು ಕೇತಗಾನಹಳ್ಳಿಯಲ್ಲಿ ಸರ್ವೆ ನಂ. 8,9,10, 16, 17 ಮತ್ತು 79ರಲ್ಲಿನ ಜಮೀನುಗಳನ್ನು ಕಬಳಿಸಿದ್ದಾರೆ ಎಂಬ ಆರೋಪಿಸಿ ಧಾರವಾಡದ ಸಮಾಜ ಪರಿವರ್ತನಾ ಸಮುದಾಯದ ಸಂಸ್ಥಾಪಕ ಎಸ್‌ಆರ್ ಹಿರೇಮಠ ಹೈಕೋರ್ಟ್‌ಲವಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶ ಪಾಲಿಸಿಲ್ಲ ಎಂದು ರಾಜ್ಯ ಸರ್ಕಾರದ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿಯನ್ನೂ ಸಲ್ಲಿಸಿದ್ದರು.

## ಕರ್ನಾಟಕದ 7 ಜಿಲ್ಲೆಗಳಲ್ಲಿ ಭಾರೀ ಮಳೆ ಹವಾಮಾನ ಇಲಾಖೆ ಮುನ್ಸೂಚನೆ

• ಉದಯವಾಹಿನಿ ಬೆಂಗಳೂರು

ಮೈಸೂರು, ಕೊಡಗು, ಹಾಸನ, ಚಿಕ್ಕಮಗಳೂರು, ಚಾಮರಾಜನಗರ, ದಕ್ಷಿಣ ಕನ್ನಡ ಮತ್ತು ಉಡುಪಿ ಸೇರಿದಂತೆ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಮುಂದಿನ ಎರಡು ದಿನಗಳವರೆಗೆ ಭಾರಿ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಎಚ್ಚರಿಕೆ ನೀಡಿದೆ. ಕರ್ನಾಟಕವು ಹಿಂದೆಂದೂ ಕಂಡರಿಯದ ಶೀತ ಅಲೆಗೆ ಸಾಕ್ಷಿಯಾಗಿದ್ದು, ರಾಜ್ಯದಾದ್ಯಂತ ತೀವ್ರ ಚಳಿ ಮತ್ತು ಬಲವಾದ ಗಾಳಿ ಬೀಸುತ್ತಿದೆ.ಇದರ ಮಧ್ಯೆ ಈ ವಾರದಲ್ಲಿ ಕರ್ನಾಟಕದ 7 ಜಿಲ್ಲೆಗಳಲ್ಲಿ ಭಾರೀ ಮಳೆಯಾಗಲಿದೆ ಅಂತ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಶೀತಗಾಳಿ ಉತ್ತರ ಕನ್ನಡ, ಬಾಗಲಕೋಟೆ, ಬೆಳಗಾವಿ, ಬೀದರ್, ಧಾರವಾಡ, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿತ್ರದುರ್ಗ, ದಾವಣಗೆರೆ, ಕೋಲಾರ, ಮಂಡ್ಯ, ರಾಮನಗರ, ಶಿವಮೊಗ್ಗ ಮತ್ತು ವಿಜಯನಗರ ಸೇರಿದಂತೆ ಹಲವಾರು ಪ್ರದೇಶಗಳಲ್ಲಿ ಶೀತ ಗಾಳಿ ಮತ್ತು ಒಣ ಹವೆ ಮುಂದುವರಿಯುವ ನಿರೀಕ್ಷೆಯಿದೆ. ದಾವಣಗೆರೆಯಲ್ಲಿ ಕನಿಷ್ಠ ಉಷ್ಣಾಂಶ 11.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣವಿದ್ದು,ಒಣಹವೆ ಮತ್ತು ಮಳೆಯಾಗುವ ಸಾಧ್ಯತೆ ಕಡಿಮೆ ಇದೆ. ರಾಜ್ಯಾದ್ಯಂತ ಹವಾಮಾನವು ಏರಿಳಿತಗೊಳ್ಳುತ್ತಿರುವುದರಿಂದ, ಮುಂಬರುವ ದಿನಗಳಲ್ಲಿ ಶೀತ ಅಲೆ ಮತ್ತು ಸಂಭಾವ್ಯ ಮಳೆಗೆ ಸಿದ್ಧರಾಗಿರಲು ನಿವಾಸಿಗಳನ್ನು ಒತ್ತಾಯಿಸಲಾಗಿದೆ.

# ಎಚ್‌ಡಿಕೆ, ಪ್ರಹ್ಲಾದ್ ಜೋಶಿ ಕೇಂದ್ರ ಸಚಿವರಾದರೂ ಆಟಕ್ಕುಂಟು ಲೆಕ್ಕಕ್ಕಿಲ್ಲ

• ರಾಜಕೀಯ ಕಾರಣಕ್ಕಾಗಿ ಕೆಲವು ರಾಜ್ಯಗಳಿಗೆ ಮಾತ್ರ ಹೆಚ್ಚಿನ ನೆರವು ನೀಡಲಾಗಿದೆ: ಕೆ.ಎನ್ ರಾಜಣ್ಣ

• ಉದಯವಾಹಿನಿ ಬೆಂಗಳೂರು

ಕೇಂದ್ರ ಸಚಿವರಾದ ಎಚ್‌ಡಿ ಕುಮಾರಸ್ವಾಮಿ ಹಾಗೂ ಪ್ರಹ್ಲಾದ್ ಜೋಶಿ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂದು ಸಹಕಾರಿ ಸಚಿವ ಕೆ.ಎನ್ ರಾಜಣ್ಣ ಅಭಿಪ್ರಾಯ ಪಟ್ಟಿದ್ದಾರೆ.

ಕೇಂದ್ರ ಬಜೆಟ್ ಹಿನ್ನೆಲೆಯಲ್ಲಿ ಅವರು ಪ್ರತಿಕ್ರಿಯೆ ನೀಡಿ, ನಿರ್ಮಲಾ ಸೀತಾರಾಮನ್ ಮಂಡಿಸಿರುವ ಬಜೆಟ್‌ನಲ್ಲಿ ಬಿಹಾರಕ್ಕೆ ಹೆಚ್ಚಿನ ಪ್ಯಾಕೇಜ್ ನೀಡಲಾಗಿದೆ ಎಂದು ಆರೋಪಿಸಿದರು. ಆದರೆ ಸಣ್ಣಪುಟ್ಟ ರಾಜ್ಯಗಳನ್ನು ಕಡೆಗಣಿಸಲಾಗಿದೆ. ರಾಜಕೀಯ ಕಾರಣಕ್ಕಾಗಿ ಕೆಲವು ರಾಜ್ಯಗಳಿಗೆ ಮಾತ್ರ ಹೆಚ್ಚಿನ ನೆರವು ನೀಡಲಾಗಿದೆ ಎಂದು ಅವರು ಇದೇ ವೇಳೆ ವ್ಯಾಖ್ಯಾನಿಸಿದರು.

ನಿರ್ಮಲಾ ಸೀತಾರಾಮನ್ ಮಂಡಿಸಿರುವ ಬಜೆಟ್‌ನಲ್ಲಿ ಬಿಹಾರಕ್ಕೆ ಹೆಚ್ಚಿನ ಪ್ಯಾಕೇಜ್ ನೀಡಲಾಗಿದೆ. ನಮ್ಮ ರಾಜ್ಯದ ಎಚ್‌ಡಿ ಕುಮಾರಸ್ವಾಮಿ ಮತ್ತು ಪ್ರಹ್ಲಾದ್ ಜೋಶಿ ಕೇಂದ್ರದಲ್ಲಿ ಪ್ರಭಾವಿ ಖಾತೆ ಹೊಂದಿದ್ದಾರೆ. ಹೀಗಿದ್ದರೂ ನಮಗೆ ಯಾವುದೇ ನೆರವು ಆಗಿಲ್ಲ ಎಂದು ಸಹಕಾರಿ ಸಚಿವ ಕೆ ಎನ್ ರಾಜಣ್ಣ ವಾಗ್ದಾಳಿ ನಡೆಸಿದರು. ಕೇಂದ್ರ ಬಜೆಟ್ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಶನಿವಾರ ಮಾತನಾಡಿದ ಅವರು, ಎಚ್‌ಡಿಕೆ ಹಾಗೂ ಪ್ರಹ್ಲಾದ್ ಜೋಶಿ ಆಟಕ್ಕುಂಟು, ಲೆಕ್ಕಕ್ಕಿಲ್ಲ ಎಂದು ಕಿಡಿಕಾರಿದರು. ಬಿಹಾರ ಮತ್ತು ಆಂಧ್ರ ಹೊರತಾಗಿ ಬೇರೆ ರಾಜ್ಯಗಳು ಇವೆಯಲ್ಲವೇ? ಅಸ್ಸಾಂನಂತಹ ಸಣ್ಣ ರಾಜ್ಯಗಳು ಇವೆ, ಅವುಗಳಿಗೂ ಸರಿಯಾದ ನೆರವನ್ನು ಘೋಷಣೆ ಮಾಡಿಲ್ಲ. ರಾಜಕೀಯ ಕಾರಣಕ್ಕಾಗಿ ಕೆಲವು ರಾಜ್ಯಗಳಿಗೆ ಮಾತ್ರ ನೆರವು ನೀಡಲಾಗಿದೆ ಎಂದು ಆರೋಪಿಸಿದರು.

ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಅವರು ಇಲ್ಲಿಯವರೆಗೆ ಏನು ಮಾಡಿದ್ದಾರೆ


ಉದಯವಾಹಿನಿ ಚಿತ್ರ

**ವೇತನದಾರರಿಗೆ ಭರ್ಜರಿ ಕೊಡುಗೆ**

ರಾಜ್ಯಕ್ಕೆ? ನಾವು ಮಾಡ್ತಿದ್ದೇವೆ ಅಂತ ಹೇಳಲಿ. ನಾವು ಕಾರ್ಖಾನೆಗಳ ಬಗ್ಗೆ ಕೇಂದ್ರಕ್ಕೆ ಒತ್ತಾಯಿಸಿದ್ದೇವೆ. ಮುನಿಯಪ್ಪ ಇದ್ದಾಗಿಂದ ಕೆಜಿಎಫ್ ಬಗ್ಗೆ ಒತ್ತಡ ತರ್ತಿದ್ದಾರೆ. ನಮ್ಮ ಕೈಗಾರಿಕಾ ಸಚಿವರು ಇದ್ದಾರೆ. ಅವರು ಇಂತದ್ದನ್ನ ಕೊಟ್ಟಿದ್ದಾರೆ ಅಂತ ಹೇಳಲಿ ಎಂದು ಕುಮಾರಸ್ವಾಮಿ ವಿರುದ್ಧ ಕಿಡಿಕಾರಿದರು. ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲದ ಮಿತಿಯನ್ನು 3 ಲಕ್ಷದಿಂದ 5 ಲಕ್ಷಕ್ಕೆ ಏರಿಕೆ ಮಾಡಲಾಗಿದೆ. ನಾವು ಮೊದಲೇ ಮಾಡಿದ್ದೆವು. ದುಡ್ಡು ಕೊಡದೆ ಮಿತಿ ಏರಿಸಿದರೆ ಏನಾಗುತ್ತದೆ. ದುಡ್ಡು ಕೊಡದೆ ಹೋದರೆ ಸರ್ಕಾರದ ಕೊಡುಗೆ ಏನು?

ಎಂಎಸ್ ಪಿ ಬಗ್ಗೆ ಯಾವುದೇ ನಿರ್ದಿಷ್ಟ ಮಾಹಿತಿ ಇಲ್ಲ. ಇದು ರೈತರ ವಿರೋಧಿ ಬಜೆಟ್ ಎಂದು ಕಿಡಿಕಾರಿದರು. ಎಸ್‌ಟಿ ಎಸ್‌ಟಿ ಉದ್ದಿಮೆಗಳಿಗೆ 2 ಕೋಟಿ ನೆರವು ನೀಡಿರುವ ವಿಚಾರವಾಗಿ ಪ್ರತಿಕ್ರಿಯೆ ನೀಡಿ, ಇವರು 2 ಕೋಟಿ ಕೊಡ್ತೇವೆ ಅಂತಿದ್ದಾರೆ. ನಾವು ಲಿಮಿಟ್ ಲೆಸ್ ಸಾಲ ಕೊಡ್ತಿದ್ದೇವೆ. ಈ ಸಮುದಾಯಕ್ಕೆ ನಾವೂ ಹೆಚ್ಚಿನ ಆದ್ಯತೆಯನ್ನು ನೀಡಿದ್ದೇವೆ ಎಂದರು.

**ಬಿಹಾರಕ್ಕೆ ಹೆಚ್ಚಿನ ಪ್ಯಾಕೇಜ್**

**ಕೇಂದ್ರ ಬಜೆಟ್ ಹಿನ್ನೆಲೆಯಲ್ಲಿ ಅವರು ಪ್ರತಿಕ್ರಿಯೆ ನೀಡಿ, ನಿರ್ಮಲಾ ಸೀತಾರಾಮನ್ ಮಂಡಿಸಿರುವ ಬಜೆಟ್ ನಲ್ಲಿ ಬಿಹಾರಕ್ಕೆ ಹೆಚ್ಚಿನ ಪ್ಯಾಕೇಜ್ ನೀಡಲಾಗಿದೆ ಎಂದು ಆರೋಪ ಆದರೆ ಸಣ್ಣಪುಟ್ಟ ರಾಜ್ಯಗಳನ್ನು ಕಡೆಗಣಿಸಲಾಗಿದೆ. ರಾಜಕೀಯ ಕಾರಣಕ್ಕಾಗಿ ಕೆಲವು ರಾಜ್ಯಗಳಿಗೆ ಮಾತ್ರ ಹೆಚ್ಚಿನ ನೆರವು ನೀಡಲಾಗಿದೆ ಎಂದು ಅವರು ಇದೇ ವೇಳೆ ವ್ಯಾಖ್ಯಾನ.**

**ಶನಿವಾರ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ 2025-26ನೇ ಸಾಲಿನ ಬಜೆಟ್ ಅನ್ನು ಲೋಕಸಭೆಯಲ್ಲಿ ಮಂಡಿಸಿದ್ದಾರೆ. ಬಜೆಟ್‌ನಲ್ಲಿ ವೇತನದಾರರಿಗೆ ಭರ್ಜರಿ ಕೊಡುಗೆ ನೀಡಲಾಗಿದೆ. ಈ ವೇಳೆ ಆದಾಯ ತೆರಿಗೆಯಲ್ಲಿ ಹಲವು ಬದಲಾವಣೆಗಳನ್ನು ಘೋಷಿಸಿದ್ದು, ಮುಖ್ಯವಾಗಿ 12 ಲಕ್ಷ ರೂ.ವರೆಗೆ ಯಾವುದೇ ತೆರಿಗೆ ಇಲ್ಲ ಎಂದು ಅವರು ಹೇಳಿದ್ದಾರೆ.**

## ಮೆಡಿಸಿನ್ ಪ್ರಯೋಗಕ್ಕೆ ಒಳಗಾಗಿ ವ್ಯಕ್ತಿ ಸಾವು

• ಉದಯವಾಹಿನಿ ಆನೇಕಲ್

ಖಾಸಗಿ ಕಂಪನಿ ನಡೆಸುವ ಮೆಡಿಸಿನ್ ಪ್ರಯೋಗಕ್ಕೆ ಸ್ವಪ್ರೇರಿತವಾಗಿ ಒಳಗಾಗಿ ವ್ಯಕ್ತಿಯೋರ್ವ ಸಾವನ್ನಪ್ಪಿರುವ ಘಟನೆ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿ ನಡೆದಿದೆ.ಮೃತ ವ್ಯಕ್ತಿಯನ್ನು ಕಲಬುರಗಿ ಮೂಲದ ನಾಗೇಶ್ (33) ಎಂದು ಗುರುತಿಸಲಾಗಿದ್ದು, ತಮ್ಮ ಊರಿನಲ್ಲಿ ವ್ಯವಸಾಯ ಮಾಡಿಕೊಂಡಿದ್ದರು. ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಖಾಸಗಿ ಮೆಡಿಸನ್ಸ್ ಕಂಪನಿಯೊಂದಕ್ಕೆ ಆ್ಯಪ್ ಮೂಲಕ ಮೆಡಿಸಿನ್ ಪ್ರಯೋಗಕ್ಕೆ ಒಳಗಾಗಲು ನೋಂದಣಿ ಮಾಡಿಕೊಂಡಿದ್ದರು. ಕಳೆದ ಡಿಸೆಂಬರ್ 2ನೇ ವಾರದಲ್ಲಿ ಮೆಡಿಸಿನ್ ಪ್ರಯೋಗಕ್ಕೆ ಒಳಗಾಗಿದ್ದರು.



ಅದಾದ ಎರಡು ದಿನದ ಬಳಿಕ ಹೊಟ್ಟೆನೋವು ಕಾಣಿಸಿಕೊಂಡಿತ್ತು. ಬಳಿಕ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಆಸ್ಪತ್ರೆಯಲ್ಲಿ 10 ದಿನ ಚಿಕಿತ್ಸೆ ಪಡೆದು ಡಿಸ್ಚಾರ್ಜ್ ಆಗಿದ್ದರು. ಆದರೆ ಅದಾದ ಕೆಲವು ದಿನಗಳ ಬಳಿಕ ಸಹೋದರನ ಮನೆಯಲ್ಲಿದ್ದಾಗ ರಕ್ತ ಹೆಪ್ಪುಗಟ್ಟಿ ನಾಗೇಶ್ ಮೃತಪಟ್ಟಿದ್ದು, ಕುಟುಂಬಸ್ಥರು ಕಂಗಾಲಾಗಿದ್ದಾರೆ. ಮೃತ ನಾಗೇಶ್ ಸಹೋದರ ಮಾತನಾಡಿ, ನೋಂದಣಿ ವೇಳೆ ಸಾವನ್ನ ಹೊರತುಪಡಿಸಿ ಸೈಡ್ ಎಫೆಕ್ಟ್ ಬಗ್ಗೆ ತಿಳಿದುಕೊಂಡು ಅಗ್ರಿಮೆಂಟ್ ಮಾಡಿಕೊಂಡಿದ್ದರು. ಆದರೆ ಮೆಡಿಸಿನ್ಸ್ ಪ್ರಯೋಗದಿಂದಲೇ ಸಾವು ಎಂದು ಆರೋಪಿಸಿದ್ದಾರೆ.

ಈ ಕುರಿತು ನಾಗೇಶ್ ಸಹೋದರ ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಸಾವಿನ ಬಗ್ಗೆ ಯುಡಿಆರ್ ದಾಖಲಿಸಿ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಇನ್ನೂ ಘಟನೆಗೆ ಸಂಬಂಧಿಸಿ ದಂತೆ ಕಂಪನಿಯವರನ್ನು ಕರೆಯಿಸಿ ಹೇಳಿಕೆ ದಾಖಲು ಮಾಡಿಕೊಂಡಿದ್ದಾರೆ. ಸದ್ಯ ಮರಣೋತ್ತರ ವರದಿಗಾಗಿ ಪೊಲೀಸರು ಕಾಯುತ್ತಿದ್ದು, ವರದಿಯ ಬಳಿಕ ಸಾವಿಗೆ ನಿಖರ ಕಾರಣ ತಿಳಿಯಲಿದೆ ಎಂದು ತಿಳಿಸಿದ್ದಾರೆ.

## ಬೆಂಗಳೂರು ವಿವಿಯಲ್ಲಿ 'ಮಿಡಿಯಾ ಕ್ರಾಫ್ಟ್' ಕಾರ್ಯಾಗಾರ

• ಉದಯವಾಹಿನಿ ಬೆಂಗಳೂರು

ಬೆಂಗಳೂರು ವಿಶ್ವವಿದ್ಯಾನಿಲಯದ ವಿದ್ಯುನ್ಮಾನ ಮಾಧ್ಯಮ, ಫೀಲ್ಡ್ ಮೇಕಿಂಗ್ ಮತ್ತು ಆಯನಿಮೇಷನ್ ವಿಭಾಗದಲ್ಲಿ ಸೋಮವಾರದಿಂದ 5 ದಿನಗಳ ಕಾಲ 'ಮೀಡಿಯಾ ಕ್ರಾಫ್ಟ್' ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಚಲನಚಿತ್ರ ನಿರ್ದೇಶಕ ಪಿ.ಶೇಷಾದ್ರಿ ಅವರು ಸೋಮವಾರ ಕಾರ್ಯಾಗಾರ ಉದ್ಘಾಟನೆ ಮಾಡಲಿದ್ದು, ಹಿರಿಯ ಪತ್ರಕರ್ತೆ ಶಾಂತಲಾ ಧರ್ಮರಾಜ್ ಗೌರವ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿ ಪ್ರೊ.ಜಯಕರ್ ಎಸ್.ಎಂ ಅವರು ಮುಖ್ಯ ಅತಿಥಿಯಾಗಿ, ಪಿಎಂ ಉಷಾ ಸಂಯೋಜಕರಾದ ಪ್ರೊ.ಹನುಮಂತಪ್ಪ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ವಿದ್ಯುನ್ಮಾನ ಮಾಧ್ಯಮ ವಿಭಾಗದ


ಉದಯವಾಹಿನಿ ಚಿತ್ರ

ಸಂಯೋಜಕರಾದ ಡಾ. ರಾಜೇಶ್ವರಿ ಆರ್, ಅಧ್ಯಕ್ಷತೆ ವಹಿಸಲಿದ್ದು, ಸಹ ಪ್ರಾಧ್ಯಾಪಕರಾದ ಡಾ. ವಾಹಿನಿ, ಡಾ.ಟಿ. ಶ್ರೀಪತಿ, ಸಿಂಡಿಕೇಟ್ ಸದಸ್ಯರು ಮತ್ತು ಅಕಾಡೆಮಿಕ್ ಕೌನ್ಸಿಲ್ ಸದಸ್ಯರು, ಅತಿಥಿ ಉಪನ್ಯಾಸಕರು, ಸಂಶೋಧನಾ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ.

ಫೆ. 3ರಂದು ಮಧ್ಯಾಹ್ನ 2 ಗಂಟೆಗೆ ರಿಪಬ್ಲಿಕ್ ಕನ್ನಡ ವಾಹಿನಿಯ ನಿರೂಪಕಿ ಸ್ಮಿತಾ ರಂಗನಾಥ್ ಅವರು 'ಆಂಕರಿಂಗ್ ಟೆಕ್ನಿಕ್ಸ್' ಕುರಿತು ವಿಷಯ ಮಂಡಿಸಲಿದ್ದಾರೆ. ಫೆ.4 ರಂದು ವಿಜಯ ಕರ್ನಾಟಕ ದಿನಪತ್ರಿಕೆ ಮುಖ್ಯ ಸಂಪಾದಕ ಸುದರ್ಶನ ಚನ್ನಂಗಿಹಳ್ಳಿ ಅವರು ಜರ್ನಿ ಇನ್‌ಟು ಡಿಜಿಟಲ್ ಮಿಡಿಯಾ ಕುರಿತು ವಿಷಯ ಮಂಡಿಸಲಿದ್ದಾರೆ.

ಮಧ್ಯಾಹ್ನ 2 ಗಂಟೆಗೆ ಶಿಕ್ಷಣ ತಜ್ಞ ಶಿಲ್ಪಾ ವಿ. ಅವರು 'ಆಯನಿಮೇಷನ್ ಇಂಡಸ್ಟ್ರಿ' ಕುರಿತು ವಿಷಯ ಮಂಡನೆ ಮಾಡಲಿದ್ದಾರೆ ಫೆ.5ರಂದು ಬೆಳಗ್ಗೆ 10.30ಕ್ಕೆ ಕಲಾ ನಿರ್ದೇಶಕ ನವೀನ ಕುಶವಂತ್ ಅವರು 'ಆರ್ಟ್ ಡೈರೆಕ್ಷನ್' ಕುರಿತು ವಿಷಯ ಮಂಡಿಸಲಿದ್ದಾರೆ.

ಮಧ್ಯಾಹ್ನ 2 ಗಂಟೆಗೆ ಕಲಾವಿದೆ ಮೆದಿನಿ ಕೆಳಮನೆ ಅವರು 'ಆಯಕ್ಕಿಂಗ್ ಟು ಕ್ಯಾಮೆರಾ' ಕುರಿತು ವಿಷಯ ಮಂಡನೆ ಮಾಡಲಿದ್ದಾರೆ. ಫೆ.6ರಂದು 3ಡಿ ಅನಿಮೇಟರ್ ಪ್ರಮೋದ್ ಚಿನ್ನಪ್ಪಾ ಅವರು 'ಆರ್ಟ್ 3ಡಿ ಆಯನಿಮೇಷನ್' ಕುರಿತು ವಿಷಯ ಮಂಡಿಸಲಿದಾರೆ.

## ಬಿಬಿಎಂಪಿ ಅಧಿಕಾರಿಗಳಿಂದ ಭರ್ಜರಿ ಕಾರ್ಯಾಚರಣೆ

### 2.25 ಗುಂಟೆ ಒತ್ತುವರಿ ಪ್ರದೇಶ ತೆರವು

• ಉದಯವಾಹಿನಿ ಬೆಂಗಳೂರು

ನಗರದ ನಾಯಂಡಹಳ್ಳಿ ಕೆರೆಯ ಮುಖ್ಯ ದ್ವಾರದ ಬಳಿ 2.25 ಗುಂಟೆ ಒತ್ತುವರಿಯಾಗಿದ್ದ ಪ್ರದೇಶವನ್ನು ತೆರವುಗೊಳಿಸಿ ಪಾಲಿಕೆ ವಶಕ್ಕೆ ಪಡೆಯಲಾಗಿದೆ. ಪಶ್ಚಿಮ ವಲಯ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ ನಾಯಂಡಹಳ್ಳಿ ಕೆರೆಯ ಮೈಸೂರು ರಸ್ತೆಗೆ ಹೊಂದಿಕೊಂಡಿರುವಂತಹ ಮುಖ್ಯದ್ವಾರದ ಬಳಿ 2.25 ಗುಂಟೆ ಪ್ರದೇಶದಲ್ಲಿ ಶೀಟಿನ ಶೆಡ್ ಹಾಕಿಕೊಂಡು ಟಿಂಬರ್ ಶಾಪ್ ನಡೆಸಲಾಗುತ್ತಿರುತ್ತದೆ.

ಕೆರೆಗಳ ವಿಭಾಗದ ವಿಶೇಷ ಆಯುಕ್ತರಾದ ಪ್ರೀತಿ ಗೆಹೋಟ್, ಮುಖ್ಯ ಅಭಿಯಂತರರಾದ ವಿಜಯ್ ಕುಮಾರ್ ಹರಿದಾಸ್ ರವರ ನಿರ್ದೇಶನದ ಮೇರೆಗೆ ಇಂದು ಪಾಲಿಕೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಒತ್ತುವರಿಯಾಗಿದ್ದ ಜಾಗವನ್ನು ತೆರವು ಮಾಡಲು ಸೂಚನೆ ನೀಡಿರುತ್ತಾರೆ.

ಮುಂದುವರಿದು, ಒತ್ತುವರಿಯಾಗಿರುವ 2.25 ಗುಂಟೆ ಪ್ರದೇಶವನ್ನು ಈಗಾಗಲೇ ಭೂಮಾಪಕರು ಸರ್ವೇ ನಡೆಸಿ ಗಡಿಯನ್ನು


ಉದಯವಾಹಿನಿ ಚಿತ್ರ

ಗುರುತಿಸಿರುತ್ತಾರೆ.

ಈ ಸಂಬಂಧ ಒತ್ತುರಿಯಾಗಿರುವ ಜಾಗ ವನ್ನು ಕೂಡಲೆ ತೆರವು ಮಾಡಲು ಟಿಂಬರ್ ಶಾಪ್ ನವರಿಗೆ ತಿಳಿಸಲಾಗಿದ್ದು ಸ್ವಯಂಪ್ರೇರಿತವಾಗಿ ಅವರೇ ಶೆಡ್ ಹಾಗೂ ಟಿಂಬರ್‌ಗಳನ್ನು ತೆರವುಗೊಳಿಸಿಕೊಂಡಿರುತ್ತಾರೆ.

ಟಿಂಬರ್ ಶಾಪ್ ತೆರವುಗೊಳಿಸಿದ ಜಾಗಕ್ಕೆ ಕೂಡಲೆ ಫೆನ್ಸಿಂಗ್ ಹಾಕಲಾಗುತ್ತದೆ. ಈ ವೇಳೆ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಚರಣ್ ರಾಜ್, ಕಾರ್ಯಪಾಲಕ ಅಭಿಯಂತರರಾದ ರವಿ, ಸಿದ್ದರಾಮಯ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಸಿಎಂ ಸಲಹೆಗಾರ ಹುದ್ದೆಗೆ ರಾಜೀನಾಮೆ ನೀಡಿದ ಬಿ ಆರ್ ಪಾಟೀಲ್

• ಉದಯವಾಹಿನಿ ಬೆಂಗಳೂರು

ಸಿಎಂ ಸಿದ್ದರಾಮಯ್ಯ ಅವರ ಸಲಹೆಗಾರ ಹುದ್ದೆಗೆ ಆಳಂದ ಶಾಸಕ ಬಿ ಆರ್ ಪಾಟೀಲ್ ರಾಜೀನಾಮೆ ನೀಡಿದ್ದಾರೆ. ಆದರೆ ರಾಜೀನಾಮೆಗೆ ಕಾರಣ ಏನು ಎಂಬುದೇ ಕುತೂಹಲ ಕೆರಳಿಸಿದೆ. ಸಿಎಂ ಸಲಹೆಗಾರನ ಹುದ್ದೆಗೆ ರಾಜೀನಾಮೆ ನೀಡಿದ್ದೇನೆ ಎಂದು ಸ್ವತಃ ಬಿ ಆರ್ ಪಾಟೀಲ್ ಅಧಿಕೃತಗೊಳಿಸಿದ್ದಾರೆ. ರಾಜೀನಾಮೆ ಪತ್ರವನ್ನು ಸಿಎಂ ಸಿದ್ದರಾಮಯ್ಯ ಅವರಿಗೆ ಈಗಾಗಲೇ ತಲುಪಿಸಿದ್ದೇನೆ ಎಂದ ಅವರು ಕಾರಣ ಏನು ಎಂಬ ಪ್ರಶ್ನೆಗೆ ಮಾತ್ರ ಉತ್ತರ ನೀಡಿಲ್ಲ. ರಾಜೀನಾಮೆ ಸಲ್ಲಿಕೆ ಮಾಡಿರುವ ವಿಚಾರವನ್ನು ಬಿ ಆರ್ ಪಾಟೀಲ್ ಅವರೇ ಸ್ವತಃ ಅಧಿಕೃತಗೊಳಿಸಿದ್ದಾರೆ.

ಸಿಎಂ ಸಲಹೆಗಾರನ ಹುದ್ದೆಗೆ ನಾನು ರಾಜೀನಾಮೆ ನೀಡಿದ್ದೇನೆ. ರಾಜೀನಾಮೆ ಪತ್ರವನ್ನು ಸಿಎಂ ಸಿದ್ದರಾಮಯ್ಯ ಅವರಿಗೆ ಈಗಾಗಲೇ ತಲುಪಿಸಿದ್ದೇನೆ ಎಂದರು. ಆದರೆ ರಾಜೀನಾಮೆಗೆ ಕಾರಣ ಏನು ಎಂಬ ಪ್ರಶ್ನೆಗೆ ಏನೂ ಬೇರೆ ಕಾರಣ ಇಲ್ಲ, ನಾನಾಗಿಯೇ ತನ್ನ ರಾಜೀನಾಮೆಯನ್ನು ನೀಡಿದ್ದೇನೆ ಎಂದು ಸ್ಪಷ್ಟಪಡಿಸಿದರು. ಆಳಂದ ಶಾಸಕ ಬಿ ಆರ್ ಪಾಟೀಲ್ ಅವರು ಈ ಹಿಂದೆಯೂ ಸರ್ಕಾರದ ಕೆಲವೊಂದು ಕಾರ್ಯವೈಖರಿಯ ಬಗ್ಗೆ ಅಸಮಾಧಾನ ಹೊರ ಹಾಕಿದ್ದಿದೆ. ಗ್ಯಾರಂಟಿ ಯೋಜನೆಗಳ ಕುರಿತಾಗಿಯೂ ಅವರು ಈ


ಉದಯವಾಹಿನಿ ಚಿತ್ರ

ಹಿಂದೆ ಧ್ವನಿ ಎತ್ತಿದ್ದರು. ಇತ್ತೀಚೆಗೆ ಕಲಬುರಗಿಯಲ್ಲಿ ನಡೆಸಿದ್ದ ಕ್ಯಾಬಿನೆಟ್ ಸಭೆಯ ಬಗ್ಗೆಯೂ ಅವರು ತಮ್ಮ ಅಸಮಾಧಾನವನ್ನು ಹೊರಹಾಕಿದ್ದರು. ಕಲ್ಯಾಣ ಕರ್ನಾಟಕದಲ್ಲಿ ನಡೆದ ಕ್ಯಾಬಿನೆಟ್ ಸಭೆ ಸಮಾಧಾನ ತಂದಿದೆಯೇ ಹೊರತು ತೃಪ್ತಿ ತಂದಿಲ್ಲ ಎಂದಿದ್ದರು. ಇನ್ನು ಶಾಸಕ ಬಿ ಆರ್ ಪಾಟೀಲ್ ಅವರು ಇಬ್ಬರು ಸಚಿವರ ಕಾರ್ಯವೈಖರಿಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಸಿಎಂ ಸಿದ್ದರಾಮಯ್ಯ ಅವರಿಗೆ ಪತ್ರವನ್ನು ಬರೆದಿದ್ದರು.

ಸಮಸ್ಯೆ ಸರಿಯಾಗದ ಹೊರತಾಗಿ ಅಧಿವೇಶನದಲ್ಲೂ ಭಾಗಿಯಾಗುವುದಿಲ್ಲ ಎಂಬ ಎಚ್ಚರಿಕೆಯನ್ನು ನೀಡಿದ್ದರು. ಈ ಹಿನ್ನೆಲೆಯಲ್ಲಿ ಸ್ವತಃ ಸಿಎಂ ಸಿದ್ದರಾಮಯ್ಯ ಅವರು ಬಿ ಆರ್ ಪಾಟೀಲ್ ಅವರಿಗೆ ಪತ್ರವನ್ನು ಬರೆದು ಸಮಾಧಾನ ಪಡಿಸಿದ್ದರು.

ಬಳಿಕ ಬೆಂಗಳೂರಿನಲ್ಲಿ ಅವರ ಜೊತೆಗೆ ಪ್ರತ್ಯೇಕ ಮಾತುಕತೆಯನ್ನು ನಡೆಸಿದ್ದರು. ಇದೀಗ ಇದ್ದಕ್ಕಿದ್ದಂತೆ ಸಿಎಂ ಸಲಹೆಗಾರ ಸ್ಥಾನಕ್ಕೆ ಬಿ ಆರ್ ಪಾಟೀಲ್ ಅವರು ರಾಜೀನಾಮೆಯನ್ನು ಸಲ್ಲಿಸಿದ್ದಾರೆ. ಸದ್ಯ ಸಿಎಂ ಸಿದ್ದರಾಮಯ್ಯ ಅವರು ಮೈಸೂರಿನಲ್ಲಿದ್ದಾರೆ.

ರಾಜೀನಾಮೆಯನ್ನು ಅಂಗೀಕಾರ ಮಾಡಲಾಗುತ್ತಾ? ಇಲ್ಲವೋ ಎಂಬುವುದು ಇನ್ನೂ ಸ್ಪಷ್ಟಗೊಂಡಿಲ್ಲ. ಬಿಆರ್ ಪಾಟೀಲ್ ರಾಜೀನಾಮೆ ಸದ್ಯಕ್ಕೆ ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ. ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಆಂತರಿಕ ಭಿನ್ನಮತದ ನಡುವೆಯೂ ಈ ರಾಜೀನಾಮೆ ಸಾಕಷ್ಟು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

**ರಾಜೀನಾಮೆಗೆ ಉತ್ತರ ನೀಡಿಲ್ಲ**

**ಸಿಎಂ ಸಿದ್ದರಾಮಯ್ಯ ಅವರ ಸಲಹೆಗಾರ ಹುದ್ದೆಗೆ ಆಳಂದ ಶಾಸಕ ಬಿ ಆರ್ ಪಾಟೀಲ್ ರಾಜೀನಾಮೆ ನೀಡಿದ್ದಾರೆ. ಸಿಎಂ ಸಲಹೆಗಾರನ ಹುದ್ದೆಗೆ ರಾಜೀನಾಮೆ ನೀಡಿದ್ದೇನೆ ಎಂದು ಸ್ವತಃ ಬಿ ಆರ್ ಪಾಟೀಲ್ ಅಧಿಕೃತಗೊಳಿಸಿದ್ದಾರೆ. ರಾಜೀನಾಮೆಗೆ ಕಾರಣ ಏನು ಎಂಬುದೇ ಕುತೂಹಲ ಕೆರಳಿಸಿದೆ. ರಾಜೀನಾಮೆಗೆ ಕಾರಣ ಏನು ಎಂಬ ಪ್ರಶ್ನೆಗೆ ಮಾತ್ರ ಉತ್ತರ ನೀಡಿಲ್ಲ**

## ಬಸನಗೌಡ ಪಾಟೀಲ್ ಯತ್ನಾಳ್ ಸುದ್ದಿ ನಂಗ್ಯಾಕೆ: ಡಿಕೆಶಿ

• ಉದಯವಾಹಿನಿ ಬೆಂಗಳೂರು

ಬಿಜೆಪಿಯ ಒಳ ಜಗಳದ ವಿಚಾರಕ್ಕೆ ಡಿಸಿಎಂ ಡಿಕೆ ಶಿವಕುಮಾರ್ ಪ್ರತಿಕ್ರಿಯಿಸಿದ್ದು, ನಾವು ಬೇರೆ ಪಕ್ಷದ ಒಳ ಜಗಳ ಇಟ್ಟುಕೊಂಡು ರಾಜಕಾರಣ ಮಾಡುತ್ತಿಲ್ಲ, ನಮ್ಮ ರಾಜಕಾರಣ ಜನರು ನಮ್ಮ ಮೇಲೆ ಇಟ್ಟಿರುವ ನಂಬಿಕೆಯನ್ನು ಉಳಿಸಿಕೊಂಡು ಹೋಗುವುದು ಅವರ ಒಳ ಜಗಳವನ್ನ ಮುಚ್ಚಿಕೊಳ್ಳಲು ನಮ್ಮ ಸರ್ಕಾರದ ಮೇಲೆ ಪ್ರಯೋಗ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.ಶಿವಮೊಗ್ಗದಲ್ಲಿ ಮಾತನಾಡಿದ ಅವರು, ಬಿಜೆಪಿ ನಾಯಕರದ್ದು ಯಾವಾಗಲೂ ಇದ್ದದ್ದೇ, ಜನ ಅವರಿಗೆ ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳುವ ಕೆಲಸ ಕೊಟ್ಟಿದ್ದಾರೆ, ಅವರಿಗೆ ಅಧಿಕಾರ ಕೊಟ್ಟಾಗ ಆಡಳಿತ ನಡೆಸುವ ಅನುಭವ ಕೂಡ ಇರಲಿಲ್ಲ ಎಂದರು. ಇನ್ನು ಕಾಂಗ್ರೆಸ್‌ನಿಂದ ಹೋದವರಿಗೆ ಅಲ್ಲಿ ಯಾವ ಸ್ಥಾನಮಾನವೂ ಇಲ್ಲ, ಅಲ್ಲಿ ಅವರನ್ನು ಯೂಸ್ ಅಂಡ್ ಥ್ರೋ ಮಾಡಿದ್ದಾರೆ, ಇದು ಈಗ ಎಲ್ಲರಿಗೂ ಗೊತ್ತಾಗುತ್ತಿದೆ ಯೂಸ್ ಅಂಡ್ ಥ್ರೋ ಮಾಡಿದವರ ಹೆಸರು ನಮ್ಮ ಬಳಿ ಇದೆ ಆದರೆ ಅದನ್ನು ನಾವು ಹೇಳಲು ಹೋಗುವುದಿಲ್ಲ, ರಾಜಕೀಯವಾಗಿ ಒಬ್ಬೊಬ್ಬರು ಒಂದೊಂದು ಸಿದ್ಧಾಂತದ ಮೇಲೆ ಬೆಳೆದಿರುತ್ತಾರೆ ಅಂತವರು ಬೇರೆ ಕಡೆಗೆ ಹೋದಾಗ ಅಲ್ಲಿನ ಪರಿಸ್ಥಿತಿ ಅವರಿಗೆ ಒಗ್ಗುವುದಿಲ್ಲ ಅವರ ಪಾರ್ಟಿಯಲ್ಲಿ ಏನಾದರೂ ಮಾಡಿಕೊಳ್ಳಲಿ ನಮಗೆ ಅದರಲ್ಲಿ ಮಧ್ಯ ಪ್ರವೇಶಿಸಲು ಇಷ್ಟ ಇಲ್ಲ, ಅದರ ಲಾಭ ಪಡೆಯುವ ಉದ್ದೇಶವೂ ನಮಗಿಲ್ಲ ಎಂದು ಡಿಸಿಎಂ ಹೇಳಿದರು.

# ಬೆಂಗಳೂರು ಏರ್‌ಪೋರ್ಟ್‌ಗೆ ರಿಂಗ್ ರಸ್ತೆ ಸಂಪರ್ಕ

### ಪ್ರಸ್ತುತ ಬೆಂಗಳೂರು ಸುತ್ತಲಿನ ತಾಲ್ಲೂಕುಗಳ ಮೂಲಕ ಎಸ್‌ಟಿಆರ್‌ಆರ್ ಟೋಲ್ ರಸ್ತೆ ನಿರ್ಮಾಣ ಹಂತದಲ್ಲಿದೆ

• ಉದಯವಾಹಿನಿ ಬೆಂಗಳೂರು

ರಾಜ್ಯದ ನಾನಾ ಜಿಲ್ಲೆಗಳ ವಾಹನಗಳು ಬೆಂಗಳೂರು ಅವಲಂಬನೆಯಿಲ್ಲದೇ ನೇರ ಏರ್‌ಪೋರ್ಟ್ ತಲುಪಲು ಪ್ರತ್ಯೇಕ ರಸ್ತೆ ನಿರ್ಮಾಣ ಬಹುತೇಕ ಅಂತಿಮ ಹಂತಕ್ಕೆ ತಲುಪಿದೆ.

ಈಗಾಗಲೇ ಬೆಂಗಳೂರು ಹೊರವಲಯದಲ್ಲಿ ನಿರ್ಮಾಣಗೊಳ್ಳುತ್ತಿರುವ 155 ಕಿ.ಮೀ. ಸ್ಯಾಟಲೈಟ್ ಟೌನ್ ರಿಂಗ್ ರಸ್ತೆ ಕಾಮಗಾರಿಯೊಂದಿಗೆ ಏರ್‌ಪೋರ್ಟ್ ತಲುಪಲು ಪರ್ಯಾಯ ರಸ್ತೆಯನ್ನು ಕೆಆರ್‌ಡಿಸಿಎಲ್(ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ) ಕೈಗೊಂಡಿದೆ.

ಈ ಕಾಮಗಾರಿ ದೇವನಹಳ್ಳಿ ಸಮೀಪದ ಬೂದಿಗೆರೆ ಕ್ರಾಸ್‌ನಿಂದ ನೇರವಾಗಿ ಏರ್‌ಪೋರ್ಟ್‌ಗೆ ಸಂಪರ್ಕ ಕಲ್ಪಿಸಿದ್ದು, ರಾಜ್ಯ ಮಾತ್ರವಲ್ಲದೇ ಚೆನ್ನೈ, ಆಂಧ್ರಪ್ರದೇಶದ ಕೈಗಾರಿಕಾ ವಾಹನಗಳಿಗೆ ಸಹಕಾರಿಯಾಗಲಿದೆ. ಪ್ರಸ್ತುತ ಬೆಂಗಳೂರು ಸುತ್ತಲಿನ ತಾಲ್ಲೂಕುಗಳ ಮೂಲಕ ಎಸ್‌ಟಿಆರ್‌ಆರ್ ಟೋಲ್ ರಸ್ತೆ ನಿರ್ಮಾಣ ಹಂತದಲ್ಲಿದೆ.

ರಾಜ್ಯ ಸರಕಾರ ಬೆಂಗಳೂರಿನ ಅವಲಂಬನೆ ತಗ್ಗಿಸುವ ನಿಟ್ಟಿನಲ್ಲಿಕೆಆರ್‌ಡಿಸಿಎಲ್ ಮೂಲಕ ಸಂಪರ್ಕ ರಸ್ತೆ ಅಭಿವೃದ್ಧಿಪಡಿಸಲು ಮುಂದಾಗಿದೆ. ಯಲಹಂಕ ಮಾರ್ಗವಾಗಿ ಏರ್‌ಪೋರ್ಟ್‌ಗೆ ನೇರ ಸಂಪರ್ಕವಿದೆ.

ಸ್ಯಾಟಲೈಟ್ ರಿಂಗ್ ರಸ್ತೆ ಮೂಲಕ ಹೊಸದೊಂದು ಯೋಜನೆ ಅಗತ್ಯವಿತ್ತು. ಈ ಅಗತ್ಯತೆಯನ್ನು ಪೂರೈಸಲಾಗುತ್ತಿದೆ.ಸ್ಯಾಟಲೈಟ್ ರಿಂಗ್ ರಸ್ತೆ ಮೂಲಕ ಒಟ್ಟು 20 ಕಿಮೀ ಕಾಮಗಾರಿ


ಉದಯವಾಹಿನಿ ಚಿತ್ರ

**ಕೈಗಾರಿಕಾ ವಾಹನಗಳಿಗೆ ಸಹಕಾರಿ**

ಈಗಾಗಲೇ ಬಹುತೇಕ ಪೂರ್ಣಗೊಂಡಿದ್ದು, 4.5ಕಿಮೀ ರಸ್ತೆ ಕಾಮಗಾರಿ ಬಾಕಿ ಉಳಿದಿದೆ. ಜುಲೈ ವೇಳೆಗೆ ರಸ್ತೆ ನಿರ್ಮಾಣಗೊಳ್ಳುವ ವಿಶ್ವಾಸವನ್ನು ಅಧಿಕಾರಿಗಳು ವ್ಯಕ್ತಪಡಿಸಿದ್ದು, ಈ ಯೋಜನೆಯಿಂದಾಗಿ ರಾಜ್ಯ, ಹೊರ ರಾಜ್ಯದ ವಾಹನಗಳು ನೇರ ಏರ್‌ಪೋರ್ಟ್ ತಲುಪಲು ಸಾಧ್ಯವಾಗಲಿದೆ.

ಪೂರ್ವ ಬೆಂಗಳೂರಿಗೆ ವರದಾನ: ಕೆಆರ್ ಡಿಸಿಎಲ್ ವತಿಯಿಂದ ಅಭಿವೃದ್ಧಿಪಡಿಸುತ್ತಿರುವ ರಸ್ತೆಯು ಬೆಂಗಳೂರು-ಕೋಲಾರ ಹೆದ್ದಾರಿ ಸೇರಿದಂತೆ ಸುತ್ತಮುತ್ತಲ್ಲಿನ ಹಳ್ಳಿಗಳ ಮೂಲಕ ಹಾದುಹೋಗುವ ಹೆದ್ದಾರಿ ಇದಾಗಿದ್ದು, ಪೂರ್ವ ಬೆಂಗಳೂರಿನಿಂದ ಹೊಸಕೋಟೆ, ವೈಟ್‌ಫೀಲ್ಡ್, ಅತ್ತಿಬೆಲೆ, ಆನೇಕಲ್, ಕೆಆರ್ ಪುರ, ಚೆನ್ನೈ ಸೇರಿದಂತೆ ಇನ್ನಿತರೆಡೆಗಳಿಂದ ಏರ್ಪೋರ್ಟ್ ಸಂಪರ್ಕಿಸಲು ಸಹಕರಿಯಾಗಲಿದೆ. ಇದಲ್ಲದೆ ತುಮಕೂರು ಸೇರಿದಂತೆ ನಾನಾ ಜಿಲ್ಲೆಗಳಿಂದ ಬರುವವರು ಬೆಂಗಳೂರು ಅವಲಂಬನೆಯಿಲ್ಲದೆ ನೇರವಾಗಿ ರಾಷ್ಟ್ರೀಯ ಹೆದ್ದಾರಿ ಮೂಲಕ ಬೂದಿಗೆರೆಯ ವರೆಗೂ ತಲುಪಿ, ನಂತರ ಹೆದ್ದಾರಿಯ ಮೂಲಕ ತೆರಳಬಹುದಾಗಿದೆ.ಬೆಂಗಳೂರು ಸುತ್ತಲೂ ನಿರ್ಮಾ ಣವಾಗುತ್ತಿರುವ ಸ್ಯಾಟಲೈಟ್ ರಿಂಗ್ ರಸ್ತೆಯು 155 ಕಿಮೀ ಉದ್ದವಾಗಿದ್ದು, 2200 ಕೋಟಿ ರೂ. ಅನುದಾನದಲ್ಲಿನಿರ್ಮಾಣವಾಗುತ್ತಿದೆ.

2018-19ರಲ್ಲಿಆರಂಭವಾದ ಈ ಯೋಜನೆಯಡಿ ಈಗಾಗಲೇ 125 ಕಿಮೀ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಡಿಸೆಂಬರ್ ವೇಳೆಗೆ ಈ ಕಾಮಗಾರಿ ಪೂರ್ಣಗೊಳ್ಳುವ ಸಾಧ್ಯತೆ ಇದೆ. ಇದರ ಭಾಗವಾಗಿ ಏರ್‌ಪೋರ್ಟ್ ರಸ್ತೆ ಕಾಮಗಾರಿಯೂ 20 ಕಿಮೀನಲ್ಲಿಬಹುತೇಕ ಪೂರ್ಣಗೊಂಡಿದ್ದು, ಬೆಟ್ಟಕೋಟೆಯ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ 1ಕಿಮೀ ಜಾಗಕ್ಕೆ ಪರ್ಯಾಯ ಸ್ಥಳ ಹುಡುಕಾಟ ನಡೆಸಲಾಗಿದೆ. ಮೈಲ್‌ಹಳ್ಳಿ, ಸಿಂಗ್‌ಹಳ್ಳಿಯಲ್ಲಿ ಸೇರಿದಂತೆ ಇನ್ನಿತರೆ ಹಳ್ಳಿಗಳಲ್ಲಿ 500 ರಿಂದ 600 ಮೀಟರ್ ವ್ಯಾಪ್ತಿಯ ಭೂಸ್ವಾಧೀನ ಬಾಕಿಯಿದ್ದು, 4.5 ಕಿಮೀ ಹೆದ್ದಾರಿ ಕಾಮಗಾರಿ ಉಳಿದಿದೆ.

- ಬೂದಿಗೆರೆ ಕ್ರಾಸ್
- ಬೈಯಪ್ಪನಹಳ್ಳಿ
- ಬೊಮ್ಮನಹಳ್ಳಿ
- ಮಂಡೂರು
- ಬಂಡೆಬೊಮ್ಮಸಂದ್ರ
- ಬೂದಿಗೆರೆ
- ಕೊಂಡೇನಹಳ್ಳಿ
- ಸಿಂಗಹಳ್ಳಿ
- ಮೈಲ್‌ಹಳ್ಳಿ
- ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸುಲಭವಾಗಿ ಸಂಪರ್ಕಿಸಲು ಬೂದಿಗೆರೆ ಕ್ರಾಸ್‌ನಿಂದ ಕೈಗೊಂಡಿರುವ ಪರ್ಯಾಯ ರಸ್ತೆ ಕಾಮಗಾರಿ ಪ್ರಗತಿಯಲ್ಲಿದೆ. 4.5 ಕಿಮೀ ಕಾಮಗಾರಿ ಬಾಕಿ ಉಳಿದಿದೆ.

ಔಟರ್ ರಿಂಗ್ ರಸ್ತೆ ಕೂಡ 155 ಕಿಮೀ ಕಾಮಗಾರಿಯಲ್ಲಿ125 ಕಿಮೀ ಕಾಮಗಾರಿ ಪೂರ್ಣಗೊಂಡಿದ್ದು, ಆದಷ್ಟು ಬೇಗ ಕಾರ್ಯಾರಂಭಕ್ಕೆ ಅಗತ್ಯ ಕ್ರಮವಹಿಸಲಾಗಿದೆ ಎಂದು ಲಿಂಗಮೂರ್ತಿ । ವ್ಯವಸ್ಥಾಪಕ ನಿರ್ದೇಶಕ, ಕೆಆರ್‌ಡಿಸಿಎಲ್ ಹೇಳಿದ್ದಾರೆ.

**ಏರ್ಪೋರ್ಟ್‌ಗೆ ಸಂಪರ್ಕಿಸುವ ರಸ್ತೆ ಕಾರ್ಯಾರಂಭಗೊಂಡರೆ ಬೆಂಗಳೂರಿನ ಅವಲಂಬನೆ ತಪ್ಪಲಿದೆ. ಜತೆಗೆ ಟ್ರಾಫಿಕ್ ಕಿರಿಕಿರಿಯಿಲ್ಲದೆ ಸುಗಮವಾಗಿ ಏರ್‌ಪೋರ್ಟ್ ತಲುಪಬಹುದಾಗಿದೆ**

**-ಗಣೇಶ್ , ಹೋಟೆಲ್ ಉದ್ಯಮಿ**

**ಕಾಮಗಾರಿ ಅಂತಿಮ ಹಂತಕ್ಕೆ**

**ಬೆಂಗಳೂರು ಹೊರವಲಯದಲ್ಲಿನ 155 ಕಿ.ಮೀ. ಸ್ಯಾಟಲೈಟ್ ಟೌನ್ ರಿಂಗ್ ರಸ್ತೆಯ ಕಾಮಗಾರಿ, ಏರ್‌ಪೋರ್ಟ್ ಸಂಪರ್ಕಕ್ಕಾಗಿ ಬಹುತೇಕ ಅಂತಿಮ ಹಂತಕ್ಕೆ ತಲುಪಿದೆ. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಕೆಆರ್ ಡಿಸಿಎಲ್) ಮೂಲಕ, ಬೂದಿಗೆರೆ ಕ್ರಾಸ್‌ನಿಂದ ನೇರವಾಗಿ ಏರ್‌ಪೋರ್ಟ್‌ಗೆ ಸಂಪರ್ಕ ಕಲ್ಪಿಸುವ ಪರ್ಯಾಯ ರಸ್ತೆ ನಿರ್ಮಾಣ ನಡೆಯುತ್ತಿದೆ.ಈ ಹೊಸ ಸಂಪರ್ಕದಿಂದ ರಾಜ್ಯದ ಹೊರತಾಗಿ ಚೆನ್ನೈ ಮತ್ತು ಆಂಧ್ರ ಪ್ರದೇಶದ ಕೈಗಾರಿಕಾ ವಾಹನಗಳಿಗೆ ಸಹ ಅನುಕೂಲವಾಗಲಿದೆ.**

# ಸಮುದಾಯದ ಆರೋಗ್ಯ ರಕ್ಷಿಸಿ, ಸುಧಾರಿಸಿ: ಇಲಾಖೆ ಸಿಬ್ಬಂದಿಗೆ ಸಿಎಂ ಸೂಚನೆ


## ಪ್ರಥಮ ರಾಜ್ಯಮಟ್ಟದ ಸಮುದಾಯ ಆರೋಗ್ಯ ಅಧಿಕಾರಿಗಳ ಸಂರಕ್ಷಣಾ ಸಮಾವೇಶ, 'ಆರೋಗ್ಯದ ಬಗ್ಗೆ ಗಮನ ಕೊಡುವಂತೆ ಜನರಲ್ಲಿ ಜಾಗೃತಿ

• **ಉದಯವಾಹಿನಿ ಮೈಸೂರು**

ಜೀವನಶೈಲಿ ಬದಲಾವಣೆ ಮೊದಲಾದ ಕಾರಣಗಳಿಂದ ಪ್ರಸ್ತುತ ರೋಗಗಳು ಜಾಸ್ತಿ ಆಗುತ್ತಿವೆ. ಈ ಸವಾಲನ್ನು ಸ್ವೀಕರಿಸಿ, ಸಮುದಾಯದ ಆರೋಗ್ಯ ಕಾಪಾಡುವ ಮತ್ತು ಸುಧಾರಿಸುವ ಕೆಲಸವನ್ನು ಆರೋಗ್ಯ ಇಲಾಖೆ ಮಾಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಅಖಿಲ ಕರ್ನಾಟಕ ರಾಜ್ಯ ಸಮುದಾಯ ಆರೋಗ್ಯ (ಎನ್‌ಎಚ್‌ಎಂ) ಗುತ್ತಿಗೆ ನೌಕರರ ಸಂಘದಿಂದ ಇಲ್ಲಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶನಿವಾರ ಆಯೋಜಿಸಿದ್ದ 'ಪ್ರಥಮ ರಾಜ್ಯಮಟ್ಟದ ಸಮುದಾಯ ಆರೋಗ್ಯ ಅಧಿಕಾರಿಗಳ ಸಂರಕ್ಷಣಾ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು. ರಾಜ್ಯದಲ್ಲಿ 7 ಕೋಟಿ ಜನಸಂಖ್ಯೆ ಇದೆ. ಅವರ ಆರೋಗ್ಯ ರಕ್ಷಣೆಗೆ ಹೆಚ್ಚು ಮುತುವರ್ಜಿಯಿಂದ ಕೆಲಸ ಮಾಡಿದರೆ ಸಿಎಚ್‌ಒ ಸೇರಿದಂತೆ ಎಲ್ಲಾ ನೌಕರರನ್ನೂ ಚೆನ್ನಾಗಿ ನೋಡಿಕೊಳ್ಳುತ್ತೇವೆ' ಎಂದು ತಿಳಿಸಿದರು.

ಆರೋಗ್ಯದ ಬಗ್ಗೆ ಗಮನ ಕೊಡುವಂತೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಎಲ್ಲಾ ಸಿಬ್ಬಂದಿಯೂ ಮಾಡಬೇಕು. ಬಹಳಷ್ಟು ಜನ ಬಡವರು ಚಿಕಿತ್ಸೆಗೆಂದು ಸರ್ಕಾರಿ ಆಸ್ಪತ್ರೆಗಳಿಗೆ ಬರುತ್ತಾರೆ. ಅವರಿಗೆ ಸೂಕ್ತ ಚಿಕಿತ್ಸೆ ನೀಡಿ ಆರೋಗ್ಯ ರಕ್ಷಣೆ



ಉದಯವಾಹಿನಿ ಚಿತ್ರ

**'ಆಯುಷ್ಮಾನ್ ಆರೋಗ್ಯ ಮಂದಿರಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಲಾಗುವುದು. ಮೈಸೂರು ಜಿಲ್ಲೆಯಲ್ಲಿ 235 ಕೇಂದ್ರಗಳು ಬಾಡಿಗೆ ಕಟ್ಟಡಗಳಲ್ಲಿವೆ. ಮೊದಲಿಗೆ 58 ಸ್ವಂತ ಕಟ್ಟಡ ನಿರ್ಮಿಸಲಾಗುವುದು' ಎಂದು ತಿಳಿಸಿದರು. ನಿಧನರಾದ 25 ಮಂದಿ ಸಿಎಚ್‌ಒಗಳಿಗೆ ಸಂತಾಪ ಸೂಚಿಸಲಾಯಿತು. ಟಿಯುಸಿಐ ಉಪಾಧ್ಯಕ್ಷ ಎಂ. ಗಂಗಾಧರ್ ಸಿಚ್‌ಒಗಳ ಉದ್ಯೋಗ ಭದ್ರತೆಗೆ ಹಕ್ಕೊತ್ತಾಯಗಳನ್ನು ಮಂಡಿಸಿದರು.**

ಮಾಡುವುದು ನಮ್ಮ ಜವಾಬ್ದಾರಿ' ಎಂದರು.

ಬಹಳಷ್ಟು ಜನ ಖಾಸಗಿ ಆಸ್ಪತ್ರೆಗೆ ಹೋಗಲು ಸಾಧ್ಯವಾಗುವುದಿಲ್ಲ. ಹೀಗಾಗಿ ಸರ್ಕಾರಿ ಆಸ್ಪತ್ರೆಗೆ ಬರುತ್ತಾರೆ. ಹೀಗಾಗಿ, ಅಲ್ಲಿನವರು

### ಸಿಎಚ್‌ಒಗಳದ್ದು ಅವಶ್ಯವಾದ ಸೇವೆ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, 'ಸಿಎಚ್‌ಗಳದ್ದು ಅವಶ್ಯ ಸೇವೆಯಾಗಿದೆ. ಅವರು ಇಲಾಖೆಯ ಪ್ರಮುಖ ಅಂಗವೂ ಹೌದು. ಗ್ರಾಮೀಣ ಮಟ್ಟದಲ್ಲಿ ಯೋಜನೆಗಳನ್ನು ಜನರ ಮನೆಗಳಿಗೆ ತಲುಪಿಸುವ ಕಾರ್ಯವನ್ನು ಅವರು ಮಾಡುತ್ತಿದ್ದಾರೆ. ಅವರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇದೆ' ಎಂದು ತಿಳಿಸಿದರು.

ಹೆಚ್ಚಿನ ಜವಾಬ್ದಾರಿಯಿಂದ ಕೆಲಸ ಮಾಡಬೇಕು' ಎಂದು ಸೂಚಿಸಿದರು. 'ನಾನು ಆಸ್ಪತ್ರೆಗೇ ಹೋಗಿಲ್ಲ ಎಂದು ನಮ್ಮ ತಾತಂದಿರು ಹೇಳುತ್ತಿದ್ದರು. ಆಗ ಅವರಿಗೆ ಉತ್ತಮ ಆಹಾರ ಸಿಗುತ್ತಿತ್ತು. ಅವರು ಶ್ರಮದ ಕೆಲಸವನ್ನೂ ಮಾಡುತ್ತಿದ್ದರು. ಈಗ ಎಲ್ಲರಿಗೂ ಪೌಷ್ಟಿಕ ಹಾಗೂ ಆರೋಗ್ಯಕರ ಆಹಾರ ಸಿಕ್ಕುತ್ತಿಲ್ಲ. ಆಹಾರ ಭದ್ರತೆಯನ್ನು ಕಲ್ಪಿಸುವುದಕ್ಕಾಗಿ ರಾಸಾಯನಿಕ ಗೊಬ್ಬರವನ್ನು ಹೆಚ್ಚಿನ ಪ್ರಮಾಣದಲ್ಲಿ ಹಾಕಿ ಬೆಳೆ ಬೆಳೆಯುತ್ತಿರುವುದರಿಂದ ಆಹಾರದ ಗುಣಮಟ್ಟ ಕುಸಿಯುತ್ತಿದೆ' ಎಂದರು. 'ಯಾವುದೇ ರಾಜ್ಯದ ನೈಜ ಅಭಿವೃದ್ಧಿಯನ್ನು ನೋಡಬೇಕಾದರೆ ಅಲ್ಲಿನ ಆರೋಗ್ಯ ವ್ಯವಸ್ಥೆ ಹೇಗಿದೆ ಎಂಬುದು ಸೂಚ್ಯಂಕವಾಗಿದೆ. ಹೀಗಾಗಿ ನಮ್ಮ ಸರ್ಕಾರ ಆರೋಗ್ಯ ಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಗಮನ ಕೊಟ್ಟಿದೆ. ಜನರ ಮನೆ ಬಾಗಿಲಿಗೆ ಆರೋಗ್ಯ ಸೇವೆ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

**ಉದ್ಯೋಗ ಭದ್ರತೆಗೆ ಹಕ್ಕೊತ್ತಾಯ**

**ಔಷಧ ಹಾಗೂ ಚಿಕಿತ್ಸೆಯನ್ನು ಜನರ ಮನೆಗಳಿಗೆ ತಲುಪಿಸಲು ಸಿಎಚ್‌ಒಗಳ ಜವಾಬ್ದಾರಿ ದೊಡ್ಡದಿದೆ. ನಿಮ್ಮ ಬೇಡಿಕೆಗಳ ಈಡೇರಿಕೆಗೆ ಕ್ರಮ ಕೈಗೊಳ್ಳಲಾಗುವುದು. ಕಾಯಂಗೊಳಿಸುವುದು ಕಷ್ಟ. ಸುಮ್ಮನೆ ಭರವಸೆ ನೀಡಿ ಚಪ್ಪಾಳೆ ಗಿಟ್ಟಿಸಿಕೊಳ್ಳುವುದರಿಂದ ಪ್ರಯೋಜನ ಆಗುವುದಿಲ್ಲ' ಎಂದರು.**

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಶಾಸಕ ಕೆ.ಹರೀಶ್ ಗೌಡ, ವಿಧಾನಪರಿಷತ್ ಸದಸ್ಯರಾದ ಡಾ.ಡಿ. ತಿಮ್ಮಯ್ಯ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ನಾಗರಾಜ್, ಆರ್‌ಸಿಎಚ್ ಡಾ.ಸಿರಾಜ್ ಅಹಮದ್ ಪಾಲ್ಗೊಂಡಿದ್ದರು.

# ಧರ್ಮಸ್ಥಳ ಸಂಸ್ಥೆ ವತಿಯಿಂದ ತಾಲ್ಲೂಕಿನ ವಿವಿಧ ಸಂಸ್ಥೆಗಳಿಗೆ ಸಹಾಯಧನ ವಿತರಣೆ

• **ಉದಯವಾಹಿನಿ ರಾಮನಗರ,**

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ ರಾಮನಗರ ತಾಲ್ಲೂಕು ವತಿಯಿಂದ ಯೋಜನಾ ವ್ಯಾಪ್ತಿಯ ವಿವಿದ ಸಂಸ್ಥೆಗಳಿಗೆ ಸಹಾಯಧನ ನೀಡಲಾಯಿತು.

ಸಂಘಬಸವನದೊಡ್ಡಿ ಗ್ರಾಮದ ಆಂಜನೇಯ ಸ್ವಾಮಿ ಹಾಗು ಬಸವೇಶ್ವರ ದೇವಸ್ಥಾನದ ಜೀರ್ಣೋದ್ಧಾರಕ್ಕೆ 2.5 ಲಕ್ಷ, ಬಿಡದಿ ಹೋಬಳಿಯ ಅರಳಾಳುಸಂದ್ರ ಹಾಲು ಉತ್ಪಾದಕರ ಸಹಕಾರಿ ಸಂಘದ ವಿಸ್ತರಣಾ ಕಟ್ಟಡದ ನಿರ್ಮಾಣಕ್ಕೆ 1ಲಕ್ಷ, ಗಂಗಸಂದ್ರ ಸ್ವಾಮಿ ವಿವೇಕಾನಂದ ಸೇವಾ ಟ್ರಸ್ಟ್‌ನ ಅನಾಥ ಮಕ್ಕಳ ಆಶ್ರಮ ನಿರ್ವಹಣೆಗೆ 1ಲಕ್ಷ, ನಾಗರಬಾವಿ ಕಲ್ಪವೃಕ್ಷ ಅನಾಥ ಮಕ್ಕಳ ಆಶ್ರಮದ ನಿರ್ವಹಣೆಗೆ 2 ಲಕ್ಷ ಸೇರಿದಂತೆ ಒಟ್ಟು 6.5 ಲಕ್ಷ ಮೊತ್ತದ ಅನುದಾನವನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಮುದಾಯ ಅಭಿವೃದ್ಧಿ ವಿಭಾಗದ ವತಿಯಿಂದ ವಿತರಿಸಲಾಯಿತು.

ಸಹಾಯಧನವನ್ನು ವಿತರಿಸಿದ ಜಿಲ್ಲಾ ನಿರ್ದೇಶಕ ಜಯಕರ್ ಶೆಟ್ಟಿ ಮಾತನಾಡಿ, ಶ್ರೀ ಕ್ಷೇತ್ರ ದಿಂದ ಸಮಾಜಮುಖಿ ಕೆಲಸಗಳು ಕಳೆದ 44 ವರ್ಷಗಳಿಂದ ರಾಜ್ಯದಂತ


ಉದಯವಾಹಿನಿ ಚಿತ್ರ

**ಗ್ರಾಮಾಭಿವೃದ್ಧಿ ಯೋಜನೆ ಸಮುದಾಯ ಅಭಿವೃದ್ಧಿ**

ನಡೆಯುತ್ತಿದೆ. ಯೋಜನೆ ವತಿಯಿಂದ ಕೆರೆ ಕಾಮಗಾರಿ ಕೆಲಸ, ಬಡವರಿಗೆ ಮನೆ ನಿರ್ಮಾಣ ರಚನೆ, ನಿರ್ಗತಿಕರಿಗೆ ಮಾಸಾಶನ ವಿತರಣೆ, ಸುಜ್ಞಾನ ನಿಧಿ ಶಿಷ್ಯಯ ವೇತನ, ಜ್ಞಾನ ದೀಪ ಶಿಕ್ಷಕರ ಆಯ್ಕೆ, ಶಾಲೆಗಳಿಗೆ ಬೆಂಚ್ ಡೆಸ್ಕ್ ವಿತರಣೆ, ಜನಮಂಗಳ ಕಾರ್ಯ ಕ್ರಮ,

ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಸಹಾಯ ಧನ ವಿತರಣೆ, ಹಾಲು ಉತ್ಪಾದಕರ ಸಹಕಾರ ಕಟ್ಟಡ ನಿರ್ಮಾಣಕ್ಕೆ ಅನುದಾನ, ಸಮುದಾಯ ಭವನ ರಚನೆ, ಹಿಂದುರುದ್ರಭೂಮಿ ನಿರ್ಮಾಣಕ್ಕೆ ಸಹಾಯಧನ ವಿತರಣೆ ಸೇರಿದಂತೆ 53 ರೀತಿಯ ಕಾರ್ಯ ಕ್ರಮಗಳಿಗೆ ವೀರೇಂದ್ರ ಹೆಗ್ಗಡೆಯವರು ಸಮಾಜಕ್ಕೆ ಉತ್ತಮ ಕೊಡುಗೆಗಳನ್ನು ನೀಡಿರುತ್ತಾರೆ ಎಂದು ತಿಳಿಸಿದರು.

**ಮುಖ್ಯ ಅಥಿತಿಗಳಾಗಿ ಆಗಮಿಸಿದ್ದ ಮಾಯಗಾನಹಳ್ಳಿ ಗ್ರಾಮ ಪಂಚಾಯತ್ ಅಧ್ಯಕ್ಷೆ ಗೀತಾ ಮಾತನಾಡಿ, ಧರ್ಮಸ್ಥಳ ಸಂಘದ ವತಿಯಿಂದ ಗ್ರಾಮಕ್ಕೆ ಹಲವಾರು ಪ್ರಯೋಜನ ಗಳಾಗಿದ್ದು ಇದೆ ವರ್ಷ ನಮ್ಮ ಪಂಚಾಯತ್ ವ್ಯಾಪ್ತಿಯ 2 ಹಾಲು ಉತ್ಪಾದಕರ ಸಹಕಾರಿ ಸಂಘದ ಕಟ್ಟದ ನಿರ್ಮಾಣಕ್ಕೆ ಅನುದಾನ ಬಂದಿದೆ, ಸಮುದಾಯ ಭವನಕ್ಕೆ 2.5 ಲಕ್ಷ ಅನುದಾನ ಬಂದಿದೆ. ಇದರ ಜೊತೆಗೆ ಈ ದಿನ ದೇವಸ್ಥಾನದ ನಿರ್ಮಾಣಕ್ಕೆ ಅನುದಾನ ಬಂದಿರುವುದು ಸಂತೋಷವನ್ನು ತಂದಿದ್ದೆ ಎಂದು ಹೇಳಿದರು.**

ಈ ಸಂದರ್ಭ ಅರಳಾಳುಸಂದ್ರ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ನಾಗಪ್ಪ, ಸೋಮಶೇಖರ್, ಸ್ವಾಮಿ ವಿವೇಕಾನಂದ ಟ್ರಸ್ಟ್ ಅಧ್ಯಕ್ಷರಾದ ರಾಜಶೇಖರ್, ಅಣ್ಣಯ್ಯ, ರಾಮಯ್ಯ, ವೀರಭದ್ರಸ್ವಾಮಿ, ಶಾಂತಯ್ಯ ಗುರು ಸ್ವಾಮಿ, ಮೇಲ್ವಿಚಾರಕರಾದ ರಮೇಶ್, ದೀಪಕ್, ಆಕಾಶ್ ಉಪಸ್ಥಿತರಿದ್ದರು.

# ಐಶ್ವರ್ಯಗೌಡ ಪ್ರಕರಣದಲ್ಲಿ ಹಲವು ಮಂದಿ ಕಾಂಗ್ರೇಸ್ ನಾಯಕರ ಹೆಸರು

• **ಉದಯವಾಹಿನಿ ಮಳವಳ್ಳಿ**

ವಂಚನೆ ಪ್ರಕರಣದ ಆರೋಪಿ ಐಶ್ವರ್ಯ ಗೌಡ ವಿನಾಕರಣ ಮಾಜಿ ಶಾಸಕ ಕೆ.ಅನ್ನದಾನಿ ವಿರುದ್ಧ ಆರೋಪ ಮಾಡುತ್ತಿರುವುದು ಸರಿಯಲ್ಲ, ಪ್ರಕರಣದ ದಿಕ್ಕುತಪ್ಪಿಸಲು ಇಂಥ ಹೇಳಿಕೆ ನೀಡುತ್ತಿದ್ದಾರೆ' ಎಂದು ಜೆಡಿಎಸ್ ಎಸ್ ಸಿ, ಎಸ್ ಟಿ ವಿಭಾಗದ ತಾಲ್ಲೂಕು ಘಟಕದ ಅಧ್ಯಕ್ಷ ಬಿ.ಎಂ.ಕಾಂತರಾಜು ಆರೋಪಿಸಿದರು.



'ಹಲವು ಜನರಿಗೆ ಹಣ ಮತ್ತು ಚಿನ್ನ ವಂಚಿಸಿರುವ ಆರೋಪ ಹೊತ್ತಿರುವ ನವ್ಯಶ್ರೀ ಅಲಿಯಾಸ್ ಐಶ್ವರ್ಯಗೌಡ ಅವರ ಪ್ರಕರಣದಲ್ಲಿ ಹಲವು ಮಂದಿ ಕಾಂಗ್ರೇಸ್ ನಾಯಕರ ಹೆಸರು ಮಾಧ್ಯಮಗಳಲ್ಲಿ ಕೇಳಿ ಬಂದಿತ್ತು. ಈ ಬಗ್ಗೆ ಸಿಬಿಐ ತನಿಖೆ ನಡೆಸುವಂತೆ ಮಾಜಿ ಶಾಸಕ ಕೆ.ಅನ್ನದಾನಿ ಆಗ್ರಹಿಸಿದ. ಆದರೆ ಇತ್ತೀಚಿಗೆ ಆರೋಪಿ ಮಾಧ್ಯಮದವರೊಂದಿಗೆ ಮಾತಾಡುವ ವೇಳೆ ನನಗೂ ಕೆ.ಅನ್ನದಾನಿ ಅವರಿಗೂ ವ್ಯವಹಾರಿಕ ಸಂಬಂಧ ಇದೆ ಎಂಬ ಆರೋಪ ಮಾಡಿರುವುದು ಸರಿಯಲ್ಲ' ಎಂದು ಇಲ್ಲಿ ಸುದ್ದಿಗೋಷ್ಠಿ ನಡೆಸಿ ಶನಿವಾರ ಕಿಡಿಕಾರಿದರು.

2012ರಲ್ಲಿ ನಮ್ಮ ಪಕ್ಷದ ಮುಖಂಡರಾಗಿದ್ದ ಐಶ್ವರ್ಯ ಗೌಡರ ಸೋದರ ಮಾವನ ಆಹ್ವಾನದ ಮೇರೆಗೆ ಅನ್ನದಾನಿ ಮದುವೆ ಹೋಗಿದ್ದರು.

ಕೆ.ಅನ್ನದಾನಿ ಅವರಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ, ದಾಖಲೆಗ ಳಿದ್ದರೆ ಬಹಿರಂಗ ಪಡಿಸಲಿ. ಇಲ್ಲದಿದ್ದರೆ ಕಾನೂನು ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಪುರಸಭೆ ಉಪಾಧ್ಯಕ್ಷ ಎನ್.ಬಸವರಾಜು, ಜೆಡಿಎಸ್ ಮಹಿಳಾ ತಾಲ್ಲೂಕು ಘಟಕದ ಕಾರ್ಯದರ್ಶಿ ಅನಿತಾ, ಮುಖಂಡರಾದ ಹನುಮಂತು, ಮಲ್ಲೇಶ್, ಕುಮಾರ್, ಚೇತನ್, ನಾರಾಯಣ ಪಾಲ್ಗೊಂಡಿದ್ದರು.

# ರೈತರಿಗೆ ತಾಳೆ ಇದ್ದರೆ ತಾಳೆ ಬಂಗಾರದ ಬೆಳೆ

• **ಉದಯವಾಹಿನಿ ಯಳಂದೂರು**

ತಾಲ್ಲೂಕಿನ ಬಿಳಿಗಿರಿರಂಗನ ಬೆಟ್ಟದಲ್ಲಿ ವಾಣಿಜ್ಯ ಬೆಳೆಗಳಾಗಿರುವ ಕಾಫಿ, ಕಾಳುಮೆಣಸು ಜೊತೆ ಈಗ ತಾಳೆಯೂ ಸೇರಿದೆ. ಸೋಲಿಗ ಸಾಗುವಳಿದಾರರು ಕಾನನದ ನಡುವೆ ತಾಳೆ ಬೇಸಾಯಕ್ಕೂ ಮನ್ನಣೆ ನೀಡಿದ್ದಾರೆ. ನಿಯಮಿತವಾಗಿ ಕೊಯ್ಲಿಗೆ ಬರುತ್ತಿರುವ ತಾಳೆ ಬೆಳೆ ಸೋಲಿಗರ ವರಮಾನಕ್ಕೂ ಕಾರಣವಾಗಿದೆ.

ಬುಡಕಟ್ಟು ಹಿಡುವಳಿದಾರರು ಹೆಚ್ಚಾಗಿ ಹಣ್ಣಿನ ಬೆಳೆ, ಏಲಕ್ಕಿ ಮತ್ತಿತರ ವಾಣಿಜ್ಯ ಬೆಳೆಗಳ ಕೃಷಿಯನ್ನು ನಂಬಿದ್ದರು. ಹೊಸ ತಲೆಮಾರಿನ ಯುವಕರು ತಾಳ ನಾಟಿ ಪ್ರಯೋಗಕ್ಕೆ ಮುಂದಾಗಿದ್ದು ಹೊಸ ಬೆಳೆ ಪದ್ಧತಿ ಸ್ಥಳೀಯರ ಬದುಕನ್ನು ಕಳೆಗಟ್ಟುವಂತೆ ಮಾಡುತ್ತಿದೆ. ಪ್ರತಿ ಮಾಸವೂ ಬೆಳೆ ಕಟಾವಿಗೆ ಬರುತ್ತಿದ್ದು, ಸಾಗಣೆ ವೆಚ್ಚ ಮತ್ತು ನಿರ್ವಹಣೆ ವೆಚ್ಚದ ಆತಂಕ ಇಲ್ಲದೆ ತಾಳೆ ಬೆಳೆ ತೆಗೆಯಲಾಗುತ್ತಿದೆ.

5 ಎಕರೆ ತೋಟ ಇದ್ದು ಕಾಫಿಯ ಜೊತೆ ತಾಳೆ ಬೆಳೆಗೂ ಆದ್ಯತೆ ನೀಡಲಾಗಿದ್ದು ಎರಡೂವರೆ ಎಕರೆಯಲ್ಲಿ 160 ತಾಳೆ ಗಿಡಗಳನ್ನು ನೆಟ್ಟಿದ್ದು ಸಮೃದ್ಧವಾಗಿ ಬೆಳೆದಿವೆ. ನಾಟಿ ಮಾಡಿದ ಮೂರೂವರೆ ವರ್ಷದಿಂದ ಫಸಲು ಆರಂಭವಾಗಿದ್ದು ವಾರ್ಷಿಕವಾಗಿ ಒಂದು ಎಕರೆಯಲ್ಲಿ 8 ರಿಂದ 10 ಟನ್ ಇಳುವರಿ ಸಿಗುತ್ತಿದೆ. ತಾಳ ವರ್ಷಪೂರ್ತಿ ಫಲ ಬಿಡುವುದರಿಂದ ಪ್ರತಿ ತಿಂಗಳು ಕೊಯ್ದು ಸಿಗುತ್ತಿದೆ ಎನ್ನುತ್ತಾರೆ ಕೃಷಿಕರಾದ ಸೋಲಿಗ ಸಮುದಾಯದ ಗೋವಿಂದ.ತಾಳೆ ಕೃಷಿಗೆ ಹೆಚ್ಚು ವೆಚ್ಚ ತಗುಲುವುದಿಲ್ಲ. ನಿರ್ವಹಣೆಯೂ ಸುಲಭ. ರೋಗ, ಕೀಟ ಬಾಧೆಯೂ ಕಾಡದು. ಸರ್ಕಾರದ ಸಹಾಯಧನದಡಿ ನಾಟಿಗೆ


ಉದಯವಾಹಿನಿ ಚಿತ್ರ

ಅಗತ್ಯ ಸಸ್ಯ, ನಿರ್ವಹಣಾ ವೆಚ್ಚ, ಕೊಳವೆ ಬಾಯಿ ಸೌಲಭ್ಯ ಸಿಗುತ್ತದೆ. ಹನಿ ನೀರಾವರಿ ಮತ್ತು ಎರೆ ತೊಟ್ಟಿ ಘಟಕವನ್ನು ಕೂಡ ಅಳವಡಿಕೊಳ್ಳಬಹುದು ಎನ್ನುತ್ತಾರೆ ಅವರು.ಬಿಳಿಗಿರಿ ಕಾಡುಗಳಲ್ಲಿ ಹಿತಕರವಾದ ಹವಾಮಾನ ಇದ್ದು ಮಣ್ಣಿನ ಗುಣಮಟ್ಟವೂ ಹೆಚ್ಚಾಗಿದೆ. ಹೆಚ್ಚಿನ ಒಳಸುರಿ ಇಲ್ಲದೆ ಬೆಳೆಯಬಹುದಾದ ಹತ್ತಾರು ಬೆಳೆಗಳಿವೆ. ಕಾಫಿ ಮತ್ತು ಮೆಣಸು ನೆಟ್ಟು ಬೆಳೆ ತೆಗೆಯಲು ರಾಸಾಯನಿಕ ಸುರಿಯುವ ಕ್ರಮ ಬದಲಾಗಬೇಕಿದೆ. ತಾಳೆ ನೆಟ್ಟು ಸಾವಯವ ಮಾದರಿಯಲ್ಲಿ ಮೂರು ವರ್ಷ ಬೆಳೆ ನಿರ್ವಹಣೆ ಮಾಡಿದರೆ,ಹತ್ತಾರು ವರ್ಷ ಫಸಲು ತಂದುಕೊಡುತ್ತದೆ ಎನ್ನುತ್ತಾರೆ ಯುವ ರೈತರು.ಈ ಭಾಗದಲ್ಲಿ ತಾಳೆ ಕೃಷಿಕರ ಸಂಖ್ಯೆ ಏರಿಕೆ ಕಾಣುತ್ತಿದ್ದು ಗುಡ್ಡಗಾಡು ಪ್ರದೇಶದ ರೈತರು ತಾಳ ಕೃಷಿಯತ್ತ ಆಸಕ್ತಿ ತೋರುತ್ತಿದ್ದು, ತೋಟಕ್ಕೆ ಬಂದು ಮಾಹಿತಿ ಪಡೆಯುತ್ತಿದ್ದಾರೆ. ಬಯಲು ಪ್ರದೇಶಕ್ಕೆ ಮಿತಿಯಾಗಿದ್ದ ತಾಳ ಈಗ ಬೆಟ್ಟಗಳಲ್ಲೂ ಬೆಳೆಯುತ್ತಿದ್ದು ಮಾರುಕಟ್ಟೆ ತಾಪತ್ರಯ ಇಲ್ಲ ಎನ್ನುತ್ತಾರೆ ಕೃಷಿಕರು.

# ಶಾಲೆ ಗೋಡೆಯ ಮೇಲೆ ಜ್ಞಾನದ ತೋರಣ

• **ಉದಯವಾಹಿನಿ ಕೊಳ್ಳೇಗಾಲ**

ಗೋಡೆಯ ಮೇಲೆ ಜ್ಞಾನದ ಕಿರಣ, ಕೊಠಡಿಯ ತುಂಬೆಲ್ಲ ಕಲಿಕೆಗೆ ಪೂರಕ ವಾತಾವರಣ, ಆಟದ ಜೊತೆಗೆ ಪಾಠ ಕಲಿಕೆಗೆ ಅಗತ್ಯ ಆಟಿಕೆ, ಪೀಠೋಪಕರಣ… ತಾಲ್ಲೂಕಿನ ಶಿವನಸಮುದ್ರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಹೀಗೆ ಒಂದೇ ಕೊಠಡಿಯಲ್ಲಿ ಜ್ಞಾನ ಭಂಡಾರವನ್ನು ನಿರ್ಮಾಣ ಮಾಡಲಾಗಿದೆ.

ಖಾಸಗಿ ಶಾಲೆಗಳಿಗೆ ಕಡಿಮೆ ಇಲ್ಲದಂತೆ ಶಿವನಸಮುದ್ರ ಸರ್ಕಾರಿ ಶಾಲೆಯಲ್ಲಿ ಕಲಿಕೆಗೆ ಅಗತ್ಯ ವಾತಾವರಣ ಕಲ್ಪಿಸಲಾಗಿದ್ದು, ತಾಲ್ಲೂಕಿಗೆ ಮಾದರಿಯಾಗಿದೆ. ಸರ್ಕಾರಿ ಶಾಲೆಯಲ್ಲೂ ಮಕ್ಕಳ ಕಲಿಕೆಗೆ ವಿಭಿನ್ನವಾದ ವಾತಾವರಣ ಇರಬೇಕು ಎಂಬ ನಿಟ್ಟಿನಲ್ಲಿ ಪ್ರಯೋಗಗಳನ್ನು ಮಾಡಲಾಗಿದೆ. ಸ್ವಂತ ಖರ್ಚು ಹಾಗೂ ಸರ್ಕಾರದ ನೆರವಿನಿಂದ ಶಿವನಸಮುದ್ರ ಶಾಲೆ ಶಿಕ್ಷಕರು ವಿಭಿನ್ನ ಕಲಿಕಾ ಸಾಮಾಗ್ರಿಗಳನ್ನು ತಯಾರಿಸಿ ಮಕ್ಕಳಿಗೆ ಕಲಿಕೆಗೆ ನೀಡಿದ್ದಾರೆ. ಈ ಮೂಲಕ ಸರ್ಕಾರಿ ಶಾಲೆಗಳತ್ತ ಮಕ್ಕಳನ್ನು ಸೆಳೆಯುವ ಕಿರು ಪ್ರಯತ್ನ ಮಾಡಲಾಗುತ್ತಿದೆ ಎನ್ನುತ್ತಾರೆ ಶಾಲೆಯ ಶಿಕ್ಷಕಿ ದಾಕ್ಷಾಯಿಣಿ.

'ನಲಿ ಕಲಿ' ಕಾರ್ಯಕ್ರಮದ ಜೊತೆಗೆ 'ನೋಡಿ ಕಲಿ ಮಾಡಿ ನಲಿ' ಮಾತಿನಂತೆ ಮಕ್ಕಳ ಸಂತಸದ


ಉದಯವಾಹಿನಿ ಚಿತ್ರ

ಕಲಿಕೆಗೆ, ವೇಗದ ಕಲಿಕೆ, ಸ್ವಕಲಿಕೆ ಒತ್ತು ನೀಡಿದ್ದಾರೆ.

ಖುಷಿಯಿಂದ ಕಲಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಎನ್ನುತ್ತಾರೆ ದಾಕ್ಷಾಯಿಣಿ. ತಾಲ್ಲೂಕಿನ ಸುಪ್ರಸಿದ್ಧ ಭರಚುಕ್ಕಿ ಜಲಪಾತದ ಸಮೀಪವಿರುವ ಶಿವನಸಮುದ್ರ ಸರ್ಕಾರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯುವ ಮಕ್ಕಳು ಸಮೀಪದ ಸತ್ತೇಗಾಲ ಹ್ಯಾಂಡ್ ಪೋಸ್ಟ್ ಬಳಿ ಪ್ರೌಢ ಶಾಲೆ ಹಾಗೂ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಂತರದ ಶಿಕ್ಷಣ ಮುಂದುವರಿಸುತ್ತಿದ್ದಾರೆ.

ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಒಂದರಿಂದ ಐದನೇ ತರಗತಿವರೆಗೆ ವಿದ್ಯಾಭ್ಯಾಸ 48ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದ್ದು ಇಬ್ಬರು ಶಿಕ್ಷಕರು, ಅಡುಗೆ ಸಹಾಯಕರು ಇದ್ದಾರೆ. ಭರಚುಕ್ಕಿ ಮುಸ್ಲಿಮರ ದರ್ಗಾ, ಶಿವನಸಮುದ್ರ ಗ್ರಾಮದ ಮಕ್ಕಳು ಈ ಶಾಲೆಯಲ್ಲಿ ಹೆಚ್ಚಾಗಿ ಕಲಿಯುತ್ತಿದ್ದಾರೆ.

# ಬೆಂಗಳೂರು-ಮೈಸೂರು ಹೆದ್ದಾರಿ; ಜಾಗೃತಿ ಶೀರ್ಷಿಕೆ ಪ್ರದರ್ಶನ

• **ಉದಯವಾಹಿನಿ ರಾಮನಗರ**

ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಬಿಳಿಹದ್ದುಗಳು ಸೇರಿದಂತೆ ಪಕ್ಷಿಗಳು ಅಪಘಾತದಲ್ಲಿ ಬಲಿಯಾಗುತ್ತಿರುವುದನ್ನು ತಡೆಯುವ ನಿಟ್ಟಿನಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೆಲ ಕ್ರಮಗಳನ್ನು ಕೈಗೊಂಡಿದೆ. ಅಪಘಾತದಿಂದಾಗಿ ಹೆದ್ದಾರಿಯಲ್ಲಿ ಪಕ್ಷಿಗಳ ಸಾವು ನಡೆಯುತ್ತಿರುವ ಕುರಿತು 'ಹದ್ದುಗಳ ಮಸಣವಾದ ಹೆದ್ದಾರಿ.

ವಿಶೇಷ ವರದಿಯನ್ನು ಜ.28ರಂದು ಪ್ರಕಟಿಸಿದ ಬೆನ್ನಲ್ಲೇ, ಪ್ರಾಧಿಕಾರ ವಾಹನ ಸವಾರರಲ್ಲಿ ಜಾಗೃತಿ ಮೂಡಿಸುವ ಕೆಲಸಕ್ಕೆ ಮುಂದಾಗಿದೆ. ಹೆದ್ದಾರಿಯು ಸಂಚಾರಕ್ಕೆ ಮುಕ್ತವಾದಾಗಿನಿಂದ ಹದ್ದು, ಕಾಗೆ ಸೇರಿದಂತೆ ಕೆಲ ಪಕ್ಷಿಗಳು ವೇಗವಾಗಿ ಸಂಚರಿಸುವ ವಾಹನಗಳಿಗೆ ಸಿಲುಕಿ ಸಾಯುತ್ತಿದ್ದವು. ಈ ರೀತಿ ತಿಂಗಳಿಗೆ



ಉದಯವಾಹಿನಿ ಚಿತ್ರ

15-20 ಪಕ್ಷಿಗಳು ಬಲಿಯಾಗುತ್ತಿದ್ದವು. ಇದರಲ್ಲಿ ಹದ್ದುಗಳೇ ಹೆಚ್ಚಾಗಿದ್ದವು. ಈ ಕುರಿತು ಬೆಂಗಳೂರಿನ ವಿಜಯನಗರದ ಸಾಫ್ಟ್‌ವೇರ್ ಎಂಜಿನಿಯರ್ ಗೌರಿ ಶಿವಯೋಗಿ ಅಧ್ಯಯನದಲ್ಲಿ ತೊಡಗಿದ್ದಾರೆ.ಜಾಗೃತಿ ಬರಹ: 'ಪ್ರಾಧಿಕಾರ ಹೆದ್ದಾರಿಯುದ್ದಕ್ಕೂ 8 ಕಡೆ ಅಳವಡಿಸಿರುವ ಡಿಜಿಟಲ್ ಡಿಸ್‌ಪ್ಲೇ ಬೋರ್ಡ್‌ಗಳಲ್ಲಿ (ಇಲ್ಲಿಯೂ ನಾವು ಹಾರಾಡುತ್ತಿರುತ್ತೇವೆ, ನಿಧಾನವಾಗಿ ಚಲಿಸಿ) '(ನಾವು ಇಲ್ಲಿ ಆಗಾಗ ಈ ರಸ್ತೆಗೆ ಇಳಿದು ಬಳಿಕ ಟೇಕಾಫ್ ಆಗುತ್ತಿರುತ್ತೇವೆ, ಎಚ್ಚರ ವಹಿಸಿ) ಹಾಗೂ ( ಪಕ್ಷಿ ಸಂತತಿಯನ್ನು ರಕ್ಷಣೆ ಮಾಡಿ, ದಯವಿಟ್ಟು ಎಚ್ಚರಿಕೆಯಿಂದ ವಾಹನ ಚಾಲನೆ ಮಾಡಿ) ಎಂಬ ಜಾಗೃತಿ ಬರಹಗಳನ್ನು ಹದ್ದಿನ ಚಿತ್ರದ ಜೊತೆಗೆ ಪ್ರದರ್ಶಿಸುತ್ತಿದೆ' ಎಂದು ಪ್ರಾಧಿಕಾರದ ಪ್ರಾದೇಶಿಕ ಅಧಿಕಾರಿ ವಿಲಾಸ್ ಪಿ.ಬ್ರಹ್ಮಂಕರ್ ತಿಳಿಸಿದರು.

# ಕೊಡವ ವಿದ್ಯಾರ್ಥಿಗಳಿಗೆ ರೂ.7.70 ಲಕ್ಷ ವಿದ್ಯಾರ್ಥಿ ವೇತನ

• **ಉದಯವಾಹಿನಿ ಗೋಣಿಕೊಪ್ಪಲು**

ಮೈಸೂರಿನ ಕೊಡವ ದೀನ ಬಂಧು ಚಾರಿಟೆಬಲ್ ಟ್ರಸ್ಟ್ ವತಿಯಿಂದ ಗೋಣಿಕೊಪ್ಪಲು ಕಾವೇರಿ ಪದವಿ ಕಾಲೇಜು ಹಾಗೂ ಕಾವೇರಿ ಪದವಿ ಪೂರ್ವ ಕಾಲೇಜಿನ 109, ಲಯನ್ಸ್ ಪದವಿಪೂರ್ವ ಕಾಲೇಜಿನ ಮೂವರು ಹಾಗೂ ಕಾವೇರಿ ಪಾಲಿಟೆಕ್ನಿಕ್ ಕಾಲೇಜಿನ ಒಬ್ಬ ವಿದ್ಯಾರ್ಥಿ ಸೇರಿದಂತೆ ಒಟ್ಟು 113 ಕೊಡವ ಜನಾಂಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಯಿತು.

ಪದವಿ ವಿದ್ಯಾರ್ಥಿಗಳಿಗೆ ತಲಾ 8,000, ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ತಲಾ 5000ದಂತೆ ಒಟ್ಟು 113 ವಿದ್ಯಾರ್ಥಿಗಳಿಗೆ 7.70 ಲಕ್ಷವನ್ನು ವಿತರಿಸಲಾಯಿತು. ಗೋಣಿಕೊಪ್ಪಲು ಕಾವೇರಿ ಕಾಲೇಜಿನ ಸಭಾಂಗಣದಲ್ಲಿ ನಡೆದ ವಿದ್ಯಾರ್ಥಿವೇತನ ವಿತರಣಾ ಕಾರ್ಯಕ್ರಮದಲ್ಲಿ ಕೊಡವ ದೀನ ಬಂಧು ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಕಶ್ಮೀರ ಕಾರ್ಯಪ್ಪ ಮಾತನಾಡಿ, 'ಟ್ರಸ್ಟ್‌ನ ವತಿಯಿಂದ ಕೊಡವ ಜನಾಂಗದಲ್ಲಿ ಪದವಿಪೂರ್ವ, ಪದವಿ, ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ಅಪ್ಪ, ಅಮ್ಮ ಇಲ್ಲದ ವಿದ್ಯಾರ್ಥಿಗಳಿಗೆ, ಒಬ್ಬರೇ ಪೋಷಕರು ಇರುವ ವಿದ್ಯಾರ್ಥಿಗಳಿಗೆ, ಅನಾರೋಗ್ಯಪೀಡಿತ ಪೋಷಕರ ಮಕ್ಕಳಿಗೆ, ಅಂಗವೈಕಲ್ಯ ಇರುವ ಜಿಲ್ಲೆ ವಿದ್ಯಾರ್ಥಿಗಳಿಗೆ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಪ್ರತಿವರ್ಷ ವಿದ್ಯಾರ್ಥಿವೇತನ ನೀಡಲಾಗುತ್ತಿದೆ.

# ಕುಂಭಮೇಳದಲ್ಲಿ ಪ್ರಕಾಶ್ ರೈ ಸ್ನಾನ ಮಾಡುವ ಫೋಟೋ ವೈರಲ್

## ಕುಂಭಮೇಳದ ಪುಣ್ಯ ಸ್ನಾನದಲ್ಲಿ ಕೋಟ್ಯಂತರ ಮಂದಿ ಭಾಗಿಯಾಗಿದ್ದಾರೆ, ಹಿಂದುಗಳಿಗೆ ಇದು ಪವಿತ್ರವಾದ ಸ್ಥಳ

• **ಉದಯವಾಹಿನಿ ಮೈಸೂರು**

ಕುಂಭಮೇಳದಲ್ಲಿ ನಾನು ಸ್ನಾನ ಮಾಡುತ್ತಿರುವ ರೀತಿಯ ಫೋಟೊವನ್ನು ಪ್ರಶಾಂತ್ ಸಂಬರ್ಗಿ ವೈರಲ್ ಮಾಡಿದ್ದು, ಅವರ ವಿರುದ್ಧ ದೂರು ನೀಡಿ ಎಫ್ ಐ ಆರ್ ಮಾಡಿಸಿದ್ದೇನೆ ಎಂದು ಬಹುಭಾಷಾ ನಟ ಪ್ರಕಾಶ್ ರೈ ಹೇಳಿದ್ದಾರೆ.

ಕುಂಭಮೇಳದ ಪುಣ್ಯ ಸ್ನಾನದಲ್ಲಿ ಕೋಟ್ಯಂತರ ಮಂದಿ ಭಾಗಿಯಾಗಿದ್ದಾರೆ. ಹಿಂದುಗಳಿಗೆ ಇದು ಪವಿತ್ರವಾದ ಸ್ಥಳ. ಇಂತಹ ಸ್ಥಳದಲ್ಲಿ ಎಐ ಆಯಪ್ ಬಳಸಿ ಪ್ರಕಾಶ್ ರಾಜ್ ಕುಂಭಮೇಳದಲ್ಲಿ ಸ್ನಾನ ಮಾಡಿದ್ರಾ ಎಂದು ಫೋಟೊ ವೈರಲ್ ಮಾಡುತ್ತಿದ್ದಾರೆ. ಇಂತಹ ಪುಣ್ಯ ಸ್ನಾನ ನಡೆಯಬೇಕಾದರೆ ಅದರಲ್ಲಿ ರಾಜಕಾರಣ ನಡೆಯುತ್ತಿದೆ. ಮೊದಲಿನಿಂದಲೂ ಪ್ರಕಾಶ್ ರಾಜ್ ಹಿಂದು ವಿರೋಧಿ ಎಂದು ಸುಳ್ಳು ಸುದ್ದಿಯನ್ನು ಹಬ್ಬಿಸಿಕೊಂಡು ಬಂದಿದ್ದಾರೆ' ಎಂದು ಆರೋಪಿಸಿದ್ದಾರೆ. ಪ್ರಶಾಂತ್ ಸಂಬರ್ಗಿ ಪ್ರಖ್ಯಾತರೋ


ಉದಯವಾಹಿನಿ ಚಿತ್ರ

**ಪ್ರಶಾಂತ್ ಸಂಬರ್ಗಿ ವಿರುದ್ಧ ಎಫ್‌ಐಆರ್**

ಕುಖ್ಯಾತರೋ ಗೊತ್ತಿಲ್ಲ ನನಗೆ. ಇಂತವರು ದೇಶದಲ್ಲಿ ಸುಳ್ಳು ಸುದ್ದಿಗಳನ್ನು ಹಬ್ಬಿಸುವುದು ಅಭ್ಯಾಸವಾಗಿ ಬಿಟ್ಟಿದೆ. ಇದನ್ನು ಯಾರೂ ಪ್ರಶ್ನೆ ಮಾಡುತ್ತಿಲ್ಲ. ದ್ವೇಷವನ್ನು ಹರಡಿಸುತ್ತಿದ್ದಾರೆ. ಇವರು ನಿಜವಾದ ಧರ್ಮದವರಲ್ಲ. ಜನರ ನಂಬಿಕೆಗೆ ಆಘಾತ ಉಂಟು ಮಾಡುತ್ತಿದ್ದಾರೆ. ನನ್ನ ವಿರುದ್ಧ ಸಾಕಷ್ಟು ವಿಚಾರ ದಲ್ಲಿ ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ಅವರ ಮೇಲೆ ಕೇಸ್ ಹಾಕಿ ಗೆದ್ದಿದ್ದೇನೆ.

ಹೀಗಾಗಿ ನಾನು ಪ್ರಶಾಂತ ಸಂಬರ್ಗಿ ವಿರುದ್ಧ ದೂರು ನೀಡಿ ಎಫ್‌ಐಆರ್ ಮಾಡಿಸಿದ್ದೇನೆ. 15 ದಿನಗಳಲ್ಲಿ ಆ ವ್ಯಕ್ತಿ ಠಾಣೆಗೆ ಬಂದು ಉತ್ತರ ನೀಡಬೇಕು. ಸತ್ಯಾಸತ್ಯತೆ ಎಲ್ಲರಿಗೂ ತಿಳಿಯಬೇಕು. ಫೇಕ್ ನ್ಯೂಸ್ ಸಮಾಜವನ್ನು ಹಾಳು ಮಾಡುತ್ತಿದೆ' ಎಂದು ಮೈಸೂರಿನ ಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ ಬಳಿಕ ನಟ ಪ್ರಕಾಶ್ ರಾಜ್ ಹೇಳಿಕೆ ನೀಡಿದ್ದಾರೆ. ಪ್ರಶಾಂತ್ ಸಂಬರ್ಗಿ ಇದೇ ರೀತಿ ಸಾಕಷ್ಟು ಜನರಿಗೆ ತೊಂದರೆ ಕೊಟ್ಟಿದ್ದಾನೆ. ಹಿಂದೆ ನಟಿಯರಿಗೆ ತೊಂದರೆ ಕೊಟ್ಟಿದ್ದಾನೆ.

ಈ ಮನುಷ್ಯನಿಗೆ ಒಂದು ಪಾಠ ಕಲಿಸಬೇಕು. ತಪ್ಪು ಪ್ರಚಾರ ಮಾಡುವುದು, ಅನುಮತಿ ಇಲ್ಲದೇ ಯಾರ ಫೋಟೊಗಳನ್ನು ಬಳಸಬಾರದು. ಇದು ಅಕ್ಷಮ್ಯ ಅಪರಾಧ. ನ್ಯಾಯದ ಬಗ್ಗೆ ನಿಜವಾದ ಬಗ್ಗೆ ಗಂಭೀರವಾಗಿ ಯೋಚನೆ ಮಾಡುತ್ತಿದ್ದೇನೆ ಎಂದರು. ಸ್ನಾನ ಮಾಡುವುದರಲ್ಲಿ ತಪ್ಪೇನಿದೆ. ಅದು ಅವರವರ ನಂಬಿಕೆ. ನನಗೆ ದೇವರ ಮೇಲೆ ನಂಬಿಕೆ ಇಲ್ಲ. ನನಗೆ ಮನುಷ್ಯರ ಮೇಲೆ ನಂಬಿಕೆ. ದೇವರಿಲ್ಲದೆ ಬದುಕಬಹುದು ಆದರೆ ಮನುಷ್ಯರಿಲ್ಲದೆ ಬದುಕಲು ಸಾಧ್ಯವಿಲ್ಲ. ಹಾಗಂತ ಅವರ ನಂಬಿಕೆಯನ್ನು

**ಕುಂಭಮೇಳದಲ್ಲಿ ಪ್ರಕಾಶ್ ರೈ ಸ್ನಾನ ಮಾಡುತ್ತಿರುವ ರೀತಿಯ ಫೋಟೊ ವೈರಲ್ ಫೋಟೋ ವೈರಲ್ ಮಾಡಿದ ಆರೋಪದಲ್ಲಿ ಪ್ರಶಾಂತ್ ಸಂಬರ್ಗಿ ವಿರುದ್ಧ ಎಫ್‌ಐಆರ್ ದಾಖಲು ಸ್ನಾನ ಮಾಡುವುದರಲ್ಲಿ ತಪ್ಪೇನಿದೆ. ಅದು ಅವರವರ ನಂಬಿಕೆ**

ಪ್ರಶ್ನೆ ಮಾಡುವುದಿಲ್ಲ. ಅದನ್ನು ರಾಜಕಾರಣಕ್ಕೆ ಬಳಸಿಕೊಳ್ಳುವುದು ತಪ್ಪು ಎಂದರು. ಅವರವರ ಭಾವಕ್ಕೆ ಅವರ ಭಕ್ತಿಗೆ ಹೇಳುತ್ತಾ ಹೋಗಲಿ. ನಾನು ಯಾರ ಬಗ್ಗೆಯೂ ಮಾತನಾಡೋದಿಲ್ಲ. ನಾನು ಯಾವ ನಂಬಿಕೆಯ ಬಗ್ಗೆಯೂ ಟೀಕೆ ಮಾಡಲ್ಲ.

ನನ್ನ ಹೆಂಡತಿ ಮಗಳು ದೇವಸ್ಥಾನಕ್ಕೆ ಹೋಗಿ ಹೋಮ ಮಾಡುತ್ತಾರೆ. ಆದರೆ ಇಬ್ಬರು ಸಾಮರಸ್ಯದಿಂದ ಇದ್ದೇವೆ. ಮೂಢನಂಬಿಕೆಯನ್ನು ಮಾತ್ರ ಪ್ರಶ್ನೆ ಮಾಡುತ್ತೇನೆ. ನಾನು ಕ್ರಿಶ್ಚಿಯನ್ ಗಿಂತ ದೊಡ್ಡ ಮಾಫಿಯಾ ಇನ್ನೊಂದು ಇಲ್ಲ. ಮುಸ್ಲಿಮರಲ್ಲಿ ದೊಡ್ಡ

**ಮಾತನಾಡುವಾಗಲೆಲ್ಲಾ ಹಿಂದು ಧರ್ಮ, ಹಿಂದು ಧರ್ಮದ ನಂಬಿಕೆಗಳು, ಆಚರಣೆಗಳ ಬಗ್ಗೆ ವಿವಾದಾತ್ಮಕ ಹೇಳಿಕೆಗಳನ್ನು ಕೊಡುತ್ತಾ ಆಕ್ರೋಶಕ್ಕೆ ಗುರಿಯಾಗುವ ಬಹುಭಾಷಾ ನಟ ಪ್ರಕಾಶ್ ರೈ ಕುಂಭಮೇಳದಲ್ಲಿ ಸ್ನಾನ ಮಾಡುತ್ತಿರುವ ಫೋಟೋವೊಂದು ವೈರಲ್ ಆಗಿದೆ. ಈ ಫೋಟೋವನ್ನು ಪ್ರಶಾಂತ್ ಸಂಬರ್ಗಿ ವೈರಲ್ ಮಾಡಿದ್ದು, ಅವರ ವಿರುದ್ಧ ಎಫ್‌ಐಆರ್ ದಾಖಲು ಮಾಡಿಸಿದ್ದೇನೆ ಎಂದು ನಟ ಪ್ರಕಾಶ್ ರೈ ಹೇಳಿದ್ದಾರೆ.**

ಟೆರರಿಸ್ಟ್‌ಗಳು ಇದ್ದಾರೆ ಎಂದು ಹೇಳಿದ್ದೇನೆ. ಅದು ಹೈಲೈಟ್ ಆಗಲಿಲ್ಲ. ನಾನು ಯಾವತ್ತಾದರೂ ಧರ್ಮದ ಬಗ್ಗೆ ಮಾತನಾಡಿದ್ದೀನಾ? ಧರ್ಮ ಧರ್ಮದ ಮೇಲೆ ಎತ್ತಿ ಕಟ್ಟುವ ಕೆಲಸ ಮಾಡುತ್ತಿದ್ದಾರೆ. ಇದೇ ಅವರ ಕೆಲಸ ಎಂದರು.



## ಮಿನಿ ನ್ಯೂಸ್

### ಮೊಬೈಲ್‌ನಲ್ಲಿ ರೀಲ್ಸ್ ನೋಡ್ತಾ ಬಸ್ ಚಾಲನೆ: ಚಾಲಕ ಅಮಾನತು

• **ಉದಯವಾಹಿನಿ ಕೋಲಾರ**

ಮೊಬೈಲ್‌ನಲ್ಲಿ ರೀಲ್ಸ್ ನೋಡುತ್ತಾ ಸರ್ಕಾರಿ ಬಸ್ ಚಾಲನೆ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಸ್ ಚಾಲಕನನ್ನು ಸಾರಿಗೆ ಸಂಸ್ಥೆ ಅಮಾನತು ಮಾಡಿದೆ. ಕೋಲಾರ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಾಥ್ ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ.

ಶ್ರೀನಿವಾಸ್ ಅಮಾನತ್ತಾದ ಸರ್ಕಾರಿ ಬಸ್ ಚಾಲಕ. ಈತ ಈ ಹಿಂದೆಯೂ ಹಲವು ಬಾರಿ ಬಸ್ ಚಾಲನೆ ಮಾಡುತ್ತಾ ಮೊಬೈಲ್ ನೋಡುತ್ತಿದ್ದ ದೂರುಗಳು ಸಹ ಬಂದಿದ್ದವು. ಅಲ್ಲದೆ ಪಬ್ಲಿಕ್ ಟಿವಿ ಚಾಲಕನ ನಿರ್ಲಕ್ಷ್ಯದ ಕುರಿತು ಜ.28ರಂದು ವರದಿ ಬಿತ್ತರಿಸಿತ್ತು.

ಬಸ್ ಚಾಲಕ ಶ್ರೀನಿವಾಸ್‌ಗೆ ಸಹನಿರ್ವಾಹಕರು ಕೂಡಾ ಹಲವು ಬಾರಿ ಮೊಬೈಲ್ ವೀಕ್ಷಿಸುತ್ತಾ ಬಸ್ ಚಾಲನೆ ಮಾಡದಂತೆ ಸಲಹೆ ನೀಡಿದ್ದರು. ಆದರೆ ಆತ ತನ್ನ ಹಳೆ ಚಾಳಿಯನ್ನು ಮುಂದುವರಿಸಿದ್ದು, ಬಸ್ ಚಾಲಕನ ನಿರ್ಲಕ್ಷ್ಯ ಕುರಿತು ವಿಡಿಯೋ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದ ಪ್ರಯಾಣಿಕರು ಇಂತಹ ಚಾಲಕರಿಗೆ ಶಿಕ್ಷೆಯಾಗಬೇಕು ಎಂದು ಒತ್ತಾಯ ಮಾಡಿದ್ದರು.ಹತ್ತಾರು ಪ್ರಯಾಣಿಕರ ಜೀವ ಕೈಲಿಟ್ಟುಕೊಂಡು ಮೊಬೈಲ್ ನೋಡುತ್ತಾ ನಿರ್ಲಕ್ಷ್ಯದಿಂದ ಬಸ್ ಚಾಲನೆ ಮಾಡಿದ್ದ ಕೋಲಾರದಿಂದ ಪಾವಗಡ ಮಾರ್ಗದ ಸರ್ಕಾರಿ ಬಸ್ ಚಾಲಕನನ್ನ ಸದ್ಯ ಅಮಾನತು ಮಾಡಲಾಗಿದೆ.

### ಮೈಕ್ರೋ ಫೈನಾನ್ಸ್ ಕಿರುಕುಳ ತಾಯಿ ಆತ್ಮಹತ್ಯೆ ಬೆನ್ನಲ್ಲೇ ಮಗನೂ ಸೂಸೈಡ್

• **ಉದಯವಾಹಿನಿ ಮಂಡ್ಯ**

ಮೈಕ್ರೋ ಫೈನಾನ್ಸ್ ಕಿರುಕುಳದಿಂದಾಗಿ ತಾಯಿ ಆತ್ಮಹತ್ಯೆ ಬೆನ್ನಲ್ಲೇ ಮಗನೂ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಕೊನ್ನಾಪುರ ಗ್ರಾಮದಲ್ಲಿ ನಡೆದಿದೆ.ಮೃತನನ್ನು ರಂಜಿತ್ (31) ಎಂದು ಗುರುತಿಸಲಾಗಿದೆ. ಮೈಕ್ರೋ ಫೈನಾನ್ಸ್‌ನವರು ಮನೆಯನ್ನು ಸೀಜ್ ಮಾಡಿದ್ದರು. ಇದರಿಂದ ಮನನೊಂದು ನಾಲ್ಕು ದಿನದ ಹಿಂದೆ ಕ್ರಿಮಿನಾಶಕ ಮಾತ್ರೆ ಸೇವಿಸಿ ಪ್ರೇಮ ಆತ್ಮಹತ್ಯೆ ಮಾಡಿಕೊಂಡಿದ್ದರು. ತಾಯಿಯ ಸಾವಿನಿಂದಾಗಿ ಮನನೊಂದು ಅನಾರೋಗ್ಯಕ್ಕೆ ತುತ್ತಾಗಿ ಅಂಗವೈಕಲ್ಯದಿಂದ ಬಳಲುತ್ತಿದ್ದರು.

ಮುಂದೆ ಜೀವನ ಹೇಗೆ ಎಂದು ತಿಳಿಯದೇ ಹಲಗೂರು ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಲಗೂರು ಕೆರೆಯಲ್ಲಿ ಕೊಳೆತ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದ್ದು, ತಾಯಿ ಸಾವನ್ನಪ್ಪಿದ್ದ ದಿನವೇ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ.

### ಚೆಕ್ ಬೌನ್ಸ್ ಪ್ರಕರಣ: ಸ್ನೇಹಮಯಿ ಕೃಷ್ಣಗೆ ರೂ.2.25 ಲಕ್ಷ ದಂಡ

• **ಉದಯವಾಹಿನಿ ಮೈಸೂರು**

ಚೆಕ್ ಬೌನ್ಸ್ ಪ್ರಕರಣದ ಆರೋಪಿ ಸ್ನೇಹಮಯಿ ಕೃಷ್ಣಗೆ ಇಲ್ಲಿನ ಮೂರನೇ ಹೆಚ್ಚುವರಿ ಸಿವಿಲ್ ಹಾಗೂ ಜೆಎಂಎಫ್ ನ್ಯಾಯಾಲಯವು 2.25 ಲಕ್ಷ ದಂಡ ವಿಧಿಸಿ ಗುರುವಾರ ಆದೇಶಿಸಿದ್ದು, ಪಾವತಿಸುವಲ್ಲಿ ವಿಫಲವಾದರೆ ಒಂದು ವರ್ಷ ಜೈಲು ಶಿಕ್ಷೆ ವಿಧಿಸಿ ತೀರ್ಪು ಪ್ರಕಟಿಸಿದೆ. ಕೃಷ್ಣ 2015ರಲ್ಲಿ ಲಲಿತಾದ್ರಿಪುರದ ಕುಮಾರ್ ಎಂಬವರಿಂದ ಸಾಲ ಪಡೆದು, ಪ್ರತಿಯಾಗಿ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಚೆಕ್ ನೀಡಿದ್ದರು. ಕುಮಾರ್ ಅದನ್ನು ತಮ್ಮ ಬ್ಯಾಂಕ್ ಖಾತೆಗೆ ಹಾಕಿದಾಗ ಬೌನ್ಸ್ ಆಗಿತ್ತು. ನಂತರ ಅವರು ಕೃಷ್ಣ ವಿರುದ್ಧ ಪ್ರಕರಣ ದಾಖಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯವು, ಆರೋಪ ಸಾಬೀತಾಗಿದ್ದರಿಂದ ಶಿಕ್ಷೆ ಪ್ರಕಟಿಸಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಕೃಷ್ಣ, ಪ್ರತಿವಾದಿಯು ನನಗೆ ದುಡ್ಡು ಕೊಡದೆ, ನನ್ನ ನಂಬಿಕೆ ದುರುಪಯೋಗಪಡಿಸಿಕೊಂಡು ನಾನು ನೀಡಿರುವ ಚೆಕ್ ಬೌನ್ಸ್ ಮಾಡಿ, ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು. ನಾನು ಮೇಲ್ಮನವಿ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿದ್ದು, ಜಾಮೀನು ದೊರಕಿದೆ' ಎಂದರು.

### ಕಾಜೂರು ಸಮೀಪ ಕಾಡಾನೆ ಸೆರೆ

• **ಉದಯವಾಹಿನಿ ಸೋಮವಾರಪೇಟೆ**

ಕಳೆದ ಒಂದೂವರೆ ವರ್ಷದಿಂದ ವಾಹನಗಳ ಮೇಲೆ ನಿರಂತರವಾಗಿ ದಾಳಿ ನಡೆಸಿ, ಬೆಳೆಗಳನ್ನು ನಾಶ ಮಾಡುತ್ತಿದ್ದ 'ಕಾಜೂರು ಕರ್ಣ' ಎಂದೇ ಹೆಸರಾಗಿದ್ದ ಕಾಡಾನೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ತಾಲ್ಲೂಕಿನ ಕಾಜೂರು ಸಮೀಪ ಶನಿವಾರ ಸೆರೆ ಹಿಡಿದರು. ಸುಮಾರು 40 ವರ್ಷ ವಯಸ್ಸಿನ ಈ ಗಂಡಾನೆಯು ಒಂದೂವರೆ ವರ್ಷಗಳಿಂದ ಈ ಭಾಗದಲ್ಲಿ ಉಪಟಳ ನೀಡುತ್ತಿತ್ತು. ಯಾವುದೇ ವಾಹನ ಕಂಡರೂ ಬೆನ್ನಟ್ಟಿ ಬರುತ್ತಿತ್ತು. ಹತ್ತಾರು ಕಾರುಗಳೂ, ಹಲವು ಬೈಕ್‌ಗಳಿಗೆ ಹಾನಿ ಮಾಡಿತ್ತು. ಕಳೆದ ಒಂದು ವರ್ಷದ ಹಿಂದೆಯೇ ಸೆರೆ ಹಿಡಿಯಲು ಅನುಮತಿ ದೊರತ್ತಿತ್ತು. ಆದರೆ, ಅರಣ್ಯ ಇಲಾಖೆಯ ಸಿಬ್ಬಂದಿಯ ಕೈಗೆ ಸಿಗದೇ ಇದು ಪರಾರಿಯಾಗುತ್ತಿತ್ತು.

### 'ಸಿ' ಮತ್ತು 'ಡಿ' ಭೂಮಿ ಸಮಸ್ಯೆಗೆ ಸಮಿತಿ; ಸಿದ್ದರಾಮಯ್ಯ ಅಭಯ

• **ಉದಯವಾಹಿನಿ ಮಡಿಕೇರಿ**

'ಸಿ' ಮತ್ತು 'ಡಿ' ದರ್ಜೆಯ ಭೂಮಿಯಲ್ಲಿ (ವ್ಯವಸಾಯಕ್ಕೆ ಯೋಗ್ಯವಲ್ಲದ ಭೂಮಿ) ಸಾಗುವಳಿ ಮಾಡುತ್ತಿರುವ ರೈತರ ಭೂಮಿ ಸಮಸ್ಯೆಗೆ ಸಂಬಂಧಿಸಿದಂತೆ ಸಮಿತಿಯೊಂದನ್ನು ರಚಿಸಲಾಗುವುದು.

ರೈತರು ಆತಂಕಪಡುವ ಅಗತ್ಯ ಇಲ್ಲ ಎಂದು ಹೇಳುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲೆಯಲ್ಲಿ ಆತಂಕದಲ್ಲಿದ್ದ ಸಾವಿರಾರು ರೈತರಿಗೆ ಭರವಸೆ ನೀಡಿದರು. ತಾಲ್ಲೂಕಿನ ಭಾಗಮಂಡಲದಲ್ಲಿ ಅವರು ಮೇತುವೆ ಉದ್ಘಾಟಿಸಿ ಮಾತನಾಡಿದರು. ಸಮಿತಿಯ ವರದಿ ಅನ್ವಯ ಕ್ರಮ ಕೈಗೊಳ್ಳಲಾಗುವುದು. ಯಾವುದೇ ಕಾರಣಕ್ಕೂ ರೈತರು ಆತಂಕಪಡಬಾರದು.

ಹಾಗೆಯೇ, ಮೈಕ್ರೋ ಫೈನಾನ್ಸ್‌ಗೆ ಕಡಿವಾಣ ಹಾಕುವ ಕಾರ್ಯ ನಡೆಯುತ್ತಿದೆ. ಬಡವರು, ಮಧ್ಯಮವರ್ಗದವರೂ ನಿರಾತಂಕವಾಗಿರಬೇಕು ಎಂದು ಅವರು ಸಾಲ ಪಡೆದವರಲ್ಲಿ ಹಾಗೂ ರೈತರಲ್ಲಿ ಭರವಸೆ ತುಂಬುವ ಪ್ರಯತ್ನ ಮಾಡಿದರು.ಕೊಡಗು ಎಂದರೆ ಬಿಜೆಪಿ ಎಂಬ ಅನ್ವರ್ಥನಾಮವನ್ನು ಜಿಲ್ಲೆಯ ಜನರು ಬದಲಾವಣೆ ಮಾಡಿ ಎರಡೂ ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕರನ್ನೇ ಆಯ್ಕೆ ಮಾಡಿದ್ದಾರೆ. ಹಾಗಾಗಿ, ಜಿಲ್ಲೆ ಎದುರಿಸುತ್ತಿರುವ ಸಮಸ್ಯೆಗಳಿಗೆ ಸ್ಪಂದಿಸುವುದು ಖಚಿತ' ಎಂದರು. ಇಲ್ಲಿನ ರಸ್ತೆಗಳ ಅಭಿವೃದ್ಧಿಗೆ ಹಣ ಕೊಡುವುದು ನಿಶ್ಚಿತ. ಇಲ್ಲಿನ ಇಬ್ಬರು ಶಾಸಕರು ಹೇಳುವಂತಹ ಅಭಿವೃದ್ಧಿ ಕಾರ್ಯಗಳನ್ನು ಮುಂದಿನ ದಿನಗಳಲ್ಲಿ ಜಾರಿಗೊಳಿಸಲಾಗುವುದು. ಇದರಲ್ಲಿ ಯಾವುದೇ ಸಂಶಯ ಬೇಡ' ಎಂದು ಹೇಳಿದರು.'

ಅಂತರಾಳದಿಂದ... EDITORIAL

# ಹಿಂದಕ್ಕೆ ಚಲಿಸುತ್ತಿರುವ ಶಿಕ್ಷಣ ವ್ಯವಸ್ಥೆ

ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮೇಲೆ ಕೋವಿಡ್ ಉಂಟು ಮಾಡಿದ ನಾಶ, ನಷ್ಟ ಕಲ್ಪನೆಗೂ ನಿಲುಕದ್ದು. ಅದರ ದುಷ್ಪರಿಣಾಮಗಳು ಜನರ ದೈಹಿಕ ಆರೋಗ್ಯದ ಮೇಲೆ ಮಾತ್ರವಲ್ಲ ಈ ದೇಶದ ಬೇರೆ ಬೇರೆ ಕ್ಷೇತ್ರಗಳ ಆರೋಗ್ಯವನ್ನು ಬಾಧಿಸಿತು. ಅದಾಗಲೇ ಪೂರ್ವಸಿದ್ಧತೆಯಿಲ್ಲದ ನೋಟು ನಿಷೇಧದಿಂದಾಗಿ ತತ್ತರಿಸಿ ಕೂತಿದ್ದ ಭಾರತದ ಪಾಲಿಗೆ ಕೋವಿಡ್ ಬರಸಿಡಿಲಿನಂತೆ ಎರಗಿತು. ನಮ್ಮ ನಡುವಿನಿಂದ ವೈರಸ್ ಅಳಿದಿರಬಹುದು. ಆದರೆ ಕೊರೋನಾ ಬಾಧಿತ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ವಲಯಗಳು ಇನ್ನೂ ಚೇತರಿಸಿಕೊಂಡಿಲ್ಲ. ಅದರ ಪರಿಣಾಮಗಳು ಆಗಾಗ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಲೇ ಇವೆ. ದೇಶದಲ್ಲಿ ಅನಿರೀಕ್ಷಿತವಾಗಿ ಕುಸಿದು ಬಿದ್ದು ಸಾಯುವ ಪ್ರಕರಣಗಳು ಹೆಚ್ಚುತ್ತಿದ್ದು, ಇದರ ಹಿಂದೆ ಕೋವಿಡ್ ಲಸಿಕೆಗಳ ದುಷ್ಪರಿಣಾಮಗಳಿವೆ ಎಂದು ತಜ್ಞರು ಅಭಿಪ್ರಾಯ ಪಡುತ್ತಿದ್ದಾರೆ. ಕೋವಿಡ್ ಬಂದವರಿಗೆ ನೀಡಲಾಗಿದ್ದ ಚಿಕಿತ್ಸೆಗಳೇ ಇಂದು ಅವರನ್ನು ಬೇರೆ ಬೇರೆ ರೂಪಗಳಲ್ಲಿ ಕಾಡುತ್ತಿವೆ. ಇವುಗಳ ನಡುವೆ ಕೋವಿಡ್ ಲಸಿಕೆಗಳು ಬೀರುತ್ತಿರುವ ದುಷ್ಪರಿಣಾಮಗಳು ಬೇರೆಯೇ ಇವೆ. ಈಗಾಗಲೇ ಈ ಲಸಿಕೆಗಳ ವಿರುದ್ಧ ಹಲವರು ನ್ಯಾಯಾಲಯದ ಮೊರೆ ಹೋಗಿದ್ದಾರೆ.

**ಇದೇ ಸಂದರ್ಭದಲ್ಲಿ ಲಾಕ್‌ಡೌನ್‌ನಿಂದಾಗಿ ತುತ್ತು ಅನ್ನಕ್ಕಾಗಿ ಪರದಾಡುತ್ತಿದ್ದ ಸರಕಾರಿ ಶಾಲೆಗಳ ವಿದ್ಯಾರ್ಥಿಗಳ ಪೋಷಕರು ವಿದ್ಯಾರ್ಥಿಗಳನ್ನು ದುಡಿಮೆಗೆ ಹಚ್ಚಿದರು. ಪರಿಣಾಮವಾಗಿ ಕೊರೋನೋತ್ತರ ದಿನಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಭಾರೀ ಇಳಿಕೆಯಾಯಿತು. ಶಾಲೆ ತೊರೆದ ವಿದ್ಯಾರ್ಥಿಗಳನ್ನು ಮರಳಿ ಶಾಲೆಗೆ ಸೇರ್ಪಡೆಗೊಳಿಸುವಲ್ಲಿ ಸರಕಾರ ಯಾವುದೇ ಗಂಭೀರ ಕ್ರಮವನ್ನು ತೆಗೆದುಕೊಳ್ಳಲಿಲ್ಲ.**

ಕೇಂದ್ರ ಸರಕಾರ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ನಿರ್ಲಕ್ಷಿಸಿದ್ದು ಕೋವಿಡ್ ಉಲ್ಬಣಿಸಲು ಮುಖ್ಯ ಕಾರಣವಾಯಿತು ಎಂದು ಹಲವರು ಅಭಿಪ್ರಾಯಪಟ್ಟಿದ್ದಾರೆ. ಆ ಸಂದರ್ಭವನ್ನು ಕಾರ್ಪೊರೇಟ್ ಆಸ್ಪತ್ರೆಗಳು ಸ್ವಾರ್ಥಕ್ಕೆ ಬಳಸಿಕೊಂಡವು. ಜನಸಾಮಾನ್ಯರನ್ನು ಅಕ್ಷರಶಃ ಲೂಟಿ ಮಾಡಿದವು ಎಂಬ ಆರೋಪಗಳಿವೆ. ಇದೇ ಸಂದರ್ಭದಲ್ಲಿ ಕ್ಷಯ, ಎಚ್‌ಐವಿ ಮೊದಲಾದ ಸಾಂಕ್ರಾಮಿಕ ರೋಗಗಳಿಗೆ ನೀಡಲ್ಪಡುವ ಚಿಕಿತ್ಸೆ ನಿರ್ಲಕ್ಷ್ಯಕ್ಕೊಳಗಾದ ಪರಿಣಾಮವಾಗಿ ದೇಶದಲ್ಲಿ ಕ್ಷಯರೋಗ ಉಲ್ಬಣವಾಯಿತು. ಇತರ ರೋಗಗಳಿಗೆ ಒದಗಿಸಲಾಗಿರುವ ಹಣದ ದೊಡ್ಡ ಭಾಗವನ್ನು ಕೊರೋನಕ್ಕಾಗಿ ಹೊಂದಾಣಿಕೆ ಮಾಡಲಾಯಿತು. ಇಂದಿಗೂ ಸರಕಾರ ಕ್ಷಯ ರೋಗಗಳಿಗೆ ನೀಡಬೇಕಾಗಿರುವ ನೆರವಿನ ಹಣವನ್ನು ಬಾಕಿ ಉಳಿಸಿಕೊಂಡಿದೆ. ಕೊರೋನೋತ್ತರ ದಿನಗಳಲ್ಲಿ ಕ್ಷಯರೋಗಿಗಳ ಪೌಷ್ಟಿಕ ಆಹಾರಗಳಿಗೆ ಸಹಾಯ ಒದಗಿಸಲಾಗದೆ ಆರೋಗ್ಯ ಇಲಾಖೆ ದಾನಿಗಳ ಮೊರೆ ಹೋಗುತ್ತಿದೆ. ಸರಕಾರಿ ಆಸ್ಪತ್ರೆಗಳ ಸ್ಥಿತಿ ದಿನದಿಂದ ದಿನಕ್ಕೆ ಕೆಡುತ್ತಿದೆ. ಅವುಗಳನ್ನು ಹಂತಹಂತವಾಗಿ ಖಾಸಗಿ ಸಂಸ್ಥೆಗಳು ಕೈವಶ ಮಾಡಿಕೊಳ್ಳುತ್ತಿವೆ. ಕೊರೋನದಿಂದ ಆರೋಗ್ಯ ಕ್ಷೇತ್ರದ ಬಳಿಕ ಅತಿ ಗಂಭೀರ ಸ್ಥಿತಿಯನ್ನು ಎದುರಿಸುತ್ತಿರುವುದು ನಮ್ಮ ಶಿಕ್ಷಣ ವ್ಯವಸ್ಥೆ ಕಳೆದ ಮಂಗಳವಾರ ಶೈಕ್ಷಣಿಕ ಸ್ಥಿತಿಗತಿಯ ವಾರ್ಷಿಕ ವರದಿ (ಎಎಸ್‌ಇಆರ್) ಬಿಡುಗಡೆಯಾಗಿದ್ದು, ಕೋವಿಡ್ ಆನಂತರ ಸರಕಾರಿ ಶಾಲೆಗಳಲ್ಲಿ ದಾಖಲಾತಿ ತೀವ್ರವಾಗಿ ಕುಸಿತವಾಗಿದೆ ಎನ್ನುವ ಅಂಶವನ್ನು ಇದು ಬಹಿರಂಗಪಡಿಸಿದೆ. ಬಾಲಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದ ಮಕ್ಕಳನ್ನು ಶಾಲೆಗೆ ಸೇರ್ಪಡೆಗೊಳಿಸಲು ಭಾರತದಲ್ಲಿ ಹಲವು ಸರಕಾರಗಳು ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದವು. ಮರಳಿ ಶಾಲೆಗೆ' ಅಂದೋಲನಕ್ಕಾಗಿ ಕೋಟ್ಯಂತರ ರೂಪಾಯಿಯನ್ನು ಬೇರೆ ಬೇರೆ ಸರಕಾರಗಳು ವ್ಯಯ ಮಾಡಿವೆ. ಬಿಸಿಯೂಟದಂತಹ ಯೋಜನೆಗಳನ್ನು ಕೂಡ ಇದಕ್ಕಾಗಿಯೇ ರೂಪಿಸಲಾಯಿತು. ಈ ಯೋಜನೆ ಶಾಲೆಗಳಲ್ಲಿ ಮಕ್ಕಳ ಸೇರ್ಪಡೆಯ ಸಂಖ್ಯೆಯನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಿತು. ಆದರೆ ಕೊರೋನದ ಬಳಿಕ, ಇದೀಗ ಸರಕಾರಿ ಶಾಲೆಗಳಲ್ಲಿ 6–14ರ ಒಳಗಿನ ಮಕ್ಕಳ ದಾಖಲಾತಿ ಪ್ರಮಾಣ 2018ರ ಸ್ಥಿತಿಗೆ ಬಂದು ತಲುಪಿದೆ ಎನ್ನುವ ಅಂಶವನ್ನು ವರದಿ ತೆರೆದಿಟ್ಟಿದೆ. ಕೊರೋನ ಕಾಲದ ಬಳಿಕ ದೇಶದ ಶಿಕ್ಷಣದ ಗುಣಮಟ್ಟ ತೀವ್ರ ಇಳಿಕೆಯಾಗಿದೆ ಎನ್ನುವ ಅಂಶದ ಬಗ್ಗೆ ತಜ್ಞರು ಗಮನ ಸೆಳೆಯುತ್ತಲೇ ಬಂದಿದ್ದಾರೆ. ಖಾಸಗೀಕರಣ ಪಾರಮ್ಯವನ್ನು ಸಾಧಿಸಿದ ದಿನದಿಂದಲೇ ಶಿಕ್ಷಣ ವ್ಯವಸ್ಥೆ ಉಳ್ಳವರಿಗೆ ಮತ್ತು ಇಲ್ಲವರಿಗೆ ಎಂದು ಎರಡಾಗಿ ಒಡೆದಿದೆ. ಸರಕಾರಿ ಶಾಲೆ ಮತ್ತು ಖಾಸಗಿ ಶಾಲೆಗಳ ನಡುವಿನ ಅಂತರ, ಈ ದೇಶದ ಸಾಮಾಜಿಕ ಅಂತರದ ಪ್ರತಿಫಲವೆಂದು ನಾವು ವ್ಯಾಖ್ಯಾನಿಸುತ್ತಿದ್ದೇವೆ. ಶಿಕ್ಷಣ ಎಲ್ಲರ ಮೂಲಭೂತ ಹಕ್ಕು ಎನ್ನುವ ಕಾರಣಕ್ಕಾಗಿ ಸರಕಾರಿ ಶಾಲೆಗಳನ್ನು ಸರಕಾರ ತೆರೆದಿದೆಯಾದರೂ, ಗುಣಮಟ್ಟದ ಶಿಕ್ಷಣ ಸರಕಾರಿ ಶಾಲೆಗಳಲ್ಲಿ ಮರೀಚಿಕೆಯಾಗಿದೆ. ಇಂಗ್ಲಿಷ್ ಮಾಧ್ಯಮದ ಬಗ್ಗೆ ಇರುವ ಭ್ರಮೆ, ಸರಕಾರಿ ಶಾಲೆಯನ್ನು ಸಾಮಾಜಿಕವಾಗಿ ಅಸ್ಪೃಶ್ಯವಾಗಿಸಿತ್ತು. ಬಡವರು ಮತ್ತು ದುರ್ಬಲ ಸಮುದಾಯದ ಮಕ್ಕಳು ಅನಿವಾರ್ಯವಾಗಿ ಸರಕಾರಿ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳುವ ಸ್ಥಿತಿ ದೇಶದಲ್ಲಿ ಈಗಲೂ ಇದೆ. ಕೊರೋನ ಕಾಲದಲ್ಲಂತೂ, ಶಿಕ್ಷಣದೊಳಗೆ ಸ್ಮಾರ್ಟ್ ಫೋನ್ ಇದ್ದವರು ಮತ್ತು ಇಲ್ಲದವರ ನಡುವೆ ಗೆರೆಯೊಂದು ಬಿತ್ತು. ಸ್ಮಾರ್ಟ್ ಫೋನ್ ಇಲ್ಲದವರು, ಸ್ಮಾರ್ಟ್‌ಫೋನ್ ಇದ್ದರೂ ನೆಟ್ವರ್ಕ್ ಸಿಗದೇ ತೊಂದರೆಗೊಳಗಾದವರು ಲಾಕ್‌ಡೌನ್ ಅವಧಿಯಲ್ಲಿ ಶಿಕ್ಷಣದಿಂದ ಬದಿಗೆ ತಳ್ಳಲ್ಪಟ್ಟರು. ಒಂದು ಸ್ಮಾರ್ಟ್ ಫೋನ್ ಬಳಸಿ ಒಂದು ಕುಟುಂಬದ ಎರಡು ಅಥವಾ ಮೂರು ವಿದ್ಯಾರ್ಥಿಗಳು ಏಕಕಾಲದಲ್ಲಿ ಶಿಕ್ಷಣ ಪಡೆಯುವುದು ಕಷ್ಟವಿತ್ತು. ಇಂತಹ ಸಂದರ್ಭದಲ್ಲಿ ಗಂಡು ಮಕ್ಕಳು ಶಿಕ್ಷಣಕ್ಕೆ ಹೆಚ್ಚು ಅರ್ಹರು ಎಂದು ಗುರುತಿಸಲ್ಪಟ್ಟು, ಹೆಣ್ಣು ಮಕ್ಕಳು ಸ್ಮಾರ್ಟ್‌ಫೋನ್ ವಂಚಿತ ಅಥವಾ ಶಿಕ್ಷಣ ವಂಚಿತರಾದರು. ಬದಲಿಗೆ ಸರಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆಯಿದೆ ಎಂಬ ನೆಪ ತೆಗೆದುಕೊಂಡು ಅವುಗಳನ್ನು ಒಂದೊಂದಾಗಿ ಮುಚ್ಚತೊಡಗಿತು. ಇದೇ ಸಂದರ್ಭದಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿ ರಾಜಕೀಯ ನಾಯಕರು ನಡೆಸುತ್ತಿರುವ ಹಸ್ತಕ್ಷೇಪ ಕೂಡ ಭಾರತದ ಶಿಕ್ಷಣ ವ್ಯವಸ್ಥೆಯನ್ನು ಇನ್ನಷ್ಟು ಹದಗೆಡಿಸಿದೆ. ಮೇಲ್‌ಜಾತಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ವಿದೇಶಗಳನ್ನು ಅವಲಂಬಿಸುವುದು ಹೆಚ್ಚುತ್ತಿದ್ದಂತೆಯೇ ತಳಸ್ತರದ ಕೆಳಜಾತಿಯ ವಿದ್ಯಾರ್ಥಿಗಳು ಸರಕಾರಿ ಶಾಲೆಗಳಿಂದ ನಾಪತ್ತೆಯಾಗುತ್ತಿರುವುದು ಮತ್ತು ಸರಕಾರಿ ಶಾಲೆಗಳೇ ಒಂದೊಂದಾಗಿ ನಾಪತ್ತೆಯಾಗುತ್ತಿರುವುದು ನಿಜಕ್ಕೂ ಆತಂಕಕಾರಿ ಸಂಗತಿಯಾಗಿದೆ. ಕೊರೋನ ಕಾಲದಲ್ಲಿ ನಾಪತ್ತೆಯಾಗಿರುವ ವಿದ್ಯಾರ್ಥಿಗಳನ್ನು ಹುಡುಕುವ ಕೆಲಸ ಸರಕಾರ ಆರಂಭಿಸಬೇಕಾಗಿದೆ.



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

# ಶಿಬಿಯ ಕರುಣೆ



**ಧರ್ಮರಾಜನಿಗೆ ಲೋಮಶ ಮುನಿಗಳು ಶಿಬಿಯ ಕಥೆ**

ಪಂಚ ಪಾಂಡವರು ತೀರ್ಥ ಯಾತ್ರೆಗೆ ಹೋದಾಗ ಯಮುನೆಯೂ ಅದರ ಉಪನದಿಗಳೂ ಸಂಗಮವಾಗುವ ಸ್ಥಳಕ್ಕೆ ಬಂದರು. ಆಗ ಧರ್ಮರಾಜನಿಗೆ ಲೋಮಶ ಮುನಿಗಳು ಶಿಬಿಯ ಕಥೆಯನ್ನು ಹೇಳಿದರು.

ಒಂದು ದಿನ ದೇವಲೋಕವಾಸಿಗಳಾದವರು ಭೂಲೋಕಕ್ಕೆ ಬಂದು ಶಿಬಿ ಚಕ್ರವರ್ತಿಯನ್ನು ಪರೀಕ್ಷಿಸಬೇಕೆಂದು ನಿರ್ಧರಿಸಿದರು. ಶಿಬಿಯು ಉಶೀನರ ಎಂಬ ಸ್ಥಳದಲ್ಲಿ ಯಾಗ ಮಾಡುತ್ತಿದ್ದನು. ಅಲ್ಲಿಗೆ ಇಂದ್ರನೂ ಅಗ್ನಿಯೂ ಬಂದರು. ಅಗ್ನಿಯು ಪಾರಿವಾಳದ ರೂಪವನ್ನೂ, ಇಂದ್ರನು ಗಿಡುಗದ ರೂಪವನ್ನೂ ಧರಿಸಿದರು. ಈ ಪಾರಿವಾಳವನ್ನು ಆ ಗಿಡುಗ ಅಟ್ಟಿಸಿಕೊಂಡು ಬಂದಿತು.

ಗಿಡುಗದಿಂದ ತಪ್ಪಿಸಿಕೊಳ್ಳುವುದಕ್ಕೆ ಎಂಬಂತೆ ಪಾರಿವಾಳವು ಶಿಬಿಯ ಮಡಿಲಲ್ಲಿ ಬಂದು ಬಿದ್ದಿತು. ಭಯದಿಂದ ನಡುಗುವಂತೆ ನಟಿಸಿತು. ಆಗ ಗಿಡುಗವು ಶಿಬಿ ಚಕ್ರವರ್ತಿಯ ಬಳಿಗೆ ಬಂದು, ಹೇ ಚಕ್ರವರ್ತಿಯೇ, ಲೋಕವೇ ನಿನ್ನನ್ನು ಕರುಣಾಸಾಗರ ಎಂದು ಕೊಂಡಾಡುತ್ತದೆ. ಈಗ ನಾನು ತೀವ್ರವಾದ ಹಸಿವಿನಿಂದ ನರಳುತ್ತಿದ್ದೇನೆ. ಆದ್ದರಿಂದ ಈ ನಿನ್ನ ಮಡಿಲಲ್ಲಿರುವ ಪಾರಿವಾಳವನ್ನು ತಿಂದು ಹಸಿವನ್ನು ನೀಗಿಕೊಳ್ಳುತ್ತೇನೆ. ಆದ್ದರಿಂದ ನಿನ್ನ ಬಳಿ ಶರಣಾಗತನಾಗಿ ಬಂದ ಈ ಪಾರಿವಾಳವನ್ನು ರಕ್ಷಿಸಿ ಪುಣ್ಯ ಸಂಪಾದಿಸಲು ಯತ್ನಿಸಬೇಡ. ನನ್ನ ಆಹಾರವನ್ನು ನೀನು ಕಿತ್ತುಕೊಳ್ಳಬೇಡ' ಎಂದಿತು. ಆಗ ಶಿಬಿಯು 'ಹೇ ಗಿಡುಗವೇ ಈ ಪುಟ್ಟ ಹಕ್ಕಿ ಭಯದಿಂದ ನಡುಗುತ್ತಾ ಇದೆ. ಶರಣಾಗತನಾಗಿ ನನ್ನ ಬಳಿ ಬಂದ ಈ ಪಾರಿವಾಳನ್ನು ನಾನು ರಕ್ಷಿಸದೆ ಬಿಡುವುದು ಸರಿಯಲ್ಲ. ಶರಣಾಗತರನ್ನು ಕಾಪಾಡದೇ ಇರುವುದು ಹಸುವನ್ನು ಕೊಲ್ಲುವುದಕ್ಕೆ ಸಮಾನವಾದುದು. ಅಂತಹ ಪಾಪ ಮಾಡಿದವನಿಗೆ ಕ್ಷಮೆಯೇ ಇಲ್ಲ. ಕಾಲ ಕಾಲಕ್ಕೆ ಅವನಿರುವ ಸ್ಥಳದಲ್ಲಿ ಮಳೆ ಬೀಳುವುದಿಲ್ಲ ಪೈರು ಬೆಳೆಯುವುದಿಲ್ಲ. ಅವನು ಮಾಡುವ ಯಾಗವನ್ನು ದೇವತೆಗಳೂ ಸ್ವೀಕರಿಸುವುದಿಲ್ಲ. ಇಂತಹವನ ಪೂರ್ವಜರು ಸ್ವರ್ಗದಲ್ಲಿರಲು ಸಾಧ್ಯವಿಲ್ಲ' ಎಂದನು. ಆಗ ಆ ಶಿಬಿಯು, 'ಹೇ ಗಿಡುಗವೇ ನನ್ನ ಬಳಿ ಶರಣಾಗತರಾದವರನ್ನು ತಿರಸ್ಕರಿಸುವುದು ಹೇಗೆ ನ್ಯಾಯವಾದೀತು ನಿನಗೆ ಈಗ ಬೇಕಾಗಿರುವುದು ಆಹಾರ ತಾನೇ ನಿನಗೆ ಒಳ್ಳೆಯ ರಸವತ್ತಾದ ಊಟ ಸಿಗುವಂತೆ ನಾನು ಏರ್ಪಾಡು ಮಾಡುತ್ತೇನೆ' ಎಂದನು. ಆಗ ಆ ಗಿಡುಗವು ನಾನು ಬೇರೆ ಯಾವ ಪ್ರಾಣಿಯ ಮಾಂಸವನ್ನು ತಿನ್ನಲಾರೆ. ಪ್ರಕೃತಿ ನನಗೆ ಸ್ವಾಭಾವಿಕವಾಗಿ ನೀಡಿದ ಆ ಪಾರಿವಾಳವನ್ನು ನನಗೆ ನೀಡಬೇಕು. ಗಿಡುಗವು ಪಾರಿವಾಳವನ್ನು ತಿನ್ನುವುದು ಪುರಾತನ ವಿಧಿ' ಎಂದಿತು.

ಆಗ ಶಿಬಿ ಚಕ್ರವರ್ತಿಯು, 'ಹೇ ಹಕ್ಕಿಯೇ, ನಿನಗೆ ನಾಡು, ನಗರ ರಾಜನ ಪದವಿ, ಮುಂತಾಗಿ ನಿನಗೆ ಬೇಕಾದ್ದೆಲ್ಲವನ್ನು ನಾನು ಕೊಡಲು ಸಿದ್ಧವಾಗಿದ್ದೇನೆ. ಈ ಪಾರಿವಾಳವನ್ನು ಕಾಪಾಡಲು ನಾನು ನನ್ನ ಪ್ರಾಣವನ್ನೇ ಬೇಕಾದರೂ ನೀಡುತ್ತೇನೆ' ಎಂದನು. 'ರಾಜನೇ, ಈ ಪಾರಿವಾಳದ ಮೇಲೆ ನಿನಗೆ ಅಷ್ಟೊಂದು ಪ್ರೀತಿ ಇರುವುದಾದರೆ ಈ ಪಾರಿವಾಳದ ತೂಕದಷ್ಟು ನಿನ್ನ ದೇಹದ ಮಾಂಸವನ್ನು ಕೊಡು. ಹಾಗೆ ನೀನು ನೀಡಿದರೆ ನನಗೆ ಬೇಕಾದ್ದನ್ನು ಕೊಟ್ಟಂತಾಗುತ್ತದೆ ಎಂದಿತು ಗಿಡುಗ. ಇದರಿಂದ ನಿನಗೆ ಬಹು ದೊಡ್ಡ ಕೀರ್ತಿ ಏರ್ಪಡುತ್ತದೆ.

'ಹೇ ಹದ್ದೇ ನೀನು ಕೇಳಿದಂತೆ ತಕ್ಕಡಿಯ ಒಂದು ತಟ್ಟೆಯಲ್ಲಿ ಈ ಪಾರಿವಾಳವನ್ನೂ ಇನ್ನೊಂದು ತಟ್ಟೆಯಲ್ಲಿ ನನ್ನ ಮಾಂಸವನ್ನೂ ಇಟ್ಟು ಸಮನಾಗಿ ತೂಗಿ ನಿನಗೆ ಕೊಡುವೆ' ಎಂದನು ಶಿಬಿ. ಅದೇ ರೀತಿ ತಕ್ಕಡಿಯು ತರಲ್ಪಟ್ಟಿತು. ಒಂದು ತಟ್ಟೆಯಲ್ಲಿ ಪಾರಿವಾಳವು ಕುಳಿತಿತು. ಇನ್ನೊಂದು ತಟ್ಟೆಯಲ್ಲಿ ತನ್ನ ದೇಹದಿಂದ ತುಂಡರಿಸಿದ ಮಾಂಸವನ್ನು ಶಿಬಿ ಇಟ್ಟನು. ಮಾಂಸಕ್ಕಿಂತ ಪಾರಿವಾಳದ ತೂಕ ಜಾಸ್ತಿಯಾಗಿದ್ದಿತು. ಮತ್ತೆ ಶಿಬಿ ಮಾಂಸವನ್ನು ಕತ್ತರಿಸಿಟ್ಟನು. ಆಗಲೂ ಪಾರಿವಾಳದ ತೂಕ ಅಧಿಕವಾಗಿದ್ದಿತು. ಹೀಗೇ ಇಷ್ಟು ಬಾರಿ ಇಟ್ಟರೂ ಪಾರಿವಾಳವೇ ಭಾರವಾಗಿದ್ದಿತು. ಕೊನೆಗೆ ಶಿಬಿ ಚಕ್ರವರ್ತಿ ತಾನೇ ಬಂದು ತಕ್ಕಡಿ ತಟ್ಟೆಯಲ್ಲಿ ಏರಿ ಕುಳಿತನು. ತಾನೇ ತನ್ನನ್ನು ಆ ಹದ್ದಿಗೆ ಆಹಾರವಾಗಿ ಒಪ್ಪಿಸಿಕೊಳ್ಳುವುದಕ್ಕೆ ಆ ಶಿಬಿಯು ಸ್ವಲ್ಪವೂ ಹಿಂಜರಿಯಲಿಲ್ಲ.

ಆ ಕೂಡಲೇ ಆ ಗಿಡುಗವು 'ಸತ್ಯವನ್ನು ಮೀರದ ಓ ಚಕ್ರವರ್ತಿಯೇ, ನೀನು ಧರ್ಮವೇ ಮೂರ್ತಿವೆತ್ತವನಾಗಿದ್ದೀಯೆ. ನಾನು ಗಿಡುಗವಲ್ಲ, ಇಂದ್ರ. ಇದು ಪಾರಿವಾಳವಲ್ಲ ಇವನು ಅಗ್ನಿ. ನಿನ್ನ ಕರುಣಾಸಾಗರದ ಮನಸ್ಸನ್ನು ಪರೀಕ್ಷಿಸಿ ಅದನ್ನು ಲೋಕದವರೆಲ್ಲರೂ ಅರಿಯುವಂತೆ ಮಾಡಲು ನಾವು ಹೀಗೆ ಪಕ್ಷಿ ರೂಪದಲ್ಲಿ ಬಂದೆವು. ನಿನ್ನನ್ನೇ ನೀನು ತ್ಯಾಗ ಮಾಡಿದ ನಿನ್ನ ಉನ್ನತ ಗುಣವನ್ನು ಕಂಡು ಆಶ್ಚರ್ಯಚಕಿತರಾಗಿದ್ದೇವೆ. ಮನುಷ್ಯರಲ್ಲಿ ನೀನು ಅತಿ ಶ್ರೇಷ್ಠನಾದವನು. ನೀನು ಅಳಿವಿಲ್ಲದ ಕೀರ್ತಿಯನ್ನು ಹೊಂದಿ ಬಹುಕಾಲ ರಾಜ್ಯವಾಳುವೆ. ಸ್ವರ್ಗಲೋಕವು ನಿನಗಾಗಿ ಕಾದಿರುತ್ತದೆ. ಮೊದಲಿನಂತೆ ನಿನ್ನ ಶರೀರ ಗಾಯವಿಲ್ಲದೆ ಸುಂದರವಾಗಿ ಆಗಲಿ. 'ಕಪೋತರಮಣ' ಎಂಬ ಮಗನನ್ನು ನಿನ್ನ ಶರೀರದಿಂದಲೇ ಪಡೆಯುವೆ. ಅವನು ಬಹುದೊಡ್ಡ ವೀರನಾಗುತ್ತಾನೆ. ಅತಿ ಸುಂದರನಾದ ಅವನು ಮಹಾಕೀರ್ತಿವಂತನಾಗುತ್ತಾನೆ! ಎಂದು ಇಂದ್ರನು ಆಶೀರ್ವದಿಸಿದನು. 'ಒಂದು ಪಾರಿವಾಳವನ್ನು ಕಾಪಾಡಲು ತನ್ನನ್ನೇ ಅರ್ಪಿಸಿದ ಶಿಬಿ' ಎಂದು ಶಾಶ್ವತವಾದ ಕೀರ್ತಿಯನ್ನು ಶಿಬಿ ಪಡೆದನು.

**ಆಗ ಆ ಗಿಡುಗವು 'ಎಲೈ ರಾಜನೇ ಯಾವ ಜೀವಿಯೂ ಆಹಾರವಿಲ್ಲದೆ ಬದುಕಲಾರದು. ನನ್ನ ಹಸಿವನ್ನು ಹೋಗಲಾಡಿಸದಿದ್ದರೆ ಈಗ ನನ್ನ ಪ್ರಾಣವೇ ಹೋಗಿಬಿಡುತ್ತದೆ. ನಾನು ಸತ್ತರೆ ನನ್ನ ಕುಟುಂಬವೂ ನಾಶವಾಗಿಬಿಡುತ್ತದೆ. ಈ ಪಾರಿವಾಳವನ್ನು ನೀನು ಕಾಪಾಡಿದರೆ ಹಲವು ಪ್ರಾಣಗಳು ತೆಗೆದ ಪಾಪಕ್ಕೆ ಗುರಿಯಾಗುವೆ. ಹಲವರಿಗೆ ದುಃಖವನ್ನು ತರುವ ಕಾರ್ಯವು ಧರ್ಮವಾಗಲಾರದು. ಅದು ಕೆಟ್ಟ ಕಾರ್ಯ ಇನ್ನೊಂದು ಒಳ್ಳೆಯ ಕೆಲಸಕ್ಕೆ ವಿರೋಧವಿಲ್ಲದ್ದೇ ನಿಜವಾದ ಧರ್ಮ' ಎಂದಿತು.**

## ಬಜೆಟ್ ಕುರಿತು ಸೈಕಲ್ ಪ್ಯೂರ್ ಅಗರಬತ್ತಿ ಎಂಡಿ ಅಭಿಪ್ರಾಯ

• ಉದಯವಾಹಿನಿ, ಬೆಂಗಳೂರು



2025ರ ಕೇಂದ್ರ ಬಜೆಟ್ ಭಾರತದ ಉತ್ಪಾದನಾ ವಲಯವನ್ನು ಉತ್ತೇಜಿಸುವಂತೆ ಮೂಡಿ ಬಂದಿದೆ. ವಿಶೇಷವಾಗಿ ಉತ್ಪಾದನಾ ವಲಯ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಈ ಬಜೆಟ್ ಮಹತ್ವದ ಹೆಜ್ಜೆಯಾಗಿದೆ.

ಮೇಕ್ ಇನ್ ಇಂಡಿಯಾ ಯೋಜನೆಗೆ ಮತ್ತಷ್ಟು ಬಲ ತುಂಬುವ ಉದ್ದೇಶ ಹೊಂದಿರುವ ರಾಷ್ಟ್ರೀಯ ಉತ್ಪಾದನಾ ಅಭಿಯಾನವು ದೇಶದ ಉತ್ಪಾದನಾ ವಲಯವನ್ನು ಸಬಲೀಕರಣಗೊಳಿಸಲಿದ್ದು, ಇದೊಂದು ಶ್ಲಾಘನೀಯ ಪ್ರಯತ್ನವಾಗಿದೆ. ಸರ್ಕಾರವು ಪೂರಕವಾದ ವ್ಯವಸ್ಥೆಯನ್ನು ಕಲ್ಪಿಸುವ ಮೂಲಕ ಸಣ್ಣ, ಮಧ್ಯಮ ಮತ್ತು ದೊಡ್ಡ ಕೈಗಾರಿಕೆಗಳಿಗೆ ಬೆಂಬಲ ಒದಗಿಸಲು ಮುಂದಾಗಿರುವುದು ಆನಂದ ದಾಯಕವಾಗಿದೆ.

ಸೋಲಾರ್ ಪಿವಿ ಸೆಲ್ ಗಳು, ಎಲೆಕ್ಟ್ರಿಕ್ ವೆಹಿಕಲ್ (ಇವಿ) ಬ್ಯಾಟರಿಗಳು, ಮೋಟಾರ್ ಗಳು ಮತ್ತು ಕಂಟ್ರೋಲರ್ ಗಳು, ವಿಂಡ್ ಟರ್ಬೈನ್ ಗಳು, ಹೈ-ವೋಲ್ಟೇಜ್ ಟ್ರಾನ್ಸ್ ಮಿಷನ್ ಉಪಕರಣಗಳು ಮತ್ತು ಗ್ರಿಡ್ ಸ್ಕೇಲ್ ಬ್ಯಾಟರಿಗಳು ಮುಂತಾದ ಪ್ರಮುಖ ಕ್ಷೇತ್ರಗಳಲ್ಲಿ ಉತ್ತಮ ಹೂಡಿಕೆ ಅವಕಾಶ ಒದಗಿಸಿರುವುದು ಬಹಳ ಮುಖ್ಯ ಅಂಶವಾಗಿದೆ.

ಉತ್ಪಾದನಾ ವಲಯ ಸ್ನೇಹಿಯಾಗಿ ಮೂಡಿ ಬಂದಿರುವ ಈ ಬಜೆಟ್ ಸುಸ್ಥಿರ ಬೆಳವಣಿಗೆ ಸಾಧಿಸಲು ನೆರವಾಗುವ, ಉದ್ಯಮಶೀಲತೆಗೆ ಪ್ರೇರಣೆ ನೀಡುವ ಮತ್ತು ಭಾರತವನ್ನು ಜಾಗತಿಕ ಉತ್ಪಾದನಾ ನಾಯಕನಾಗಿಸುವ ಕಾರ್ಯವನ್ನು ಮಾಡುವ ನಿರೀಕ್ಷೆ ಇದೆ.

## ಉದ್ಯೋಗ ಸೃಷ್ಟಿ ಮತ್ತು ಸಣ್ಣ, ಮಧ್ಯಮ ಕೈಗಾರಿಕೆಗಳ ಅಭಿವೃದ್ಧಿ

• ಉದಯವಾಹಿನಿ, ಬೆಂಗಳೂರು


2025ರ ಕೇಂದ್ರ ಬಜೆಟ್ ಕುರಿತು ಯುನೆಕ್ಸ್ಟ್ ಮಣಿಪಾಲ್ ಅಕಾಡೆಮಿ ಆಫ್ ಬಿಎಫ್‌ಎಸ್‌ಐನ ಬಿಸಿನೆಸ್ ವಿಭಾಗದ ಮುಖ್ಯಸ್ಥರು ಮತ್ತು ಹಿರಿಯ ಉಪಾಧ್ಯಕ್ಷರಾದ ಆತಾಶ್ ಶಾ ಅವರ ಅಭಿಪ್ರಾಯ

ಕೌಶಲ್ಯ ಅಭಿವೃದ್ಧಿ ಮಾಡುವ ಮೂಲಕ ಯುವ ಜನತೆಯನ್ನು ಸಬಲೀಕರಣಗೊಳಿಸುವ ಮತ್ತು ಬಿಎಫ್‌ಎಸ್‌ಐ ಕ್ಷೇತ್ರದಲ್ಲಿ ಹೊಸತನ ತರುವ ನಮ್ಮ ಉದ್ದೇಶಕ್ಕೆ ಪೂರಕವಾಗಿರುವ ಹಲವು ಪ್ರಗತಿಪರ ಯೋಜನೆಗಳನ್ನು ಈ ವರ್ಷದ ಬಜೆಟ್ ನಲ್ಲಿ ಘೋಷಿಸಲಾಗಿದೆ. ವಿಮಾ ವಲಯದಲ್ಲಿ ವಿದೇಶಿ ನೇರ ಹೂಡಿಕೆಯನ್ನು (ಎಫ್‌ಡಿಐ) ಶೇ.74 ರಿಂದ ಶೇ.100ಕ್ಕೆ ಹೆಚ್ಚಿಸಲು ನಿರ್ಧರಿಸುವುದು ಬಹಳ ಮಹತ್ವದ ಹೆಜ್ಜೆಯಾಗಿದೆ. ಈ ಯೋಜನೆಗಳು ಕೌಶಲ್ಯ ಅಭಿವೃದ್ಧಿಗೆ ಬಹಳಷ್ಟು ಅವಕಾಶಗಳನ್ನು ಒದಗಿಸಲಿದೆ ಮತ್ತು ಬಿಎಫ್‌ಎಸ್‌ಐ ಕ್ಷೇತ್ರದಲ್ಲಿ ವೃತ್ತಿ ಬೆಳವಣಿಗೆಗೆ ಕಾರಣವಾಗಲಿದೆ. ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾಗಿ ಮುಂದಿನ ಪೀಳಿಗೆಯ ವೃತ್ತಿಪರರನ್ನು ಸಿದ್ಧಗೊಳಿಸುವ ವಿಚಾರದಲ್ಲಿ ಮಹತ್ವದ ಪಾತ್ರ ವಹಿಸಲು ನಾವು ಉತ್ಸುಕರಾಗಿದ್ದೇವೆ. ಉದ್ಯೋಗ ಸೃಷ್ಟಿ ಮತ್ತು ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳ ಅಭಿವೃದ್ಧಿ ಕಡೆಗೆ ಈ ಬಜೆಟ್ ಗಮನ ಹರಿಸಿದ್ದು, ಇದರಿಂದ ಭಾರತದಲ್ಲಿ ದೊಡ್ಡ ಪ್ರತಿಭಾ ಸಮೂಹ ಸೃಷ್ಟಿ ಆಗಲಿದೆ. ಈ ಕ್ರಮಗಳಿಂದ ವೃತ್ತಿಪರ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿಗೆ ಒತ್ತು ನೀಡುವುದರಿಂದ ಜಾಗತಿಕ ಮಟ್ಟದ ಅವಕಾಶಗಳನ್ನು ಗಳಿಸಬಲ್ಲ ಉದ್ಯೋಗಿಗಳ ಪಡೆ ಸೃಷ್ಟಿಯಾಗಲಿದೆ.

ಕೌಶಲ್ಯ ಅಭಿವೃದ್ಧಿಗೆ ಐದು ರಾಷ್ಟ್ರಮಟ್ಟದ ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪನೆಯ ಮೂಲಕ ಪಠ್ಯಕ್ರಮ ವಿನ್ಯಾಸ, ತರಬೇತುದಾರರ ತರಬೇತಿ ಮತ್ತು ಕೌಶಲ್ಯ ಪ್ರಮಾಣೀಕರಣದ ಕಡೆಗೆ ಗಮನ ಹರಿಸಲಾಗುತ್ತಿದ್ದು, ಶಿಕ್ಷಣದ ಹಾಗೂ ತರಬೇತಿ ಗುಣಮಟ್ಟ ಉತ್ತಮ ಗೊಳಿಸಲಾಗುತ್ತಿದೆ.

ನುರಿತ ಪರಿಣತರನ್ನು ಸಿದ್ಧಗೊಳಿಸುವ ನಮ್ಮ ಉದ್ದೇಶದ ಜೊತೆ ಈ ಆಲೋಚನೆ ಸಂಪೂರ್ಣವಾಗಿ ಹೊಂದಿಕೊಳ್ಳುತ್ತದೆ. ಬಿಎಫ್‌ಎಸ್‌ಐಯ ಮಣಿಪಾಲ್ ಅಕಾಡೆಮಿಯಲ್ಲಿ ಈ ಬದಲಾವಣೆಗಳನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳಲು ನಾವು ಸಿದ್ಧರಾಗಿದ್ದೇವೆ.





**ಸಾಮಾಜಿಕ ಕಳಕಳಿ**

**ಹೆಚ್.ಎಸ್ .ಪ್ರತಿಮಾ ಹಾಸನ್**
**ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ**

• ಉದಯವಾಹಿನಿ, ವಿಶೇಷ

## ದಿನಕ್ಕೊಂದು ಮುಕ್ತಕ -79


**ಗಜಲ್ ಗಳ ಬರೆಯುತಲಿ ಓದುವರ ಮನಗೆಲ್ಲೆ**
**ಗಜರಿಪುವ (ಸಿಂಹ) ರೀತಿಯಲಿ**
**ಗರ್ಜಿಸುತಲಿಯೆ**
**ಗಜಮುಖನ ನೆನೆಯುತಲಿ ಶಾಂತಿಯಲಿ**
**ನಡೆಯುತ್ತ**
**ಗಜಗಲಿಸು (ಪ್ರಕಾಶಿಸು) ಲೇಖನಿಯ ಲಕ್ಷ್ಮಿ**
**ದೇವಿ......**



ಗಜಲ್ ಗಳನ್ನು ಬರೆಯುತ್ತಾ ಓದುಗರ ಮನಸಳೆಯುವುದು ಕಷ್ಟ ಅದು ಸಿಂಹನ ಘರ್ಜನೆ ಎಂತಿರುತ್ತದೆ. ಏಕೆಂದರೆ ಕವನ, ಚುಟುಕು, ಹನಿಗವನದಷ್ಟು ಸುಲಭವಾಗಿ ಗಜಲ್ ರಚಿಸಲು ಸಾಧ್ಯವಿಲ್ಲ. ಗಜಮುಖನನ್ನು ನೆನೆಯುತ್ತಾ ಶಾಂತಿಯನ್ನು ಬೇಡುತ್ತಾ ಬರಬಣಿಗೆಯಲ್ಲಿ ಪ್ರಜ್ವಲಿಸಬೇಕು ಲೇಖನಿಯೂ ಆಗ ಮಾತ್ರ ಲೇಖನಿಯಿಂದ ಬಂದಂತಹ ಬರಹಕ್ಕೆ ಗಟ್ಟಿತನ ಸಿಗುತ್ತದೆ.

ನಾನು ತಿಳಿದಂತೆ ಗಜಲ್ ನಲ್ಲಿ ಕೆಲವು ನಿಯಮಗಳಿವೆ. ಅದರಲ್ಲಿ ಕೆಲವು ಹೀಗಿದೆ. ಆದಿ ಪ್ರಾಸ,ಸಮಾನ ಕಾಫಿಯ, ಸಮಾನ ಪದಗಳು ಪ್ರತಿ ಸಾಲಿನಲ್ಲೂ ಕೊನೆ ಪದ ರದೀಫ್,ಎರಡನೇ ಶೇರ್ ಮೊದಲ ಸಾಲು ಪ್ರಶ್ನಾರ್ಥಕ ಸರ್ವೇ ಸಾಮಾನ್ಯವಾಗಿ ಐದು ಪದಗಳು ಅರ್ಥಪೂರ್ಣ ಬಳಕೆ ಕೊನೆ ಶೇರ್ ಕಾವ್ಯನಾಮ ಇಷ್ಟು ಗಜಲ್ ನಲ್ಲಿ ಇರುವುದು ಅವಶ್ಯಕತೆ ಇದೆ.

ನಿಯಮಗಳ ಪಾಲನೆ ಇಲ್ಲದಿದ್ದರೆ ಗಜಲ್ ಗಳು ರಚಿಸಿದ ಅದರ ಅರ್ಥ ಕಳೆದುಕೊಳ್ಳುತ್ತದೆ.



**ರಾಮಾಯಣ**

**ಶ್ರೀರಾಮನು ಪಟ್ಟಾಭಿಷೇಕಕ್ಕಾಗಿ ತಂಜಡೆತಾಯಿಗಳಿಂದ ಆಶೀರ್ವಾದವನ್ನು ಪಡೆದದುದ್ದು**

• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ

ಶ್ರೀರಾಮನು ಕೌಸಲ್ಯಾದೇವಿಯ ಆಶೀರ್ವಾದವನ್ನು ಕೈಗೊಂಡು ಸಮೀಪದಲ್ಲಿ ಕೈ ಮುಗಿದು ಕೊಂಡು ನಿಂತಿದ್ದ ಲಕ್ಷ್ಮಣನನ್ನು ನೋಡಿ ಲಕ್ಷ್ಮಣ, ನೀನು ನನ್ನ ಎರಡನೆಯ ಶರೀರದ ಹಾಗೆ ಸಮಸ್ತ ಭೂಮಂಡಲವನ್ನೂ ಪರಿಪಾಲಿಸು. ಸಕಲ ರಾಜಸುಖವನ್ನೂ ಅನುಭವಿಸು. ನಾನು ನಿನಗೋಸ್ಕರವೇ ಈ ರಾಜ್ಯಾಧಿಪತ್ಯವನ್ನು ಬಯಸುತ್ತೇನೆ ಎಂದು ಹೇಳಿದನು. ಆಮೇಲೆ ಸೀತಾದೇವಿಯನ್ನು ಉಪವಾಸವ್ರತಸ್ಥೆಯಾಗಿರಲು ತಿಳಿಸಿ ಕೌಸಲ್ಯಾದೇವಿಗೆ ನಮಸ್ಕರಿಸಿ ಅವಳ ಅನುಜ್ಞೆ ಪಡೆದು ತನ್ನ ಅರಮನೆಗೆ ಹೋದನು.

**ಶ್ರೀ ರಾಮನು ಪಟ್ಟಾಭಿಷೇಕಕ್ಕಾಗಿ ಪ್ರತವನ್ನಾಚರಿಸಿದ್ದು :** ಇತ್ತ ದಶರಥರಾಯನು ಪುರೋಹಿತನಾದ ವಸಿಷ್ಠ ಮುನೀಶ್ವರನನ್ನು ಕುರಿತು ವಸಿಷ್ಠ ಮುನೀಶ್ವರರೆ, ನೀವು ಶ್ರೀರಾಮನ ಐಶ್ವರ ಕೀರ್ತಿಗಳು ಹೆಚ್ಚುವುದಕ್ಕಾಗಿ ಆತನಿಗೂ ಸೀತಾದೇವಿಗೂ ಪಟ್ಟಾಭಿಷೇಕವ್ರತಾಂಗವಾದ ಉಪವಾಸವನ್ನು ಮಾಡಿಸಿರಿ ಎಂದು ಹೇಳಿದನು. ಮಹಾವಾಗ್ಮಿ ಶಾರದನಾಗಿ ಮಂತ್ರಾರ್ಥರಹಸ್ಯವನ್ನು ಬಲ್ಲ ವಸಿಷ್ಠಮುನೀಶ್ವರನು ಬೃಹದ್ರಥ ವನ್ನೇರಿಕೊಂಡು ಶ್ರೀರಾಮನ ಅರಮನೆಗೆ ಹೋದನು. ರಾಮನು ವಸಿಷ್ಠಮುನೀಶ್ವರನು ಬಂದ ವೃತ್ತಾಂತವನ್ನು ಕೇಳಿ ಎದುರುಗೊಂಡು ಬಂದು ಅಭಿನಂದಿಸಿದನು. ವಸಿಷ್ಠಮುನಿಯು ಹರ್ಷ ಯುಕ್ತನಾಗಿ ಆತನನ್ನು ನೋಡಿ ಶ್ರೀರಾಮ, ನಿನ್ನ ತಂದೆಯಾದ ದಶರಥರಾಯನು ನಿನ್ನ ವಿನಯಾದಿಸುಗುಣಗಳನ್ನು ಕಂಡು ಅಧಿಕವಾದ ಪ್ರೀತಿಯಿಂದ ನಿನಗೆ ನಾಳೆ ಪಟ್ಟಾಭಿಷೇಕವನ್ನು ಮಾಡುವುದಕ್ಕಾಗಿ ಈ ಹೊತ್ತು ಸೀತಾಸಮೇತನಾಗಿ ನಿನಗೆ ಪಟ್ಟಾಭಿಷೇಕಾಂಗವಾದ ಉಪವಾಸವ್ರತವನ್ನು ಮಾಡಿಸಲು ನನ್ನನ್ನು ಕಳುಹಿಸಿದನು. ಪೂರ್ವದಲ್ಲಿ ನಹುಷನು ಯಯಾತಿರಾಯನಿಗೆ ಪಟ್ಟವನ್ನು ಕಟ್ಟಿದ ಮರ್ಯಾದೆಯಲ್ಲಿ ನಿನ್ನ ತಂದೆಯು ನಾಳೆ ನಿನಗೆ ಪಟ್ಟಾಭಿಷೇಕವನ್ನು ಮಾಡುವನು. ಆದ್ದರಿಂದ ನೀನು ಸೀತಾಸಮೇತನಾಗಿ ಇಂದು ಪ್ರತೋಪವಾಸವನ್ನು ಮಾಡು ಎಂದು ನುಡಿದನು. ಅನಂತರ ಸೀತಾಸಮೇತನಾದ ಶ್ರೀರಾಮನಿಗೆ ಪ್ರತನಿಯಮವನ್ನು ವಿಧ್ಯುಕ್ತ ಪ್ರಕಾರವಾಗಿ ಮಾಡಿಸಿ ಅವರಿಂದ ಸತ್ಕರಿಸಲ್ಪಟ್ಟು ದಶರಥರಾಯನ ಸಮೀಪಕ್ಕೆ ಹೋದನು. ಶ್ರೀರಾಮನು ತನ್ನ ಸಮೀಪದಲ್ಲಿದ್ದ ಸುಹೃತ್ತುಗಳಿಗೆ ಸಾವಧಾನರಾಗಿ ಕಾದುಕೊಂಡಿರಲು ಆಜ್ಞಾಪಿಸಿ ತನ್ನ ಮನೆಯಲ್ಲಿ ಸೀತಾಸಮೇತನಾಗಿ ವ್ರತನಿಯಮದಿಂದಿದ್ದನು. ಸೀತಾದೇವಿಯು ತನ್ನ ಕಾಂತಿಯಿಂದ ಮೆರೆಯುತ್ತ ಸಖಿಯರೊಡನೆ ಕೂಡಿಕೊಂಡಿರಲು ಆ ಸ್ತ್ರೀಯರಿಂದ ಆ ಅರಮನೆಯು ಪುಷ್ಪ ರಸಾಸ್ವಾದನದಿಂದ ಮದಿಸಿರುವ ಅನೇಕ ಪಕ್ಷಿಗಳುಳ್ಳ ಕೊಳದಹಾಗೆ ಮನೋಹರವಾಗಿ ಒಪ್ಪುತ್ತಿತ್ತು. ಆ ಬಳಿಕ ವಸಿಷ್ಠ ಮಹರ್ಷಿಯು ಶ್ರೀರಾಮನ ಅರಮನೆಯಿಂದ ದಶರಥರಾಯನ ಮನೆಗೆ ಬರುವಾಗ ಚೌಬೀದಿಮಾರ್ಗಗಳಲ್ಲಿ ಶ್ರೀರಾಮನ ಪಟ್ಟಾಭಿಷೇಕಮಹೋತ್ಸವವನ್ನು ನೋಡಬೇಕೆಂದು ಬಂದು ಇಟ್ಟಣಿಸಿದ್ದ ಜನಸಮೂಹದ ಸಂತೋಷಾತಿಶಯದಿಂದುಂಟಾದ ಕಲಕಲಧ್ವನಿಗಳು ಸುತ್ತಲೂ ಹರಡಿರಲು ಅಯೋಧ್ಯಾಪಟ್ಟಣವು ಸಮುದ್ರರಾಜನಂತೆ ಒಪ್ಪುತ್ತಿತ್ತು.


ಮುಂದುವರಿಯುವುದು...

# ಶಾಲೆಗಳಲ್ಲಿ 50,000 ಅಟಲ್ ಟಿಂಕರಿಂಗ್ ಪ್ರಯೋಗಾಲಯಗಳ ಸ್ಥಾಪನೆ

## ಕೇಂದ್ರ ಬಜೆಟ್ ಕುರಿತು ರಿಯಾನ್ ಎಜುನೇಷನ್ ಸರ್ವೀಸಸ್‌ನ ಸಿಓಓ ವಿನೋದ್ ಶರ್ಮಾ ಅವರ ಅಭಿಪ್ರಾಯ

• ಉದಯವಾಹಿನಿ, ಬೆಂಗಳೂರು

ಸರ್ಕಾರಿ ಶಾಲೆಗಳಲ್ಲಿ 50,000 ಅಟಲ್ ಟಿಂಕರಿಂಗ್ ಪ್ರಯೋಗಾಲಯಗಳ ಸ್ಥಾಪನೆಯಿಂದ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಸಂಶೋಧನೆ ಕುರಿತು ಕುತೂಹಲ, ಆಸಕ್ತಿ ಮೊಳೆಯಲಿದೆ. ವೈದ್ಯಕೀಯ ಕಾಲೇಜು ಸೀಟುಗಳ ಸಂಖ್ಯೆಯನ್ನು ಹೆಚ್ಚಿಸುವುದರಿಂದ ಆರೋಗ್ಯ ಸೇವಾ ಕ್ಷೇತ್ರದ ಅಗತ್ಯ ಪೂರೈಸಲು ಸಹಾಯವಾಗಲಿದೆ.



ಎಐ ಶಿಕ್ಷಣಕ್ಕೆ ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪನೆಗೆ ರೂ. 500 ಕೋಟಿ ಮೀಸಲಿಟ್ಟಿರುವುದು ವಿಶೇಷವಾಗಿದೆ. ಶಿಕ್ಷಣ ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿರಲು ಈ ಹೂಡಿಕೆ ನೆರವಾಗಲಿದೆ.

ಕೌಶಲ್ಯ ಅಭಿವೃದ್ಧಿಗೆ ಜಾಗತಿಕ ಮಟ್ಟದ ಕೌಶಲ್ಯ ಅಭಿವೃದ್ಧಿ ಸಂಸ್ಥೆಗಳ ಜೊತೆಗಿನ ಪಾಲುದಾರಿಕೆಯ ಮೂಲಕ ಐದು ರಾಷ್ಟ್ರ ಮಟ್ಟದ ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪನೆಯಿಂದ ಅತ್ಯುತ್ತಮ ಉದ್ಯೋಗಿಗಳ ಸಮೂಹವನ್ನು ಸೃಷ್ಟಿಸಲು ಸಹಾಯವಾಗಲಿದೆ.

1,000 ಐಟಿಐಗಳ ಉನ್ನತೀಕರಣವನ್ನು ಒಳಗೊಂಡಂತೆ ಕಳೆದ ವರ್ಷದ ಕೌಶಲ್ಯ ಅಭಿವೃದ್ಧಿ ಯೋಜನೆಗಳಿಗೆ ಹೋಲಿಸಿದರೆ ಅಂತರರಾಷ್ಟ್ರೀಯ ಮಟ್ಟದ ಅವಕಾಶಗಳನ್ನು ಗಳಿಸುವ ಸಾಮರ್ಥ್ಯ ಇರುವ ಕೌಶಲ್ಯಪೂರ್ಣ ಉದ್ಯೋಗಿಗಳ ಸಮೂಹವನ್ನು ರೂಪಿಸುವ ನಿಟ್ಟಿನಲ್ಲಿ ಸರ್ಕಾರವು ಹೆಚ್ಚಿಗೆ ಗಮನ ಹರಿಸಿರುವುದು ಇಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆ.

## ಕೇಂದ್ರ ಬಜೆಟ್ ಕುರಿತು ಅಕ್ಷಯ ಪಾತ್ರ ಫೌಂಡೇಶನ್‌ನ ಸಿಇಓ ಶ್ರೀ ಶ್ರೀಧರ್ ವೆಂಕಟ್ ಅಭಿಪ್ರಾಯ

• ಉದಯವಾಹಿನಿ, ಬೆಂಗಳೂರು



**2.0 ಯೋಜನೆಗಳು ಸುಸ್ಥಿರ ಅಭಿವೃದ್ಧಿ**

2025ರ ಕೇಂದ್ರ ಬಜೆಟ್ ನಲ್ಲಿ ಮಕ್ಕಳ ಪೋಷಣೆ ಮತ್ತು ಶಿಕ್ಷಣದ ಮೇಲೆ ಗಮನ ಹರಿಸಲಾಗಿರುವುದು ನಮಗೆ ಸಂತಸ ತಂದಿದೆ. ಶಾಲಾ ಮಕ್ಕಳ ಹಸಿವು ದೂರ ಮಾಡುವ ಮೂಲಕ ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸಲು ಶ್ರಮಿಸುತ್ತಿರುವ ನಮ್ಮ ಉದ್ದೇಶದ ಜೊತೆಗೆ ಸರ್ಕಾರ ಆಲೋಚನೆ ಹೊಂದಿಕೊಳ್ಳುತ್ತದೆ. ಅಪೌಷ್ಟಿಕತೆಯನ್ನು ತೊಡೆಯುವ ಉದ್ದೇಶದಿಂದ ಸರ್ಕಾರವು ಘೋಷಿಸಿರುವ ಸಶಕ್ತ ಅಂಗನವಾಡಿ ಮತ್ತು ಪೋಷಣ್ 2.0 ಯೋಜನೆಗಳು ಸುಸ್ಥಿರ ಅಭಿವೃದ್ಧಿ ಗುರಿ 2ರ ಪ್ರಕಾರ ಹಸಿವು ಮುಕ್ತ ಸಮಾಜ ಸೃಷ್ಟಿಸುವಲ್ಲಿ ಬಹಳ ಮಹತ್ವದ ಯೋಜನೆಗಳಾಗಿವೆ. ಈ ಯೋಜನೆಗಳು ಅಗತ್ಯ ಇರುವ ಕುಟುಂಬಗಳಿಗೆ ಪೌಷ್ಟಿಕಾಂಶಯುಕ್ತ ಆಹಾರ ಒದಗಿಸುವ ಮೂಲಕ ನೆರವು ಒದಗಿಸುತ್ತವೆ.

ಜೊತೆಗೆ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫುಡ್ ಟೆಕ್ನಾಲಜಿಯ ಸ್ಥಾಪನೆಯಿಂದ ಆಹಾರ ಸಂಸ್ಕರಣಾ ಪ್ರಕ್ರಿಯೆಗಳು ಉತ್ತಮಗೊಳ್ಳಲಿವೆ. ಸಾರ್ವಜನಿಕ ಆಹಾರ ವಿತರಣಾ ಕಾರ್ಯಕ್ರಮಗಳ ಗುಣಮಟ್ಟ ಮತ್ತು ವ್ಯಾಪ್ತಿ ಗಣನೀಯವಾಗಿ ಹೆಚ್ಚಲಿದೆ. ಬ್ರಾಡ್ ಬ್ಯಾಂಡ್ ಲಭ್ಯತೆ, ಎಐ ಆಧರಿತ ಕಲಿಕೆ ಮತ್ತು ಅಟಲ್ ಟಿಂಕರಿಂಗ್ ಲ್ಯಾಬ್ ಸ್ಥಾಪನೆ ಮುಂತಾದ ಡಿಜಿಟಲ್ ಶಿಕ್ಷಣ ಮೂಲಸೌಲಭ್ಯಗಳ ಮೇಲೆ ಮಾಡುತ್ತಿರುವ ಹೂಡಿಕೆಗಳಿಂದ ಸುಸ್ಥಿರ ಅಭಿವೃದ್ಧಿ ಗುರಿ 4ರಂತೆ ಗುಣಮಟ್ಟದ ಶಿಕ್ಷಣ ವ್ಯವಸ್ಥೆ ಹೊಂದುವುದು ಸಾಧ್ಯವಾಗಲಿದೆ.

ನಮ್ಮ ಡಿಜಿಟಲ್ ಶಿಕ್ಷಣ ಕಾರ್ಯಕ್ರಮವು ಈ ನಿಟ್ಟಿನಲ್ಲಿ ಈಗಾಗಲೇ ಉತ್ತಮ ಕಾರ್ಯ ಮಾಡುತ್ತಿದ್ದು, ಇದೀಗ ಡಿಜಿಟಲ್ ಮೂಲಸೌಕರ್ಯ ಹೆಚ್ಚಿಸಲು ಸರ್ಕಾರವು ನೆರವಾಗುತ್ತಿರುವುದರಿಂದ ನಮ್ಮ ವ್ಯಾಪ್ತಿ ಇನ್ನಷ್ಟು ವಿಸ್ತಾರಗೊಳ್ಳಲಿದೆ.

ನಾವು ಸರ್ಕಾರದ ಈ ಯೋಜನೆಗಳನ್ನು ಮುಕ್ತವಾಗಿ ಸ್ವಾಗತಿಸುತ್ತೇವೆ. ಭಾರತದಲ್ಲಿ ಮುಂದೆಯೂ ಯಾವುದೇ ಮಗು ಹಸಿವಿನ ಕಾರಣಕ್ಕೆ ಶಿಕ್ಷಣದಿಂದ ವಂಚಿತವಾಗದಂತೆ ನೋಡಿಕೊಳ್ಳಲು ಬದ್ಧರಾಗಿದ್ದೇವೆ. ನಮ್ಮ ಗುರಿ ಸಾಧನೆಗಾಗಿ ಸರ್ಕಾರ ಮತ್ತು ಇತರ ಪಾಲುದಾರರ ಜೊತೆಗೆ ಪಿಪಿಪಿ ಮಾದರಿಯಲ್ಲಿ ಕೆಲಸ ಮಾಡಲು ಅಕ್ಷಯ ಪಾತ್ರ ಫೌಂಡೇಶನ್ ಬದ್ಧವಾಗಿದೆ.''

## ಬಜೆಟ್ ಕುರಿತು ವಾಕರೂ ಸಂಸ್ಥೆಯ ಎಂಡಿ ಮತ್ತು ಸಿಐಎಫ್‌ಐ ಅಧ್ಯಕ್ಷರ ಅಭಿಪ್ರಾಯ



• ಉದಯವಾಹಿನಿ, ಬೆಂಗಳೂರು

2025ರ ಕೇಂದ್ರ ಬಜೆಟ್ ನಲ್ಲಿ ಘೋಷಿಸಲಾಗಿರುವ ಫೋಕಸ್ ಪ್ರೊಡಕ್ಟ್ ಸ್ಕೀಮ್ ಅನ್ನು ಭಾರತೀಯ ಪಾದರಕ್ಷೆ ಉದ್ಯಮಗಳ ಒಕ್ಕೂಟ ಸ್ವಾಗತಿಸುತ್ತದೆ. ಇದರಿಂದ ಭಾರತದ ಪಾದರಕ್ಷೆ ಕ್ಷೇತ್ರದ ಉತ್ಪಾದಕತೆ, ಗುಣಮಟ್ಟ ಮತ್ತು ಸ್ಪರ್ಧಾತ್ಮಕತೆ ಹೆಚ್ಚುವ ನಿರೀಕ್ಷೆ ಇದೆ. ಈ ಯೋಜನೆಯಿಂದ 22 ಲಕ್ಷ ವ್ಯಕ್ತಿಗಳಿಗೆ ಉದ್ಯೋಗ ಸೃಷ್ಟಿ,ರೂ.4 ಲಕ್ಷ ಕೋಟಿ ವಹಿವಾಟು ಸಾಧ್ಯತೆ, ರೂ.1.1 ಲಕ್ಷ ಕೋಟಿಗಿಂತ ಹೆಚ್ಚಿನ ರಫ್ತು ವಹಿವಾಟು ಉಂಟಾಗುವ ನಿರೀಕ್ಷೆ ಮಾಡಲಾಗಿದೆ. ಈ ಯೋಜನೆಯು ವಿನ್ಯಾಸ ಸಾಮರ್ಥ್ಯವನ್ನು ಹೆಚ್ಚಿಸಲಿದ್ದು, ಉತ್ತಮ ಗುಣಮಟ್ಟದ ಚರ್ಮ ರಹಿತ ಪಾದರಕ್ಷೆಗಳನ್ನು ತಯಾರಿಸಲು ಬೇಕಾದ ಸೂಕ್ತ ಯಂತ್ರೋಪಕರಣಗಳನ್ನು ಒದಗಿಸುವ ಮೂಲಕ ಪಾದರಕ್ಷೆ ಉದ್ಯಮಕ್ಕೆ ನೆರವಾಗಲಿದೆ. ಜೊತೆಗೆ ಭಾರತೀಯ ಚರ್ಮೋದ್ಯಮವನ್ನು ಕೂಡ ಬೆಳೆಸಲಿದೆ. ಈ ಯೋಜನೆಯು ಸಮರ್ಪಕವಾಗಿ ಅನುಷ್ಠಾನಗೊಂಡರೆ ದೇಶೀಯ ಕಚ್ಚಾವಸ್ತುಗಳ ಪರಿಸರ ವ್ಯವಸ್ಥೆ ಉತ್ತಮಗೊಳ್ಳಲಿದೆ ಮತ್ತು ರಫ್ತು ಹೆಚ್ಚಲಿದ್ದು, ವಿಕಸಿತ ಭಾರತ ಅಭಿಯಾನಕ್ಕೆ ಉತ್ತಮ ಕೊಡುಗೆ ದೊರೆಯಲಿದೆ. ಇವೆಲ್ಲದರಿಂದ ಸಣ್ಣ ಮತ್ತು ಮಧ್ಯಮ ಕೈಗಾರಿಗಳಿಗೆ ಬಲ ದೊರೆಯಲಿದೆ.

# ದೌರ್ಬಲ್ಯಗಳ ನಿವಾರಣೆಗೆ ಅಂಬೇಡ್ಕರ್ ಓದು ಅವಶ್ಯ

## ಅಂಬೇಡ್ಕರ್ ಅಂದರೆ ಶಕ್ತಿ, ಮಾನವತ್ವ, ಮಾನವೀಯತೆ, ಎಲ್ಲಾಕ್ಕಿಂತಲೂ ಮುಖ್ಯವಾಗಿ ಮನುಷ್ಯ ಪ್ರೀತಿ: ಪ್ರೊ.ಜೆ.ಕರಿಯಪ್ಪ ಮಾಳಿಗೆ

• ಉದಯವಾಹಿನಿ, ಚಿತ್ರದುರ್ಗ

ನಮ್ಮ ದೌರ್ಬಲ್ಯಗಳ ನಿವಾರಣೆಗಾಗಿ ಅಂಬೇಡ್ಕರ್ ಓದು ಅವಶ್ಯಕವಾಗಿದೆ. ಅಂಬೇಡ್ಕರ್ ಅಂದರೆ ಶಕ್ತಿ, ಮಾನವತ್ವ, ಮಾನವೀಯತೆ ಹಾಗೂ ಎಲ್ಲಾಕ್ಕಿಂತಲೂ ಮುಖ್ಯವಾಗಿ ಮನುಷ್ಯ ಪ್ರೀತಿ ಎಂದು ಸರ್ಕಾರಿ ಕಲಾ ಕಾಲೇಜು ಸ್ನಾತಕೋತ್ತರ ಕನ್ನಡ ವಿಭಾಗದ ಮುಖ್ಯಸ್ಥರು ಹಾಗೂ ಕುವೆಂಪು ಭಾಷಾ ಭಾರತಿ ಸದಸ್ಯ ಪ್ರೊ.ಜೆ.ಕರಿಯಪ್ಪ ಮಾಳಿಗೆ ಹೇಳಿದರು.

ನಗರದ ಸರ್ಕಾರಿ ಕಲಾ ಕಾಲೇಜು ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಡಾ.ಬಿ.ಆರ್. ಅಂಬೇಡ್ಕರ್ ಓದು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಂಬೇಡ್ಕರ್ ಆಲೋಚನೆಗಳು, ಚಿಂತನೆಗಳನ್ನು ಕೊಂಡೊಯ್ಯುವ ದೊಡ್ಡ ಜವಾಬ್ದಾರಿ ವಿದ್ಯಾರ್ಥಿಗಳ ಮೇಲಿದೆ. ಅಂಬೇಡ್ಕರ್ ಯಾವುದೇ ಒಂದು ಜಾತಿ, ಧರ್ಮ, ಸಮುದಾಯಕ್ಕೆ ಸೀಮಿತರಾದವರು ಅಲ್ಲ, ಅಂಬೇಡ್ಕರ್ ಮಾನವೀಯತೆಗೆ ಸೀಮಿತರಾದವರು ಎಂದು ಅಭಿಪ್ರಾಯಪಟ್ಟರು.


ಉದಯವಾಹಿನಿ ಚಿತ್ರ

**ಅಂಬೇಡ್ಕರ್ ಓದು ಎಂಬುವುದು ಒಂದು ಚೇತನ ಹಾಗೂ ಶಕ್ತಿಯನ್ನು ನೀಡುವ ಶಿರೋನಾಮೆಯಾಗಿದೆ. ಅಂಬೇಡ್ಕರ್ ಅವರು ವಿಶ್ವದ ಅನೇಕ ರಾಷ್ಟ್ರಗಳಿಗೆ ಭೇಟಿ ನೀಡಿ, ವಿವಿಧ ಸಂವಿಧಾನಗಳನ್ನು ಅಧ್ಯಯನ ಮಾಡುವ ಮೂಲಕ ದೇಶಕ್ಕೆ ಉತ್ತಮವಾದ ಸಂವಿಧಾನವನ್ನು ನಮಗೆ ತಂದುಕೊಟ್ಟಿದ್ದಾರೆ ಎಂದು ತಿಳಿಸಿದ ಅವರು, ಈ ದೇಶದಲ್ಲಿ ಅಸಮಾನತೆ, ಅಸಹನೆ, ಕೋಮುವಾದ, ಮನುವಾದ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೂ ಸಹ ಅಂಬೇಡ್ಕರ್ ನಿಲುವು, ಸಿದ್ಧಾಂತ ಅಗತ್ಯ**
**- ಪ್ರೊ.ಬಿ.ಟಿ.ತಿಪ್ಪೇರುದ್ರಸ್ವಾಮಿ, ಸರ್ಕಾರಿ ಕಲಾ ಕಾಲೇಜು ಪ್ರಾಂಶುಪಾಲ**

ಅಂಬೇಡ್ಕರ್ ಇಡೀ ವಿಶ್ವಕ್ಕೆ ಜ್ಞಾನ, ಬೆಳಕಾಗಿದ್ದು, ನಾವು ಆ ಬೆಳಕನ್ನು ಕಾಣಬೇಕಿದೆ. ಹಾಗಾಗಿ ಅಂಬೇಡ್ಕರ್ ಅವರ ಜ್ಞಾನ ತುಂಬಾ ಮುಖ್ಯ. ನಮ್ಮೊಳಗಿನ ಶಕ್ತಿ ತೋರಿಸುವವರು ಹಾಗೂ ಪ್ರಜ್ಞೆಯನ್ನು ಎಚ್ಚರಗೊಳಿಸುವ ಜಾಗೃತಿ ಅಂಬೇಡ್ಕರ್ ಎಂದರು.

**ಡಾ.ಬಿ.ಆರ್.ಅಂಬೇಡ್ಕರ್ ರಚಿಸಿದ ಸಂವಿಧಾನ ಜೀವಪರ, ಮನುಷ್ಯಪರವಾದುದು. ಸಂವಿಧಾನವನ್ನು ಸಮಗ್ರವಾಗಿ ಅಧ್ಯಯನ ಮಾಡಿ ನೋಡಿದಾಗ ಎಲ್ಲಿಯೂ ಕೂಡ ಒಂದು ಜಾತಿ, ಧರ್ಮ, ವರ್ಗವನ್ನು ಹೇಳಿಲ್ಲ. ಪ್ರತಿಯೊಬ್ಬರು ಸಹ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದಿಂದ ಬದುಕಬೇಕು ಎಂಬ ಆಶಯವನ್ನು ಸಂವಿಧಾನ ಹೊಂದಿದೆ ಎಂದು ಹೇಳಿದರು.**

ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕ ಡಾ.ಜೆ.ಮೋಹನ್ ಉಪನ್ಯಾಸ ನೀಡಿ, ನಮಗೆ ಜೀವ ಕೊಟ್ಟವರು ತಾಯಿ-ತಾಯಿಗಳಾದರೆ, ಬದುಕಿಗೆ ಬೆಳಕಾದವರು ಡಾ.ಬಿ.ಆರ್.ಅಂಬೇಡ್ಕರ್ ಎಂಬ ಅರಿವು ಪ್ರತಿಯೊಬ್ಬರಿಗೂ ಇರಬೇಕು ಎಂದು ಹೇಳಿದರು. ವಕೀಲ ಎಂ.ರಮೇಶ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಿ.ಎಂ.ಗುರುನಾಥ ಮಾತನಾಡಿದರು.

ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಲೀಲಾವತಿ ಅವರು ಸಂವಿಧಾನ ಪೀಠಿಕೆ ಬೋಧಿಸಿದರು. ಅಂಬೇಡ್ಕರ್ ಓದು ಕಾರ್ಯಕ್ರಮದ ಅಂಗವಾಗಿ ರಸಪ್ರಶ್ನೆ, ಪ್ರಬಂಧ, ಆಶುಭಾಷಣ ಹಾಗೂ ಕವನ ವಾಚನ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಸರ್ಕಾರಿ ಕಲಾ ಕಾಲೇಜು ಐಕ್ಯೂಎಸಿ ಸಂಚಾಲಕರಾದ ಪ್ರೊ.ಆರ್.ತಾರಿಣಿ ಶುಭದಾಯಿನಿ, ಪರೀಕ್ಷಾ ನಿಯಂತ್ರಕ ಡಾ.ಬಿ. ಸುರೇಶ, ಕಾಲೇಜು ಅಧ್ಯಾಪಕರ ಸಂಘ ಕಾರ್ಯದರ್ಶಿ ಡಾ.ಆರ್.ಗಂಗಾಧರ, ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಆರ್.ಶಿವಪ್ಪ, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಗಿರೀಶ್ ನಾಯಕ, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಶ್ಯಾಮ್ ರಾಜ್ ಸೇರಿದಂತೆ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳು ಇದ್ದರು.

# ಅಂಬೇಡ್ಕರ್ ಸಮಾನ ಮನಸುಳ್ಳವರಿಗೆ 78ಕ್ಷೇತ್ರ ಬಿಡಿವೆಂದಿದರು:ಮನುವಾದಿಗಳ ಮೋಸ

• ಉದಯವಾಹಿನಿ,ಚಿಂಚೋಳಿ



ಡಾ ಬಿ.ಆರ್.ಅಂಬೇಡ್ಕರ್ ಅವರು ಸಮಾನ ಮನಸುಳ್ಳವರಿಗೆ 78ಕ್ಷೇತ್ರ ಬಿಟ್ಟುಬಿಡಿ ಎಂದು ಹೇಳಿದ್ದು ಆದರೆ ಆಗಿನ ಮನುವಾದಿಗಳು ಎಂಜಲುಗಾಸಿಗೆ ಮಾತಮಂತ್ರ ಮನುವಾದಿಗಳು 78ಕ್ಷೇತ್ರ ಬಿಡಿ ನಿಮಗೆ ಸರಿಸಮಾನವಾಗಿ ನೋಡಿಕೊಳ್ಳುತ್ತೇವೆಂದು ಸುಳ್ಳು ಹೇಳಿ ಅಂಬೇಡ್ಕರ್ ಅವರಿಗೆ ಮೋಸ ಮಾಡಿದ ಮನುವಾದಿಗಳಿಗೆ ನಾವೆಂದು ಕ್ಷಮಿಸುವುದಿಲ್ಲಾ,ಮನಸ್ಮೃತಿ ಸಂವಿಧಾನ ತರುವುದಕ್ಕೆ ಬಿಡುವುದಿಲ್ಲ ಎಂದು ಸಮಾಜಿಕ ಮತ್ತು ರಾಜಕೀಯ ಚಿಂತಕ ಶರಣಪ್ಪಾ ಮಾಳಗಿ ಹೇಳಿದರು. ಪತ್ರಿಕಾ ಪ್ರಕಟಣೆ ಹೊರಡಿಸಿದ ಅವರು,ದೇಶದಲ್ಲಿ ಬಿಜೆಪಿ ನೀಚ ಮತ್ತು ಮನುವಾದಿ ಮನಸುಳ್ಳವರಿಂದ ಫೆ.03ಕ್ಕೆ ಹೊಸ ಸಂವಿಧಾನ ಅಂಶಗಳು ಬೈರಂಗವಾಗಿ ತಿಳಿಸಲು ಸಿದ್ದರಾಗಿದ್ದು ಮನುವಾದಿಗಳಿಗೆ ತಕ್ಕಪಾಠ ಕಲಿಸಲೇಬೇಕು.

ಮನುಸ್ಮೃತಿ ಸಂವಿಧಾನ ಹೊರಗೆಬಂದರೆ ಜನಸಾಮಾನ್ಯರಿಗೆ ಬಡವರಿಗೆ ಅನೇಕ ವರ್ಗಗಳಿಗೆ ಉಳಿಯುವಿಲ್ಲ,ಈಗಾಗಲೇ ವಿಶ್ವದಲ್ಲೇ ಅತ್ಯಂತ ದೊಡ್ಡ ಸಂವಿಧಾನ ಅಂಬೇಡ್ಕರ್ ನೀಡಿ ಎಲ್ಲಾ ಜಾತಿಧರ್ಮವರಿಗೆ ಸಮಾನವಾದ ಹಕ್ಕು ಮೀಸಲಾತಿ ನೀಡಿದೆ,ಪ್ರಾಣಿಯಾಗಲಿ ಮನುಷ್ಯನಾಗಲಿ ಯಾರಿಗೂ ಅನ್ಯಾಯ ಅನಾಹುತ ಆಗದಂತೆ ಸಂವಿಧಾನ ಅಂಬೇಡ್ಕರ್ ನೀಡಿದ್ದಾರೆ ಆದರೆ ಕೆಲ ಮನುವಾದಿಗಳು ಮನಸ್ಮೃತಿ ಸಂವಿಧಾನ ಜಾರಿಗೆ ಮಾಡಲು ಕೆಲ ಮಾತಮಂತ್ರ ಕಲಿತವರು ಮತ್ತು ರಾಜಕೀಯದ ಕೆಲ ಮಂತ್ರಿಗಳು ಕೂಡಿಕೊಂಡು ಹೊಸ ಸಂವಿಧಾನ ತರುವುದಕ್ಕೆ ಸಿದ್ದರಾಗಿದ್ದು ಇಂಥಹ ಮನಸ್ಸುಳ್ಳವರಿಗೆ ಖಂಡಿಸುತ್ತೇನೆ. ಹಾಗಾಗಿ ಎಲ್ಲಾ ವರ್ಗದ ಮಠಾಧೀಶರು ವಿಧ್ಯೆಬುದ್ಧಿ ಜೀವಿಗಳು ಮತ್ತು ರಾಜಕಾರಣಿಗಳು ಸಮಾಜೀಕ ಮತ್ತು ರಾಜಕೀಯ ಚಿಂತಕರು ವಿಧ್ಯಾರ್ಥಿಗಳು ಮಹಿಳೆಯರು ಸೇರಿಕೊಂಡು ಅದಷ್ಟು ಬೇಗನೇ ಹೋರಾಟಕ್ಕೆ ಸಿದ್ದರಾಗಿ ಯಾವುದೇ ಕಾರಣಕ್ಕೂ ಮನುಸ್ಮೃತಿ ಸಂವಿಧಾನ ಜಾರಿಗೆ ಮಾಗಲು ಬಿಡಬಾರದು,ಮುಂದಿನ ಮಕ್ಕಳ ಭವಿಷ್ಯಕ್ಕಾಗಿ ಹೋರಾಡಬೇಕಾಗಿದೆ ನೀಚಗೇಡಿ ಮನುವಾದಿಗಳ ಜೋತೆ ಇರುವುದಕ್ಕಿಂತ ಸರಿಸಮಾನವಾದ ಮನಸುಳ್ಳವರ ಜೋತೆ ಸೇರಿಕೊಂಡು ದೇಶದ ಐಕ್ಯತೆಗೆ ಹೋರಾಟ ಮಾಡಬೇಕಾಗಿದೆ, ಭಾರತ ದೇಶವು ಜಾತ್ಯಾತೀತ ದೇಶವಾಗಿದ್ದು ಎಲ್ಲಾ ಜಾತಿಧರ್ಮದವರು ಒಗ್ಗಟ್ಟಿನಿಂದ ಇರುವುದೆ ಭಾರತ ದೇಶದ ಸಂವಿಧಾನವಾಗಿದೆ ಎಂದರು.

# ಪುಸ್ತಕ ಸಂಗ್ರಹ ಅಭಿಯಾನ ಮಕ್ಕಳಿಗೆ ಕಥೆ; ಅಮ್ಮಂದಿರು ಕಾತರ

• ಉದಯವಾಹಿನಿ, ಮಂಗಳೂರು

ಅಮ್ಮ ಮತ್ತು ಮಗುವಿನ ಕಾಳಜಿಯ ಕಳಕಳಿಯೊಂದಿಗೆ ಚಟುವಟಿಕೆ ನಡೆಸುತ್ತಿರುವ ಮಾಮ್ಸ್ ಆಫ್ ಮಂಗಳೂರು ಗ್ರೂಪ್ ಹೊಸದೊಂದು ಪ್ರಯತ್ನಕ್ಕೆ ಮುಂದಾಗಿದೆ. ತಾಯಂದಿರಿಂದ ಕಥೆ ಪುಸ್ತಕಗಳನ್ನು ಸಂಗ್ರಹಿಸಿ, ಗ್ರಾಮೀಣ ಸರ್ಕಾರಿ ಶಾಲೆಯ ಮಕ್ಕಳಿಗೆ ಅವುಗಳನ್ನು ನೀಡುವ ಮೂಲಕ ಅವರ ಮೊಗದಲ್ಲಿ ನಗು ಅರಳಿಸಲಿದೆ. ನಗುವಿಗಾಗಿ ಕಥೆಗಳು ಎಂಬ ಕಾರ್ಯಕ್ರಮ ರೂಪಿಸಿರುವ ಮಾಮ್ಸ್ ಆಫ್ ಮಂಗಳೂರು ತಂಡವು ಮಂಗಳೂರು ವಿಶ್ವವಿದ್ಯಾಲಯದ ನೆಹರೂ ಚಿಂತನ ಕೇಂದ್ರದ ಸಹಯೋಗದಲ್ಲಿ ಕಥೆ ಪುಸ್ತಕ ಸಂಗ್ರಹ ಕಾರ್ಯ ಪ್ರಾರಂಭಿಸಿದೆ. ಈಗಾಗಲೇ 130ಕ್ಕೂ ಹೆಚ್ಚು ಪುಸ್ತಕಗಳು ಮಾಮ್ಸ್ ಒಡಲಿಗೆ ಸೇರಿವೆ ಒಂಬತ್ತು ವರ್ಷಗಳಿಂದ ವಿವಿಧ ಚಟುವಟಿಕೆ ನಡೆಸುತ್ತಿರುವ ಮಾಮ್ಸ್ ಆಫ್ ಮಂಗಳೂರು, ಫೇಸ್ ಬುಕ್ ಮೂಲಕ ಜನ್ಮತಳೆದು, 42 ಸಾವಿರ ಸದಸ್ಯರನ್ನು ಹೊಂದಿದೆ. ಈ ಗ್ರೂಪ್‌ನಲ್ಲಿ ಇರುವವರೆಲ್ಲ ಮಂಗಳೂರಿನವರು ಅಥವಾ ಮಂಗಳೂರು ಮೂಲದವರಾಗಿ ದೇಶ, ವಿದೇಶಗಳಲ್ಲಿ ಇರುವವರು.


ಉದಯವಾಹಿನಿ ಚಿತ್ರ

**ಒಂದರಿಂದ 10ನೇ ತರಗತಿವರೆಗಿನ ಮಕ್ಕಳಿಗೆ ಮುದ ನೀಡುವ ಕಥೆ ಪುಸ್ತಕಗಳನ್ನು ಸಂಗ್ರಹಿಸುತ್ತಿದ್ದೇವೆ. ಈಗಾಗಲೇ ಮಂಗಳೂರು ಸುತ್ತಮುತ್ತ, ಬೆಂಗಳೂರು, ಧಾರವಾಡ ಇನ್ನಿತರ ಕಡೆಗಳಿಂದ ಅನೇಕ ತಾಯಂದಿರು ಕರೆ ಮಾಡಿ ಪುಸ್ತಕ ಕಳುಹಿಸುವುದಾಗಿ ಹೇಳಿದ್ದಾರೆ ಎಂದು ಮಾಮ್ಸ್ ಆಫ್ ಮಂಗಳೂರು ಗ್ರೂಪ್ ಸದಸ್ಯೆಯಾಗಿರುವ ನೆಹರೂ ಚಿಂತನ ಕೇಂದ್ರ ಸಂಶೋಧನಾ ಸಹಾಯಕಿ ನಯನಾ ಕೃಷ್ಣಾಪುರ ತಿಳಿಸಿದರು.**


2021ರಲ್ಲಿ ಇಎಲ್‌ಸಿ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ಪುಸ್ತಕ ಸಂಗ್ರಹ ಅಭಿಯಾನ ನಡೆಸಲಾಗಿತ್ತು. ಆಗ ಸಂಗ್ರಹವಾದ ಸುಮಾರು 700 ಪುಸ್ತಕಗಳನ್ನು ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳಿಗೆ ವಿತರಿಸಲಾಗಿತ್ತು ಎನ್ನುತ್ತಾರೆ ಮಾಮ್ಸ್ ಆಫ್ ಮಂಗಳೂರು ಟ್ರಸ್ಟ್ ಸ್ಥಾಪಕಿ ಲಿವಿಯಾ ಕಾರ್ಡೋಜಾ. ಹಿಂದಿನ ಅಭಿಯಾನದ ಯಶಸ್ಸಿನಿಂದ ಉತ್ಸುಕರಾಗಿ ಈ ಬಾರಿ ಮತ್ತೆ ಅಭಿಯಾನ ಕೈಗೆತ್ತಿಕೊಂಡಿದ್ದೇವೆ.

# ವಕೀಲರು ತಮ್ಮ ವೃತ್ತಿ ಬದುಕಿನ ಜೊತೆಗೆ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು: ಡಾ. ಚಂದ್ರಕಾಂತ

• ಉದಯವಾಹಿನಿ, ಚಿತ್ರದುರ್ಗ

ವಕೀಲರು ಸಮಾಜಿಕ ಚಟುವಟಿಗಳಲ್ಲಿ ಹೆಚ್ಚು ಕಡಿಮೆ ತೊಡಗಿಸಿಕೊಂಡಿದ್ದು ಅವರ ಸಮಾಜ ಸೇವೆಯಂತಹ ಜೀವನದಲ್ಲಿ ಅನೇಕ ಒತ್ತಡಗಳಲ್ಲಿ ಕೆಲಸ ಮಾಡಬೇಕಾಗುತ್ತದೆ ಆದ್ದರಿಂದ ವಕೀಲರು ತಮ್ಮ ಕೆಲಸದ ಜೊತೆಗೆ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಬೇಕು ಎಂದು ಚಿತ್ರದುರ್ಗ ಜಿಲ್ಲಾ ಆಯುಷ್ ಅಧಿಕಾರಿ ಡಾ. ಚಂದ್ರಕಾಂತ್ ನಾಗಸಮುದ್ರ ಅಭಿಪ್ರಾಯ ಪಟ್ಟಿದ್ದಾರೆ.

ಅವರು ಶುಕ್ರವಾರ ಚಿತ್ರದುರ್ಗ ಜಿಲ್ಲಾ ಆಯುಷ್ ಇಲಾಖೆ, ಜಿಲ್ಲಾ ವಕೀಲರ ಸಂಘ ಹಾಗೂ ನ್ಯಾಯಾಂಗ ಇಲಾಖೆ ಸಹಯೋಗದೊಂದಿಗೆ ಜಿಲ್ಲಾ ವಕೀಲರ ಸಂಘದ ಸಭಾಂಗಣದಲ್ಲಿ ಆಯುಷ್ ಇಲಾಖೆ ವತಿಯಿಂದ ವಕೀಲರಿಗಾಗಿ ಹಮ್ಮಿಕೊಳ್ಳಲಾಗಿದ್ದ ಉಚಿತ ಆರೋಗ್ಯ ತಪಾಸಣೆ ಹಾಗೂ ಔಷಧ ವಿತರಣೆ ಶಿಬಿರವನ್ನುದ್ದೇಶಿಸಿ ಅವರು ಮಾತನಾಡಿ



ಉದಯವಾಹಿನಿ ಚಿತ್ರ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ವಕೀಲರ ಸಂಘದ ಅಧ್ಯಕ್ಷ ತಿಪ್ಪೇಸ್ವಾಮಿ ಅವರು ಇಂದಿನ ಒತ್ತಡದ ಬದುಕಿಗೆ ಹಾಗೂ ಜೀವನಶೈಲಿ ಜನ್ಯ ವ್ಯಾಧಿಗಳಿಗೆ ಆಯುಷ್ ಚಿಕಿತ್ಸಾ ಪದ್ಧತಿಯು ಉತ್ತಮ ವೈದ್ಯ ಪದ್ಧತಿ ಯಾಗಿದ್ದು. ನಾವೆಲ್ಲರೂ ಆಯುಷ್ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳಬೇಕಿದೆ ಎಂದು ತಿಳಿಸಿದರು. ಕಾರ್ಯಕ್ರಮವನ್ನು ಜಿಲ್ಲಾ ವಕೀಲರ ಸಂಘದ ಕಾರ್ಯದರ್ಶಿಗಳಾದ ಶ್ರೀ ಗಂಗಾಧರ್ ಅವರು ನಿರೂಪಿಸಿದರು. ಡಾ. ಶಿವಕುಮಾರ್ ಪ್ರಸ್ತಾವಿಕ ನುಡಿಯಲ್ಲಿ ಈ ಶಿಬಿರದಲ್ಲಿ ದೊರೆಯುವ ಸೇವೆಗಳನ್ನು ವಿವರಿಸಿದರು. ಡಾ. ನಾರದಮುನಿಯವರು ಅತಿಥಿಗಳಿಗೆ ಔಷಧೀಯ ಸಸ್ಯ ಗಳನ್ನು ನೀಡಿ ಸ್ವಾಗತಿಸಿದರು.

**ಆಯುಷ್ ಆರೋಗ್ಯ ಶಿಬಿರವನ್ನು ಔಷಧಿಯ ಸಸ್ಯಗಳಿಗೆ ನೀರೆರೆಯುವುದರ ಮುಖಾಂತರ ಪ್ರಧಾನ ನ್ಯಾಯಾಧೀಶರಾದ ಶ್ರೀ ವಾಸುದೇವ ರೋಣ ಅವರು ಉದ್ಘಾಟಿಸಿ ಮಾತನಾಡಿ ನ್ಯಾಯಾಧೀಶರು ಆರೋಗ್ಯ ರಕ್ಷಣೆ ಎಲ್ಲಾರ ಆದ್ಯ ಕರ್ತವ್ಯ ನಮ್ಮ ನಿತ್ಯ ಕೆಲಸಗಳ ಜೊತೆಗೆ ಆರೋಗ್ಯದ ಕಡೆ ಗಮನವನ್ನು ಹರಿಸಬೇಕಿದೆ. ಎಂದು ಕರೆ ನೀಡಿದರು**

### ಉಚಿತ ಆರೋಗ್ಯ ಶಿಬಿರ

**ವಕೀಲರಿಗಾಗಿ ಚಿತ್ರದುರ್ಗ ಜಿಲ್ಲಾ ಆಯುಷ್ ಇಲಾಖೆಯಿಂದ ಈಗಾಗಲೇ ಒಮ್ಮೆ ಉಚಿತ ಆರೋಗ್ಯ ಶಿಬಿರ ನಡೆ ಸಿದ್ದು ಅಭೂತಪೂರ್ವ ಯಶಸ್ಸು ಕಂಡಿತ್ತು ಇದು ಎರಡನೇ ಶಿರವಾಗಿದ್ದು ಈ ಹಿಂದಿನ ಶಿಬಿರದಲ್ಲಿ ಸುಮಾರು 390 ಜನರು ಪ್ರಯೋಜನವನ್ನು ಪಡೆದಿ ದ್ದರು. ಈ ಶಿಬಿರವನ್ನು ಸಹ ಹೆಚ್ಚಿನ ಪ್ರಮಾಣದಲ್ಲಿ ಪ್ರಯೋಜನ ಪಡೆದು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.**

ಡಾ. ನಾಗರಾಜ್ ನಾಯ್ಕ್ ಅವರು ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಆಯುಷ್ ವೈದ್ಯಾಧಿಕಾರಿಗಳು, ಜಿಲ್ಲಾ ಆಯುಷ್ ಘಟಕದ ವೈದ್ಯರು ಹಾಗೂ ಸಿಬ್ಬಂದಿಯವರು, ಆರೋಗ್ಯ ಹಾಗು ಕುಟುಂಬ ಕಲ್ಯಾಣ ಇಲಾಖೆಯ ಸಮುದಾಯ ಸಮುದಾಯ ಆರೋಗ್ಯಾಧಿಕಾರಿಗಳು ಇತರ ಸಿಬ್ಬಂದಿ ಹಾಜರಿದ್ದರು.

# ಶ್ರೀಗಳು, ಸಚಿವ ಶಿವರಾಜ್ ತಂಗಡಗಿಯವರಿಂದ ಜಿಯೋ ಬಿಪಿ ಚಂದನ ಪೆಟ್ರೋಲಿಯಂನ ಬಂಕ್ ಉದ್ಘಾಟನೆ

• ಉದಯವಾಹಿನಿ ಕಾರಟಗಿ

ವಿಜಯನಗರ ಜಿಲ್ಲೆಯ ಮರಿಯಮ್ಮನಹಳ್ಳಿ ತಾಲ್ಲೂಕಿನ ಹರೋಹನಹಳ್ಳಿ ಗ್ರಾಮದ ರಾಷ್ಟ್ರೀಯ ಹೆದ್ದಾರಿ-50 ರಸ್ತೆ, ಯಲ್ಲಿ ಜಿಯೋ ಬಿಪಿ ಚಂದನ ಪೆಟ್ರೋಲಿಯಂ ಡೀಲರ್ - ರಿಲಯನ್ಸ್ ಬಿಪಿ ಮೊಬಿಲಿಟಿ ಲಿಮಿಟೆಡ್. ಬಂಕ್‌ನ ಉದ್ಘಾಟನೆಯನ್ನು 31 ಜನವರಿಯಂದು ಪೂಜ್ಯ ಶ್ರೀ 2008 ಬಸವ ಜಯಮೃತ್ಯುಂಜಯ ಸ್ವಾಮೀಜಿ ಲಿಂಗಾಯತ ಪಂಚಮಸಾಲಿ ಪೀಠ, ಕೂಡಲಸಂಗಮ.ಆಶೀರ್ವಾದದೊಂದಿಗೆ ಪೂಜ್ಯ ಶ್ರೀ ನೀಲಕಂಠಯ್ಯ ತಾತನವರು ಸುಕ್ಷೇತ್ರ ಮ.ಗುಡದೂರು, ಪೂಜ್ಯ ಶ್ರೀ ಭುವನೇಶ್ವರಯ್ಯ ತಾತನವರು ಬೃಹನ್ಮಠ, ಸುಲೇಕಲ್, ಪೂಜ್ಯ ಶ್ರೀ ಭೀಮೇಶಪ್ಪ ಅಪ್ಪಾಜಿಯವರು ಆರಾಧಕರು, ಅಗ್ನಿಕೊಂಡ ದ್ಯಾವಮ್ಮದೇವಿ ದೇವಸ್ಥಾನ, ಕಾರಟಗಿ, ಇವರುಗಳ ದಿವ್ಯ ಸಾನಿಧ್ಯದಲ್ಲಿ ಮುಖ್ಯ ಅತಿಥಿ ಶ್ರೀ ಶಿವರಾಜ್ ಎಸ್. ತಂಗಡಗಿ ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ, ಹಿಂದುಳಿದ ವರ್ಗಗಳ ಸಚಿವರು, ಉದ್ಘಾಟಿಸಿದರು.


ಉದಯವಾಹಿನಿ ಚಿತ್ರ

**ರಿಲಯನ್ಸ್‌ಬಿಪಿ ಮೊಬಿಲಿಟಿ ಲಿಮಿಟೆಡ್**

ಈ ಸಂದರ್ಭದಲ್ಲಿ ಶ್ರೀ ನೇಮಿರಾಜ್ ನಾಯಕ್ ಸನ್ಮಾನ್ಯ ಶಾಸಕರು, ಹಗರಿಬೊಮ್ಮನಹಳ್ಳಿ ಗೌರವಾನ್ವಿತ ಅತಿಥಿಗಳು ಶ್ರೀ ವಿಪಿನ್ ಸಪ್ರೆ,ರಾಜ್ಯ ಮುಖ್ಯಸ್ಥ ರಿಲಯನ್ಸ್ ಬಿಪಿ ಮೊಬಿಲಿಟಿ ಲಿಮಿಟೆಡ್. ಶ್ರೀ ಸಂಗಣ್ಣ ಕರಡಿ ಸನ್ಮಾನ್ಯ ಮಾಜಿ ಸಂಸದರು, ಕೊಪ್ಪಳ ಅಧ್ಯಕ್ಷರು ಮತ್ತು ಸದಸ್ಯರು - ಗ್ರಾಮ ಪಂಚಾಯತ್, ಚಿಲಕನಹಟ್ಟಿ,ಶರಣಗೌಡ ಸಂಗನಗೌಡ ಪೊ.ಪಾ. ತಾವರಗೇರಾ ಚನ್ನಬಸಪ್ಪ ವೀರಪ್ಪ ಸುಂಕದ್ ಕಾರಟಗಿ ಪ್ರದೀಪ್ ಕೊಟ್ರೇಶ್ ಬಾವಿ ಹಗರಿಬೊಮ್ಮನಹಳ್ಳಿ, ರಾಜಶೇಖರ್ ಸುಂಕದ್ ಕಾರಟಗಿ ಸೇರಿದಂತೆ ಮತ್ತಿತರರಿದ್ದರು.

# ಬೆಲ್ಲಕ್ಕೆ ಉತ್ತಮ ದರ, ಕಾರ್ಮಿಕರದ್ದೇ ಬರ

• ಉದಯವಾಹಿನಿ, ಬೆಳಗಾವಿ

ತಾಲ್ಲೂಕಿನ ಸಾಂಬ್ರಾ, ಮೋದಗಾ ಗ್ರಾಮಗಳಲ್ಲಿ ಪ್ರಸಕ್ತ ಹಂಗಾಮಿನಲ್ಲಿ ತಡವಾಗಿಯಾದರೂ ಆಲೆ ಮನೆ ಆರಂಭಗೊಂಡಿವೆ. ಇಲ್ಲಿ ತಯಾರಿಸುತ್ತಿರುವ ಬೆಲ್ಲಕ್ಕೆ ಮಾರುಕಟ್ಟೆಯಲ್ಲಿ ಬೇಡಿಕೆಯೂ ಹೆಚ್ಚಿದೆ. ಉತ್ತಮ ದರವೂ ಸಿಕ್ಕಿದೆ. ಆದರೆ, ಬೆಲ್ಲ ಸಿದ್ಧ ಪಡಿಸಲು ಕಾರ್ಮಿಕರೇ ಸಿಗುತ್ತಿಲ್ಲ.

ಹಾಗಾಗಿ ಆಲೆಮನೆಗಳ ಮಾಲೀಕರು ಪರದಾಡುವಂತಾಗಿದೆ. ಕಳೆದ ವರ್ಷ ಬೆಳಗಾವಿಯಲ್ಲಿ ಕ್ವಿಂಟಲ್ ಬೆಲ್ಲ 3,500ರಿಂದ 4 ಸಾವಿರದವರೆಗೆ ದರವಿತ್ತು. ಈ ಬಾರಿ 4,200ರಿಂದ 4,500ರವರೆಗೆ ದರವಿದೆ. ಗುಣಮಟ್ಟದ ಬೆಲ್ಲ ಇನ್ನೂ ಹೆಚ್ಚಿನ ದರಕ್ಕೂ ಮಾರುತ್ತಿದೆ. ಈ ಹಿಂದೆ ಆಲೆಮನೆಗಳಲ್ಲಿ ದಿನಕ್ಕೆ 5 ಕೊಪ್ಪರಿಗೆ ಬೆಲ್ಲ ತಯಾರಿಸಲಾಗುತ್ತಿತ್ತು. ನಸುಕಿನ ಜಾವ 5ಕ್ಕೆ ಆಲೆಮನೆಗಳಲ್ಲಿ ಒಲೆ ಹೊತ್ತಿದರೆ, ಇಳಿಹೊತ್ತಿನವರೆಗೂ ಬೆಲ್ಲದ ಘಮ ಹರಡುತ್ತಿತ್ತು. ಪ್ರತಿ ಆಲೆಮನೆಯಲ್ಲಿ ಕನಿಷ್ಠ 16 ಕಾರ್ಮಿಕರು ಹಗಲಿಡೀ ದುಡಿಯುತ್ತಿದ್ದರು. ಆದರೆ, ಕಾರ್ಮಿಕರ ಅಭಾವದಿಂದಾಗಿ ಈಗ ಪ್ರತಿ ಆಲೆಮನೆಯಲ್ಲಿ 3ರಿಂದ 4 ಕೊಪ್ಪರಿಗೆ ಬೆಲ್ಲವನ್ನಷ್ಟೇ ತಯಾರಿಸಲಾಗುತ್ತಿದೆ. ಕೆಲವೊಮ್ಮೆ ಎರಡೇ ಕೊಪ್ಪರಿಗೆ ಸಿದ್ಧವಾಗುತ್ತಿದೆ.


ಉದಯವಾಹಿನಿ ಚಿತ್ರ

ಕಾರ್ಮಿಕರ ಕೊರತೆ ಉಂಟಾಗಿರುವುದು ಕುಟುಂಬದವರೆಲ್ಲರೂ ಕೆಲಸ ಮಾಡಿ, ಹೇಗೋ ಆಲೆಮನೆ ನಡೆಸುತ್ತಿದ್ದೇವೆ. ಹಿಂದಿನ ವರ್ಷದ ಹಂಗಾಮುಗಳಲ್ಲಿ ಸರಾಸರಿ 3 ತಿಂಗಳವರೆಗೆ ಆಲೆಮನೆ ನಡೆಯುತ್ತಿದ್ದವು. ಈಗ ಒಂದೆರಡು ತಿಂಗಳು ನಡೆಸುವುದು ಕಷ್ಟವಾಗಿದೆ. ಈ ಹಿಂದೆ ಸಾಂಬ್ರಾದಲ್ಲಿ 18 ಆಲೆಮನೆ ಬೆಲ್ಲ ತಯಾರಿಸುತ್ತಿದ್ದವು. ಪ್ರಸ್ತುತ ನಾ ಚಾಲ್ತಿಯಲ್ಲಿವೆ' ಎಂದರು. 'ಇಡೀ ದಿನ ದುಡಿದರೂ 300 ವೇತನ ಸಿಗುವುದಿಲ್ಲ.

ಎರಡೂರು ಕೊಪ್ಪರಿಗೆ ಬೆಲ್ಲವಷ್ಟೇ ತಯಾರಾದರೆ, 200 ಖಾತ್ರಿಯೂ ಇಲ್ಲ. ಇಂದಿನ ದುಬಾರಿ ಯುಗದಲ್ಲಿ ಅಷ್ಟೊಂದು ಹಣದಲ್ಲಿ ಬದುಕಲು ಸಾಧ್ಯವೇ. ಹಾಗಾಗಿ ಕಾರ್ಮಿಕರು ಇತ್ತ ಸುಳಿಯುತ್ತಿಲ್ಲ' ಎಂದು ಕಾರ್ಮಿಕರು ಹೇಳುತ್ತಾರೆ.

**ಒಂದು ಕೊಪ್ಪರಿಗೆಯಲ್ಲಿ ಒಂದೂವರೆ ಕ್ವಿಂಟಲ್ ಬೆಲ್ಲ ತಯಾರಿಸುತ್ತೇವೆ. ದಿನಕ್ಕೆ 5 ಕೊಪ್ಪರಿಗೆ ಬೆಲ್ಲ ಸಿದ್ಧವಾದರೆ, ಕಾರ್ಮಿಕರಿಗೆ ವೇತನದ ರೂಪದಲ್ಲಿ 6 ಕೆ.ಜಿ ಬೆಲ್ಲ ಕೊಡಲಾಗುತ್ತದೆ. ಈಗ ಕೆ.ಜಿಗೆ 45 ದರವಿದ್ದು, 270 ಸಿಗುತ್ತದೆ. ಆದರೆ, ಗ್ರಾಮದಲ್ಲಿ ಬೇರೆ ಕೆಲಸಕ್ಕೆ ಹೋದರೆ ಅವರಿಗೆ ದಿನಕ್ಕೆ 300ರಿಂದ 400 ಕೂಲಿ ಸಿಗುತ್ತಿದೆ. ಹಾಗಾಗಿ ಆಲೆಮನೆಗೆ ಹೆಚ್ಚಿನವರು ಬರುತ್ತಿಲ್ಲ**
**-ಪ್ರಭಾಕರ ಯಡ್ಡಿ,**
**ಸಾಂಬ್ರಾದ ಆಲೆ ಮನೆ ಮಾಲೀಕ**

ಕಳೆದ ವರ್ಷ ಭೀಕರ ಬರದ ಹಿನ್ನೆಲೆಯಲ್ಲಿ ಕಬ್ಬಿನ ಇಳುವರಿ ಕುಸಿದಿತ್ತು. ಈ ವರ್ಷ ಮುಂಗಾರು ಕೈಹಿಡಿದಿದ್ದರಿಂದ ಉತ್ತಮ ಫಸಲು ಬಂದಿದೆ. ಇಲ್ಲಿ ಸಿದ್ಧಪಡಿಸಲಾಗುವ ಬೆಲ್ಲವನ್ನು ಬೆಳಗಾವಿಯಲ್ಲಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತಿದೆ. ಕೆಲವರು ಸ್ಥಳಕ್ಕೆ ಬಂದು ಖರೀದಿ ಮಾಡುತ್ತಿದ್ದಾರೆ.

# ಪುರಸಭೆ ಕಾರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆ

## 300ಕ್ಕೂ ಅಧಿಕ ಸಂಖ್ಯೆಯಲ್ಲಿ ಬಾತುಕೋಳಿ ಮರಿಗಳನ್ನು ಕೆರೆಗೆ ಬಿಟ್ಟಿರುವುದು ನೋಡುಗರ ಆಕರ್ಷಣೆಗೆ ಒಳಗಾಗಿದೆ

• ಉದಯವಾಹಿನಿ, ಬೈಲಹೊಂಗಲ

ಹಕ್ಕಿಗಳ ಚಿಲಿಪಿಲಿ ನಾದವು ಮನಸ್ಸಿಗೆ ಉಲ್ಲಾಸವನ್ನು ಒದಗಿಸುತ್ತದೆ. ಪ್ರಕೃತಿಯಲ್ಲಿ ಪ್ರಾಣಿ, ಪಕ್ಷಿಗಳ ಕಲರವ ಕಣ್ಣು ತುಂಬಿಕೊಳ್ಳುವುದೆ ಚೆಂದ. ಇಂತಹದೊಂದು ಪ್ರಯತ್ನಕ್ಕೆ ಮುಂದಾಗಿರುವ ಸ್ಥಳೀಯ ಪುರಸಭೆ ಕಾರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ. ಪಟ್ಟಣದ ಹೃದಯ ಭಾಗದಲ್ಲಿರುವ ಹಳೆಯ ಹನುಮಂತ ದೇವರ ದೇವಸ್ಥಾನ ಹಿಂಬದಿಯ ಇತಿಹಾಸ ಪ್ರಸಿದ್ದ ದೊಡ್ಡ ಕೆರೆಯಲ್ಲಿ ಸುಮಾರು 300ಕ್ಕೂ ಅಧಿಕ ಸಂಖ್ಯೆಯಲ್ಲಿ ಬಾತುಕೋಳಿ ಮರಿಗಳನ್ನು ಕೆರೆಗೆ ಬಿಟ್ಟಿರುವುದು ನೋಡುಗರ ಆಕರ್ಷಣೆಗೆ ಒಳಗಾಗಿದೆ. ಇದರಿಂದ ಪಶು, ಪಕ್ಷಿ, ಪ್ರಾಣಿ ಪ್ರಿಯರು ಹರ್ಷ ವ್ಯಕ್ತಪಡಿಸುತ್ತಿದ್ದಾರೆ.

**ಕೆರೆಯ ಅಂದ ಹೆಚ್ಚಿಸಿದ ಬಾತುಕೋಳಿ**


ಉದಯವಾಹಿನಿ ಚಿತ್ರ

**ಆಕರ್ಷಣೆ ಹೆಚ್ಚಿಸಿದ ಬಾತುಕೋಳಿಗಳು:** ಕಳೆದ ಎರಡು ತಿಂಗಳು ಹಿಂದೆ ಕೆರೆಗೆ ಬಿಟ್ಟಿರುವ ಒಂದು ತಿಂಗಳಿನ ಬಾತುಕೋಳಿ ಮರಿಗಳು ಪಿಸುಗುಟ್ಟುತ್ತ ಕೆರೆಯಲ್ಲಿ ಹೆಜ್ಜೆ ಹಾಕುತ್ತ ಎಲ್ಲಾರ ಕಣ್ಣೆಳೆಯುವಂತೆ ಮಾಡಿವೆ. ಇದೇ ಮೊದಲ ಬಾರಿಗೆ ಕೆರೆಗೆ ಬಾತುಕೋಳಿ ಮರಿಗಳು ಬಂದಿರುವುದನ್ನು ನೋಡಲು ಸಾಕಷ್ಟು ಜನ ಕೆರೆಗೆ ಧಾವಿಸುತ್ತಿದ್ದಾರೆ.

ಕೆರೆಯಲ್ಲಿ ಸಾಲು, ಸಾಲಾಗಿಮುಂದೆ ಸಾಗುತ್ತಿರುವ ಬಾತುಕೋಳಿ ಮರಿಗಳೊಂದಿಗೆ ಸೆಲ್ಫಿ ಫೋಟೋ ಕ್ಲಿಕಿಸಿಕೊಂಡು ಸಂಭ್ರಮಿಸುತ್ತಿದ್ದಾರೆ. ವಾಯುವಾರಿಗಳು, ಪ್ರವಾಸಿಗಳು, ಕೆರೆ ಸುತ್ತಮುತ್ತಲಿನ ನಿವಾಸಿಗಳು ಕೆರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಧಾವಿಸಿ ಬಾತುಕೋಳಿ ಮರಿಗಳನ್ನು ಕಣ್ತುಂಬಿಕೊಳ್ಳುತ್ತಿದ್ದಾರೆ.

**ಮರಿಗಳ ಪಾಲನೆ:** ಇದೇ ಮೊದಲ ಬಾರಿಗೆ ಪುರಸಭೆ ಹಾಗೂ ಕೆಲವು ದಾನಿಗಳ ಸಹಕಾರದಿಂದ ಕೆರೆಯಲ್ಲಿ ಬಿಟ್ಟಿರುವ ಬಾತುಕೋಳಿ ಮರಿಗಳನ್ನು ಪುರಸಭೆ ಸಿಬ್ಬಂದಿಯಾದ ಸುರೇಶ ನಿಂಗನ್ನವರ, ಭೀಮಪ್ಪ ಹರಿಜನ ಪಾಲನೆ ಮಾಡುತ್ತಿದ್ದಾರೆ. ಪ್ರತಿ ನಿತ್ಯ ಮೂರು ಬಾರಿ ಅಕ್ಕಿ, ಜೋಳ, ನವನಿ, ಚೂರಮರಿ, ವಿವಿಧ ತರಕಾರಿ, ಇನ್ನೂ ಹಲವು ಬಗೆಯ ಆಹಾರ ಸಾಮಗ್ರಿಗಳನ್ನು ಪೂರೈಸುತ್ತಿದ್ದಾರೆ. ದಾನಿಗಳು ಕೂಡ ಆಹಾರ ಸಾಮಗ್ರಿ ನೀಡುತ್ತಿದ್ದಾರೆ. ಇವರಿಬ್ಬರೂ ಕರೆದರೆ ಕೆರೆಯ ಯಾವ ದಿಕ್ಕಿನಲ್ಲಿದ್ದರೂ ಎಲ್ಲಾ ಬಾತುಕೋಳಿ ಮರಿಗಳು ಒಂದೆಡೆ ಸೇರಿ ಆಹಾರ ಸಾಮಾಗ್ರಿ ಸೇವಿಸುತ್ತವೆ. ಇದು ನೋಡುಗರ ಕಣ್ಣಿಗೆ ಮುದ ನೀಡುತ್ತದೆ.

### ಇನ್ನಷ್ಟು ಅನುದಾನ ನೀಡಿ

**ಉದ್ಯಾನವನದ ಆಕರ್ಷಣೆ ಬಾತುಕೋಳಿ ಮರಿಗಳು ವಾಯುವಿಹಾರಿ, ಪ್ರವಾಸಿಗರಿಂದ ಬಾತುಕೋಳಿ ವೀಕ್ಷಣೆ ಪುರಸಭೆಯ ನೂತನ ಪ್ರಯೋಗಕ್ಕೆ ಮೆಚ್ಚುಗೆ ಮಹಾಂತೇಶ ಕೌಜಲಗಿ ಶಾಸಕಕೆರೆಯ ಅಭಿವೃದ್ಧಿಗಾಗಿ ಸಾಕಷ್ಟು ಅನುದಾನ ಒದಗಿಸಲಾಗಿದೆ. ಬರುವ ದಿನಮಾನಗಳಲ್ಲಿ ಇನ್ನಷ್ಟು ಅನುದಾನ ನೀಡಿ ಕೆರೆಯನ್ನು ಮಾದರಿ ಕೆರೆಯನ್ನಾಗಿಸಲಾಗುವುದು. ಮೋಹನ ಚವ್ಹಾನ ನಿವಾಸಿಕೆರೆ ಒತ್ತುವರಿ ತೆರುವುಗೊಳಿಸಬೇಕು.**

**ಬರಗಾಲ ಪರಿಸ್ಥಿತಿಯಲ್ಲಿ ಜನರಿಗೆ ಕೆರೆ ಆಸರೆಯಾಗಿತ್ತು. ದನಕರುಗಳಿಗೆ ನೀರಿನ ದಾಹ ನೀಗಿಸುತ್ತಿದ್ದ ಕೆರೆ ಪದೇ, ಪದೇ ಕಲುಷಿತಗೊಳ್ಳುವುದನ್ನು ತಡೆಯಬೇಕು. 30 ಎಕರೆ ವಿಸ್ತೀರ್ಣದ ಕೆರೆ ನುಂಗಣ್ಣರ ಪಾಲಾಗಿದೆ. ಕೂಡಲೇ ಕೆರೆಯ ಒತ್ತುವರಿ ತೆರವುಗೊಳಿಸಿ ಕೆರೆಯ ಸಮಗ್ರ ಅಭಿವೃದ್ಧಿಗೆ ಮುಂದಾಗಬೇಕು. ಕೆರೆಯಲ್ಲಿ ಉದ್ಯಾನ, ಬೋಟಿಂಗ್, ವಾಯುವಿಹಾರಿಗಳಿಗೆ ಸೌಲಭ್ಯ ಸೇರಿದಂತೆ ಇನಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಬೇಕು. ಕೆರೆಗೆ ಬಿಟ್ಟಿರುವ ಬಾತುಕೋಳಿ ಮರಿಗಳ ಸಂಪೂರ್ಣ ರಕ್ಷಣೆ ಮಾಡಬೇಕು. ಪೂರ್ಣ ಪ್ರಮಾಣದಲ್ಲಿ ಆಹಾರ ಪೂರೈಸಿ ಪಾಲನೆ ಮಾಡಬೇಕು. ಅಂತರ್ಜಲ ಹೆಚ್ಚಿಸಲು ಮುಂದಾಗಬೇಕು' ಎನ್ನುವುದು ನಾಗರಿಕರ ಒತ್ತಾಯವಾಗಿದೆ.**

**ಹಿರಿಯರು ನಿರ್ಮಿಸಿದ ಕೆರೆ:** ಸುಮಾರು 30 ಎಕರೆ ಜಮೀನಿನಲ್ಲಿ ಅರ್ಧ ಭಾಗ ಜನರಿಗೆ, ಇನ್ನರ್ಧ ಭಾಗ ದನಕರುಗಳಿಗೆ ಕುಡಿಯುವ ನೀರಿಗಾಗಿ ಎನ್ನುವ ಉದ್ದೇಶದಿಂದ ಈ ಹಿಂದೆ ಹಿರಿಯರು ದೊಡ್ಡ ಕೆರೆ ನಿರ್ಮಾಣ ಮಾಡಿದ್ದರು. ಕೆರೆ ಅಭಿವೃದ್ಧಿಗೆ ಕೋಟ್ಯಂತರ ಅನುದಾನ ಬಿಡುಗಡೆ ಮಾಡಿದ್ದರೂ, ಹಿಂದಿನ ಪುರಸಭೆ ಅಧಿಕಾರಿಗಳು ಕ್ರಿಯಾಯೋಜನೆಯನ್ನು ಸಮರ್ಪಕವಾಗಿ ರೂಪಿಸದೇ ಇರುವುದರಿಂದ ಕೆರೆ ಅಭಿವೃದ್ಧಿಗೆ ಸಾಕಷ್ಟು ಹೋರಾಟ ನಡೆಸಲಾಗಿತ್ತು. ಕಳೆದ ಒಂದು ವರ್ಷದ ಹಿಂದೆ ಕೆರೆಗೆ ಹೊಸ ರೂಪ ನೀಡಿ ಪಾದಚಾರಿ ಮಾರ್ಗ, ಗಿಡಮರ ನೆಟ್ಟು ಉದ್ಯಾನ ಮಾಡಲಾಗಿದೆ. ಇದರಿಂದ ಕೆರೆಗೆ ಹೊಸ ಹೊಳಪು ಬಂದಿದೆ. ಬಾತುಕೋಳಿ ಮರಿಗಳಿಂದ ಮತ್ತಷ್ಟು ಆಕರ್ಷಣೆ ಹೆಚ್ಚಾಗಿದೆ.

## ಮಿನಿ ನ್ಯೂಸ್

### ರೈತನ ಮೇಲೆ ಮೊಸಳೆ ದಾಳಿ

• ಉದಯವಾಹಿನಿ, ರಾಯಚೂರು

ಎತ್ತುಗಳಿಗೆ ಸ್ನಾನ ಮಾಡಿಸಲು ಕೆರೆಗೆ ಹೋಗಿದ್ದ ರೈತನ ಮೇಲೆ ಮೊಸಳೆ ದಾಳಿ ನಡೆಸಿರುವ ಘಟನೆ ರಾಯಚೂರಿನ ಸರ್ಜಾಪುರದಲ್ಲಿ ನಡೆದಿದೆ. ಗಾಯಗೊಂಡ ರೈತನನ್ನು ಸರ್ಜಾಪುರ ಗ್ರಾಮದ ಮಹಾನಂದ ಎಂದು ಗುರುತಿಸಲಾಗಿದೆ. ಕೆರೆಯಲ್ಲಿ ಎತ್ತುಗಳಿಗೆ ಸ್ನಾನ ಮಾಡಿಸುವಾಗ ಮೊಸಳೆ ದಾಳಿ ಮಾಡಿದೆ. ಇದರಿಂದ ರೈತನಿಗೆ ಬಲಗಾಲಿಗೆ ಗಂಭೀರ ಗಾಯವಾಗಿದ್ದು, ರೈತನನ್ನು ರಾಯಚೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಘಟನೆ ಬಳಿಕ ಎಚ್ಚೆತ್ತ ಅರಣ್ಯ ಇಲಾಖೆ ಅಧಿಕಾರಿಗಳು ಮೊಸಳೆ ಹಿಡಿಯಲು ಕಾರ್ಯಾಚರಣೆ ನಡೆಸಿ, ಗ್ರಾಮ ಸ್ಥರ ಸಹಾಯದೊಂದಿಗೆ ಮೊಸಳೆಯನ್ನು ಸೆರೆ ಹಿಡಿದಿದ್ದಾರೆ. ಇನ್ನೂ ಅರಣ್ಯ ಇಲಾಖೆ ಅಧಿಕಾರಿಗಳು ಮೊಸಳೆಯನ್ನ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರ ಮಾಡಿದ್ದಾರೆ. ಮೊಸಳೆ ಸೆರೆ ಸಿಕ್ಕ ಹಿನ್ನೆಲೆ ಗ್ರಾಮ ಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ. ಆದರೆ ಕೆರೆಯಲ್ಲಿ ಇನ್ನೂ ಎರಡು ಮೊಸಳೆಗಳು ಇರುವ ಬಗ್ಗೆ ಶಂಕೆಯಿದ್ದು, ಆ ಎರಡು ಮೊಸಳೆಗಳನ್ನು ಹಿಡಿಯುವಂತೆ ಒತ್ತಾಯಿಸಿದ್ದಾರೆ.

### ರಾಜ್ಯದಲ್ಲಿ ಕೆಂಪು ಉಗ್ರರ ಯುಗಾಂತ್ಯ ನಕ್ಸಲರ ಕೊನೆ ವಿಕೆಟ್ ಪತನ

• ಉದಯವಾಹಿನಿ, ಚಿಕ್ಕಮಗಳೂರು

ನಕ್ಸಲ್ ಕೋಟೆಹೊಂಡ ರವೀಂದ್ರ ಶರಣಾಗತಿಗೆ ಸಿದ್ಧನಾಗಿದ್ದು, ಕರ್ನಾಟಕದಲ್ಲಿ ಕೆಂಪು ಉಗ್ರರ ಇತಿಹಾಸ ಯುಗಾಂತ್ಯವಾಗುತ್ತಿದೆ. ಶನಿವಾರ ಎಸ್ಪಿ ಕಚೇರಿಯಲ್ಲಿ ಶಾಂತಿಗಾಗಿ ನಾಗರೀಕ ವೇದಿಕೆ ಸದಸ್ಯರ ಸಮ್ಮುಖದಲ್ಲಿ ಶರಣಾಗಲಿದ್ದಾನೆ. ಕಳೆದೊಂದು ದಶಕದಿಂದ ಈತ ಭೂಗತನಾಗಿದ್ದ. ಆತನ ವಿರುದ್ಧ ಜಿಲ್ಲೆಯ ವಿವಿಧ ಪೊಲೀಸ್ ಠಾಣೆಯಲ್ಲಿ ಒಟ್ಟು 14 ಪ್ರಕರಣಗಳಿವೆ. ರವೀಂದ್ರ, ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನ ಕಿಗ್ಗಾ ಸಮೀಪದ ಕೋಟೆಹೊಂಡ ಗ್ರಾಮದವನು. ಜನವರಿ 8 ರಂದು 6 ಜನ ನಕ್ಸಲರು ಸಿಎಂ ಎದುರು ಶರಣಾಗಿದ್ದರು. ಆದರೆ ಈತ ಕಾಡಲ್ಲಿ ಒಬ್ಬನೇ ಉಳಿದು ಕೊಂಡಿದ್ದ. ಇನ್ನೂ ತಲೆಮರೆಸಿಕೊಂಡಿದ್ದ ನಕ್ಸಲ್ ಲಕ್ಷ್ಮಿ ಸಹ ಭಾನುವಾರ ಪೊಲೀಸರ ಮುಂದೆ ಶರಣಾಗಲು ತಯಾರಾಗಿದ್ದು ರಾಜ್ಯದಲ್ಲಿ ಕೆಂಪು ಉಗ್ರರ ಯುಗ ಕೊನೆಯಾಗಲಿದೆ.

### ಕೋಟೆಕಾರು ಬ್ಯಾಂಕ್ ದರೋಡೆ ಪ್ರಕರಣ: ಆರೋಪಿಗೆ ಗುಂಡೇಟು

• ಉದಯವಾಹಿನಿ, ಉಳ್ಳಾಲ

ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಸಂಘ ಕೆ.ಸಿ.ರೋಡ್ ಶಾಖೆ ದರೋಡೆ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿಗೆ ಪೊಲೀಸರು ಗುಂಡು ಹಾರಿಸಿದ್ದಾರೆ. ಮುರುಗಂಡಿ ಥೇವರ್ ಗುಂಡೇಟು ತಗುಲಿದ ಆರೋಪಿ. ಕರ್ನಾಟಕ-ಕೇರಳ ಗಡಿಭಾಗದ ಅಚ್ಚಿನಡ್ಕ ಸಮೀಪದಲ್ಲಿ ಸ್ಥಳ ಮಹಜರು ನಡೆಸುತ್ತಿದ್ದಾಗ ಆರೋಪಿ ಮುರುಗಂಡಿ ಥೇವರ್ ತಪ್ಪಿಸಿಕೊಳ್ಳಲು ಯತ್ನಿಸಿದ್ದ. ಆತನ ಕಾಲಿಗೆ ಗುಂಡು ಹಾರಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ದರೋಡೆ ಪ್ರಕರಣದ ಪ್ರಮುಖ ಆರೋಪಿಯಾಗಿದ್ದ ಮುರುಗಂಡಿ ಥೇವರ್, ಯೋಶುವಾ ರಾಜೇಂದ್ರನ್ ಅವರನ್ನು ತಮಿಳುನಾಡಿನ ತಿರುನಲ್ವೇಲಿಯಲ್ಲಿ ಬಂಧಿಸಿ ಮಂಗಳೂರಿಗೆ ಕರೆತರಲಾಗಿತ್ತು.

ನ್ಯಾಯಾಲಯವು ಆರೋಪಿಗಳನ್ನು ಫೆ.3ರ ವರೆಗೆ ಪೊಲೀಸರ ವಶಕ್ಕೆ ಒಪ್ಪಿಸಿತ್ತು. ಶನಿವಾರ ಮಧ್ಯಾಹ್ನ ಸ್ಥಳ ಮಹಜರು ನಡೆಸಲು ಸ್ಥಳಕ್ಕೆ ಕರೆದೊಯ್ಯಲಾಗಿತ್ತು. ಪೊಲೀಸರ ಮೇಲೆ ದಾಳಿ ನಡೆಸಿ ತಪ್ಪಿಸಿಕೊಳ್ಳಲು ಯತ್ನಿಸಿದ್ದ ಮುರುಗಂಡಿ ಥೇವರ್ ಮೇಲೆ, ಉಳ್ಳಾಲ ಠಾಣೆಯ ಇನ್ಸ್‌ಪೆಕ್ಟರ್ ಬಾಲಕೃಷ್ಣ ಗುಂಡು ಹಾರಿಸಿದ್ದು, ಕಾಲಿಗೆ ಗುಂಡೇಟು ತಗುಲಿದೆ. ಸದ್ಯ ಗಾಯಾಳು ಆರೋಪಿಯನ್ನು ದೇರಳಕಟ್ಟೆಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆಯಲ್ಲಿ ಪೊಲೀಸ್ ಸಿಬ್ಬಂದಿ ಮಂಜುನಾಥ್ ಎಂಬುವರಿಗೆ ಗಾಯವಾಗಿದೆ. ಮಂಜುನಾಥ್ ಮೇಲೆ ಹಲ್ಲೆ ನಡೆಸಿ ಮುರುಗಂಡಿ ಪರಾರಿಯಾಗಲು ಯತ್ನಿಸಿದ್ದ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಈ ಪ್ರಕರಣದ ಇನ್ನೊಬ್ಬ ಆರೋಪಿ ಕಣ್ಣನ್ ಮಣಿಯನ್ನು ಸ್ಥಳ ಮಹಜರಿಗೆ ಕರೆದೊಯ್ದಾಗ ಆತನ ಮೇಲೂ ಪೊಲೀಸರು ಈ ಹಿಂದೆ, ಗುಂಡು ಹಾರಿಸಿದ್ದರು.

### ಸವದತ್ತಿ ಯಲ್ಲಮ್ಮ ದೇವಸ್ಥಾನ ಬಂದ್ ಇಲ್ಲ: ಅಶೋಕ ದುಡಗುಂಟಿ

• ಉದಯವಾಹಿನಿ, ಉಗರಗೋಳ

ಸವದತ್ತಿ ತಾಲ್ಲೂಕಿನ ಯಲ್ಲಮ್ಮನಗುಡ್ಡದ ಯಲ್ಲಮ್ಮ ದೇವಿ ದೇವಸ್ಥಾನ ಬಂದ್ ಆಗಿಲ್ಲ. ಭಕ್ತರು ಯಾವುದೇ ವದಂತಿಗೆ ಕಿವಿಗೊಡಬಾರದು' ಎಂದು ಯಲ್ಲಮ್ಮ ದೇವಿ ದೇವಸ್ಥಾನ ಪ್ರಾಧಿಕಾರದ ಕಾರ್ಯದರ್ಶಿ ಅಶೋಕ ದುಡಗುಂಟಿ ಹೇಳಿದ್ದಾರೆ. ಅಭಿವೃದ್ಧಿ ಕಾಮಗಾರಿ ಕೈಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ದೇವಸ್ಥಾನವನ್ನು ಎರಡೂರು ವರ್ಷದ ಅವಧಿಗೆ ಬಂದ್ ಮಾಡಲಾಗಿದೆಯೇ?

ದೇವಿ ದರ್ಶನಕ್ಕೆ ಅವಕಾಶವಿಲ್ಲವೇ ಎಂದು ಹಲವು ಭಕ್ತರು ವಿಚಾರಿಸುತ್ತಿದ್ದಾರೆ. ಆದರೆ, ನಾವು ದೇವಸ್ಥಾನ ಬಂದ್ ಮಾಡಿಲ್ಲ ಎಂದು ತಿಳಿಸಿದ್ದಾರೆ. ಯಲ್ಲಮ್ಮ ದೇವಸ್ಥಾನದಲ್ಲಿ ದೇವಿಗೆ ಎಂದಿನಂತೆ ಬೆಳಿಗ್ಗೆ ಹಾಗೂ ಸಂಜೆ ವಿಶೇಷ ಪೂಜೆ ನೆರವೇರುತ್ತಿದೆ. ಬೆಳಿಗ್ಗೆಯಿಂದ ರಾತ್ರಿಯವರೆಗೂ ದರ್ಶನಕ್ಕೆ ಅವಕಾಶವಿದೆ. ಹಾಗಾಗಿ ಭಕ್ತರು ಗುಡ್ಡಕ್ಕೆ ಭೇಟಿ ಕೊಟ್ಟು ದರ್ಶನ ಪಡೆಯಬಹುದು' ಎಂದಿದ್ದಾರೆ. 'ಜನವರಿಯಲ್ಲಿ ಬನದ ಹುಣ್ಣಿಮೆ ಜಾತ್ರೆ ನಡೆಯಿತು. ಈಗ ಫೆಬ್ರುವರಿಯಲ್ಲಿ ಭರತ ಹುಣ್ಣಿಮೆ ಜಾತ್ರೆಯೂ ಸುಗಮವಾಗಿ ನಡೆಯಲಿದೆ. ಲಕ್ಷಾಂತರ ಭಕ್ತರು ಸೇರುವ ನಿರೀಕ್ಷೆ ಇದ್ದು, ಅವರಿಗೆ ಎಲ್ಲಾ ರೀತಿಯ ಮೂಲಸೌಕರ್ಯ ಕಲ್ಪಿಸುತ್ತೇವೆ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

### ಮುಷ್ಕರ: ಅಂಗನವಾಡಿಯ ಏಳು ಕಾರ್ಯಕರ್ತೆಯರಿಗೆ ನೋಟಿಸ್

• ಉದಯವಾಹಿನಿ, ಶಿವಮೊಗ್ಗ

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬೆಂಗಳೂರಿನಲ್ಲಿ ನಡೆಯುತ್ತಿರುವ ಮುಷ್ಕರದಲ್ಲಿ ಪಾಲ್ಗೊಂಡಿರುವ ಜಿಲ್ಲೆಯ 7 ಜನ ಅಂಗನವಾಡಿ ಕಾರ್ಯಕರ್ತೆಯರಿಗೆ ತಕ್ಷಣವೇ ಕೆಲಸಕ್ಕೆ ಹಾಜರಾಗುವಂತೆ ಮಹಿಳಾ, ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕರು ನೋಟಿಸ್ ಕೊಟ್ಟಿದ್ದಾರೆ. ಶಿವಮೊಗ್ಗದ ಪ್ರೇಮಾ, ಶಿಕಾರಿಪುರದ ಭಾರತಿ, ರೇಣುಕಾ, ಸಾಗರದ ತ್ರಿವೇಣಿ, ಹೊಸನಗರದ ಶಾರದಾ ಹಾಗೂ ಭದ್ರಾವತಿಯ ಶಕುಂತಲಾಗೆ ಶುಕ್ರವಾರ ನೋಟಿಸ್ ಜಾರಿ ಮಾಡಲಾಗಿದೆ. ಅಂಗನವಾಡಿ ಕೇಂದ್ರಗಳನ್ನು ಅನಧಿಕೃತವಾಗಿ ಮುಚ್ಚಿ ಮುಷ್ಕರದಲ್ಲಿ ಭಾಗವಹಿಸಿದ್ದೀರಿ. ಇದರಿಂದ ಮಕ್ಕಳು, ಪೌಷ್ಟಿಕ ಆಹಾರ ಪಡೆಯುತ್ತಿರುವ ಗರ್ಭಿಣಿಯರಿಗೆ ತೊಂದರೆಯಾಗಿದೆ. ಫೆ. 1ರಿಂದ ಕೆಲಸಕ್ಕೆ ಹಾಜರಾಗಬೇಕು. ಕಳೆದ ಮೂರು ದಿನಗಳಿಂದ ಕೆಲಸಕ್ಕೆ ಬಾರದಿರುವುದರಿಂದ ಮಕ್ಕಳಿಗೆ ತೊಂದರೆ ಆಗಿದೆ. ಹೀಗಾಗಿ ನೋಟಿಸ್ ಕೊಟ್ಟಿದ್ದೇನೆ' ಎಂದು ಕೃಷ್ಣಪ್ಪ ಪ್ರತಿಕ್ರಿಯಿಸಿದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಸಯಂಕಾಲ | 04:30 ರಿಂದ 06:00 |
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ** ನಿಮ್ಮ ಶಾಂತತೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುವ ಚಟುವಟಿಕೆಗಳಲ್ಲಿ ನಿಮ್ಮನ್ನು ತೊಡಗಿಸಿಕೊಂಡಿರಿ. ಹಣಕಾಸಿನಲ್ಲಿ ಸುಧಾರಣೆ ನೀವು ಅಗತ್ಯ ವಸ್ತುಗಳನ್ನು ಖರೀದಿಸುವುದನ್ನು ಅನುಕೂಲಕರವಾಗಿಸುತ್ತದೆ. ನಿಮ್ಮ ಸಾಮಾಜಿಕ ಜೀವನವನ್ನು ನಿರ್ಲಕ್ಷಿಸಬೇಡಿ.

**ವೃಷಭ** ನಿಮ್ಮ ವಿಶ್ವಾಸ, ಚೈತನ್ಯ ಇಂದು ಅಧಿಕವಾಗಿರುತ್ತದೆ. ಚಂದ್ರನ ಸ್ಥಾನದಿಂದಾಗಿ, ಇಂದು ನಿಮ್ಮ ಹಣವನ್ನು ಅನಗತ್ಯ ಕೆಲಸಗಳಿಗೆ ಖರ್ಚು ಮಾಡಬಹುದು. ನೀವು ಹಣವನ್ನು ಸಂಗ್ರಹಿಸಲು ಬಯಸಿದರೆ ನಿಮ್ಮ ಸಂಗಾತಿಯೊಂದಿಗೆ ಅಥವಾ ಪೋಷಕರೊಂದಿಗೆ ಮಾತನಾಡಿ.

**ಮಿಥುನ** ಅಸಾಧ್ಯವಾದ ಅನಗತ್ಯ ಚಿಂತನೆಯಲ್ಲಿ ನಿಮ್ಮ ಶಕ್ತಿ ವ್ಯರ್ಥ ಮಾಡುವ ಬದಲು ಅದನ್ನು ಸರಿಯಾದ ದಿಕ್ಕಿನಲ್ಲಿ ಬಳಸಿ. ನಕ್ಷತ್ರಪುಂಜಗಳ ಚಾಲನೆ ನಿಮಗಾಗಿ ಉತ್ತಮವಾಗಿಲ್ಲ. ಇಂದಿನ ದಿನ ನೀವು ನಿಮ್ಮ ಹಣವನ್ನು ತುಂಬಾ ಸುರಕ್ಷಿತವಾಗಿಡಬೇಕು.

**ಕರ್ಕಾಟಕ** ನೀವು ಭಯವೆಂಬ ದೈತ್ಯನ ಜೊತೆ ಹೋರಾಡಲು ಸಿದ್ಧವಾಗುತ್ತಿದ್ದ ಹಾಗೆ ನಿಮ್ಮ ಆಲೋಚನೆಗಳನ್ನು ಸಕಾರಾತ್ಮಕವಾಗಿ ರೂಪಿಸಿಕೊಳ್ಳಿ. ಇಲ್ಲದಿದ್ದಲ್ಲಿ ನೀವು ಈ ರಾಕ್ಷಸನಿಗೆ ಒಬ್ಬ ಜಡ, ನಿಷ್ಕರುಣೆಯ ಬಲಿಯಾಗುತ್ತೀರಿ. ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯ ನ್ಯಾಯಾಲಯ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರೆ.

**ಸಿಂಹ** ಪ್ರಕೃತಿಯು ನಿಮ್ಮಲ್ಲಿ ಗಮನಾರ್ಹ ವಿಶ್ವಾಸ ಮತ್ತು ಬುದ್ಧಿವಂತಿಕೆಯನ್ನಿರಿಸಿದೆ – ಅದನ್ನು ಸಾಧ್ಯವಾದಷ್ಟೂ ಬಳಸಿಕೊಳ್ಳಿ. ಹಣವನ್ನು ಯೋಚಿಸದೆ ಮತ್ತು ಪರಿಗಣಿಸದೆ ಖರ್ಚುಮಾಡುವುದು, ನಿಮಗೆ ಎಷ್ಟು ನಷ್ಟ ಮಾಡಬಹುದು ಎಂಬುದು ಇಂದು ನಿಮಗೆ ಅರ್ಥವಾಗಬಹುದು.

**ಕನ್ಯಾ** ಧಾರ್ಮಿಕ ಭಾವನೆಗಳನ್ನು ಉದ್ಭವಿಸಿ ಒಬ್ಬ ಪವಿತ್ರ ವ್ಯಕ್ತಿಯಿಂದ ದೈವಿಕ ಜ್ಞಾನವನ್ನು ಪಡೆಯಲು ನೀವು ಒಂದು ಧಾರ್ಮಿಕ ಸ್ಥಳಕ್ಕೆ ಭೇಟಿ ನೀಡುವಂತೆ ಮಾಡುತ್ತವೆ. ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ.

**ತುಲಾ** ನಿಮ್ಮ ಅನಾರೋಗ್ಯದ ಬಗ್ಗೆ ಚರ್ಚಿಸುವುದನ್ನು ತಪ್ಪಿಸಿ. ನಿಮ್ಮ ಕಾಯಿಲೆಯ ಬಗ್ಗೆ ಹೆಚ್ಚು ಮಾತನಾಡಿದಷ್ಟೂ ಅದು ಇನ್ನೂ ಉಲ್ಬಣಗೊಳ್ಳುವುದರಿಂದ ನಿಮ್ಮ ಗಮನವನ್ನು ಬೇರೆಡೆಗೆ ಕಾಯಿಲೆಯಿಂದ ತಿರುಗಿಸಲು ಏನಾದರೂ ಕೆಲಸದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ.

**ವೃಶ್ಚಿಕ** ಪತ್ನಿಯ ವ್ಯವಹಾರಗಳಲ್ಲಿ ಮೂಗು ತೂರಿಸುವುದು ಅವಳಿಗೆ ಕೋಪ ತರಬಹುದಾದ್ದರಿಂದ ಹಾಗೆ ಮಾಡಬೇಡಿ. ನಿಮ್ಮ ಕೆಲಸ ನೋಡಿಕೊಳ್ಳುವುದು ಉತ್ತಮ. ಆದಷ್ಟು ಕಡಿಮೆ ಹಸ್ತಕ್ಷೇಪ ಮಾಡಿ, ಇಲ್ಲದಿದ್ದರೆ ಅದು ಅವಲಂಬನೆಯನ್ನು ಉಂಟುಮಾಡಬಹುದು. ರಾತ್ರಿಯ ವೇಳೆಯಲ್ಲಿ ಇಂದು ನೀವು ಹಣದ ಪ್ರಯೋಜನವನ್ನು ಪಡೆಯುವ ಸಾಧ್ಯತೆ.

**ಧನಸ್ಸು** ಇಂದು ನೀವು ನಿಮ್ಮ ಆರೋಗ್ಯ ಮತ್ತು ನೋಟವನ್ನು ಸುಧಾರಿಸಲು ಕೆಲಸ ಮಾಡಲು ಸಾಕಷ್ಟು ಸಮಯ ಹೊಂದಿರುತ್ತೀರಿ ಹೂಡಿಕೆ ಮಾಡುವುದು ಅನೇಕ ಬಾರಿ ನಿಮಗೆ ಪ್ರಯೋಜನಕಾರಿಯೆಂದು ಸಾಬೀತುಪಡಿಸುತ್ತದೆ, ಇಂದು ನಿಮಗೆ ಈ ಮಾತು ಅರ್ಥವಾಗಬಹುದು.

**ಮಕರ** ಮಾನಸಿಕ ಶಾಂತಿಗಾಗಿ ಕೆಲವು ದಾನ ಧರ್ಮಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ನೀವು ಯಾರನ್ನಾದರೂ ಮರಳಿ ಎರವಲು ಕೇಳುತ್ತಿದ್ದರೆ ಮತ್ತು ಇಲ್ಲಿಯವರೆಗೆ ಅವರು ನಿಮ್ಮ ಮಾತನ್ನು ತಪ್ಪಿಸುತ್ತಿದ್ದರೆ, ಇಂದು ಅವರು ಮಾತನಾಡದೆ ಹಣವನ್ನು ನಿಮಗೆ ಹಿಂದಿರುಗಿಸಬಹುದು.

**ಕುಂಭ** ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ದೊಡ್ಡ ಯೋಜನೆಗಳನ್ನು ಮತ್ತು ಕಲ್ಪನೆಗಳಿರುವ ಯಾರಾದರೂ ನಿಮ್ಮ ಗಮನ ಸೆಳೆಯುತ್ತಾರೆ – ಯಾವುದೇ ಹೂಡಿಕೆಗಳನ್ನು ಮಾಡುವ ಮೊದಲು ವ್ಯಕ್ತಿಯ ವಿಶ್ವಾಸಾರ್ಹತೆ ಮತ್ತು ಪ್ರಾಮಾಣಿಕತೆಯನ್ನು ದೃಢೀಕರಿಸಿ.

**ಮೀನ** ನಿಮ್ಮ ನೀಡುವ ವರ್ತನೆ ಪರೋಕ್ಷವಾಗಿ ನಿಮಗೆ ಆಶೀರ್ವಾದವೇ ಆಗುತ್ತದೆ, ಏಕೆಂದರೆ ನೀವು ಅನುಮಾನ, ನಿರಾಸೆ, ಅಸೂಯೆ ಯಂಥ ಅನೇಕ ದುರ್ಗುಣಗಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ. ನೀವು ಸ್ವಲ್ಪ ಹೆಚ್ಚುವರಿ ಹಣ ಮಾಡಲು ಯೋಜಿಸುತ್ತದ್ದಲ್ಲಿ ಸುಭದ್ರ ಆರ್ಥಿಕ ಯೋಜನೆಗಳಲ್ಲಿ ಹೂಡಿಕೆ ಮಾಡಿ.

# ವಸತಿ, ಊಟದ ವ್ಯವಸ್ಥೆಗೆ ಪ್ರಾಮುಖ್ಯತೆ ನೀಡಿ: ಜಿಲ್ಲಾಧಿಕಾರಿ

## ಫೆ.7, 8 ರಂದು ರಾಜ್ಯಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆ, ಕಾರ್ಯಕ್ರಮ ಯಶಸ್ವಿಗೆ ಉಪ ಸಮಿತಿಗಳ ರಚನೆ

• ಉದಯವಾಹಿನಿ, ಚಿತ್ರದುರ್ಗ


ಉದಯವಾಹಿನಿ ಚಿತ್ರ

ಫೆ.7, 8 ರಂದು ಚಿತ್ರದುರ್ಗ ನಗರದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಅನು ಭವ ಮಂಟಪದಲ್ಲಿ 2024-25ನೇ ಸಾಲಿನ ರಾಜ್ಯ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಗಳ ಕಾರ್ಯಕ್ರಮ ಆಯೋಜಿಸಲು ಉದ್ದೇಶಿಸಲಾಗಿದೆ. ಕಾರ್ಯಕ್ರಮ ಯಶಸ್ವಿಗೆ ಉಪ ಸಮಿತಿಗಳನ್ನು ರಚನೆ ಮಾಡಲಾಗಿದ್ದು, ಹೊರ ಜಿಲ್ಲೆಗಳಿಂದ ಆಗಮಿಸುವ ಮಕ್ಕಳು ಶಿಕ್ಷಕರ ವಸತಿ ಹಾಗೂ ಊಟದ ವ್ಯವಸ್ಥೆಗೆ ಪ್ರಾಮುಖ್ಯತೆ ನೀಡುವಂತೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅಧಿಕಾರಿ ಗಳಿಗೆ ನಿರ್ದೇಶನ ನೀಡಿದರು.

ಈ ಕುರಿತು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶನಿವಾರ ಜರುಗಿದ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. 2007 ರಲ್ಲಿ ಚಿತ್ರದುರ್ಗ ಜಿಲ್ಲೆಯ ಅತಿಥೇಯದಲ್ಲಿ ರಾಜ್ಯ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಗಳ ಜರುಗಿದ್ದವು. ಪುನಃ ಅತಿಥೇಯ ವಹಿಸುವ ಜವಬ್ದಾರಿ ಜಿಲ್ಲೆಗೆ ಲಭಿಸಿದ್ದು, ಎರಡು ದಿನಗಳ ಕಾಲ 35 ಶೈಕ್ಷಣಿಕ ಜಿಲ್ಲೆಗಳಿಂದ 1378 ವಿದ್ಯಾರ್ಥಿಗಳು, 105ಕ್ಕೂ ಹೆಚ್ಚು ನೋಡಲ್ ಅಧಿಕಾರಿಗಳು, ಮಾರ್ಗದರ್ಶಿ ಶಿಕ್ಷಕರು ಭಾಗವಹಿ ಸಲಿದ್ದಾರೆ. ಕಾರ್ಯಕ್ರಮ ಸ್ಮರಣೀಯ ವಾಗಿಸುವಂತೆ ಶಿಕ್ಷಣ ಇಲಾಖೆ ಸಿದ್ಧತೆ ಗಳನ್ನು ಆರಂಭಿಸಬೇಕು. ಉಪವಿಭಾಗಾಧಿಕಾರಿಗಳ ನೇತೃತ್ವದಲ್ಲಿ ಅತಿಥಿಗಳ ಆಹ್ವಾನ, ಶಿಷ್ಟಾಚಾರದ ಪಾಲನೆ ಸಮಿತಿ ರಚಿಸ ಬೇಕು. ನಗರಕ್ಕೆ ಆಗಮಿಸುವ ವಿದ್ಯಾರ್ಥಿಗಳ ಮಾರ್ಗ ದರ್ಶನಕ್ಕಾಗಿ ಕೆಎಸ್‌ಆರ್‌ಟಿ ಬಸ್ ನಿಲ್ದಾಣದಲ್ಲಿ ಮಾಹಿತಿ ಕೇಂದ್ರ ತೆರಯಬೇಕು.

**ಐತಿಹಾಸಿಕ ಮಹತ್ವ ತಿಳಿಸಬೇಕು**

5 ಜಿಲ್ಲೆಗಳಿಗೆ ಒಬ್ಬ ಕ್ಷೇತ್ರ ಶಿಕ್ಷಣಾಧಿ ಕಾರಿಗಳನ್ನು ನೇಮಕ ಮಾಡಿ ನಗರಕ್ಕೆ ಆಗಮಿಸುವ ವಿದ್ಯಾರ್ಥಿಗಳನ್ನು ಬರಮಾಡಿಕೊಂಡು ಬಾಲಕ, ಬಾಲಕಿಯ ರಿಗೆ ಸೂಕ್ತ ವಸತಿ ವ್ಯವಸ್ಥೆ ಕಲ್ಪಿಸಬೇಕು. ನೊಂದಣಿ ಮಾಡಿಕೊಳ್ಳಲು ಅನುಕೂಲವಾಗುವಂತೆ ಪ್ರತಿ 2 ಜಿಲ್ಲೆಗಳಿಗೆ ಒಂದು ನೊಂದಣಿಗೆ ಕೌಂಟರ್ ತೆರೆ ಯಬೇಕು. ವಿದ್ಯಾರ್ಥಿಗಳನ್ನು ಕರೆತರಲು ಸೂಕ್ತ ಸಾರಿಗೆ ವ್ಯವಸ್ಥೆ ಕಲ್ಪಿಸುವಂತೆ ತಿಳಿಸಿದರು. ಮಕ್ಕಳಿಗೆ ಕುಡಿಯುಲು ಶುದ್ಧ ಕುಡಿಯುವ ನೀರು ನೀಡಬೇಕು. ಆಹಾರವನ್ನು ಪರೀಕ್ಷೆಗೆ ಒಳ ಪಡಿಸಿದ ನಂತರವೇ ಮಕ್ಕಳಿಗೆ ವಿತರಿಸಬೇಕು. ಸ್ಪರ್ಧೆಗಳು ಜರುಗುವ ಸ್ಥಳ, ಸಂಪರ್ಕಿಸಬೇಕಾದ ನೋಡಲ್ ಅಧಿಕಾರಿಗಳ ವಿವರಗಳನ್ನು ಮಕ್ಕಳಿಗೆ ಗೋಚರವಾಗುವಂತೆ ಮುದ್ರಿಸಿ ಪ್ರಮುಖ ಸ್ಥಳಗಳಲ್ಲಿ ಲಗತ್ತಿಸಬೇಕು. ಶಿಕ್ಷಣ ಇಲಾಖೆ ಜೊತೆಗೆ ಸಮಾಜ ಕಲ್ಯಾಣ, ಹಿಂದುಳಿದ ವರ್ಗ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳನ್ನು ವಸತಿ ಸಮಿತಿ ಮೇಲುಸ್ತುವಾರಿಗೆ ನೇಮಿಸಬೇಕು. ಪ್ರಾದೇಶಿಕ ಸಾರಿಗೆ ಅಧಿಕಾರಿ ಅಥವಾ ಕೆ.ಎಸ್.ಆರ್.ಟಿ ಅಧಿಕಾರಿಗಳ ನೇತೃತ್ವದಲ್ಲಿ ಸಾರಿಗೆ ಸಮಿತಿ ರಚಿಸಬೇಕು. ಪ್ರತಿ ಸ್ಪರ್ಧೆಗಳಿಗೂ ಅನುಭವಿಗಳನ್ನು ತೀರ್ಪುಗಾರರನ್ನಾಗಿ ನೇಮಿಸಬೇಕು. ನಿಷ್ಪಕ್ಷಪಾತವಾಗಿ ತೀರ್ಪುಗಳನ್ನು ನೀಡಬೇಕು. ಯಾವುದೇ ಗೊಂದಲಕ್ಕೆ ಆಸ್ಪದ ನೀಡ ಬಾರದು. ಬಂದೋಬಸ್ತ್‌ಗೆ ಅಗತ್ಯ ಇರುವ ಮಹಿಳಾ ಹಾಗೂ ಪುರುಷ ಪೊಲೀಸರನ್ನು ನಿಯೋಜಿಸಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಹೇಳಿದರು.

ಸಭೆಯಲ್ಲಿ ಜಿ.ಪಂ.ಸಿಇಓ ಎಸ್.ಜೆ.ಸೋಮಶೇಖರ್, ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಎಂ.ಆರ್.ಮಂಜುನಾಥ್, ಪಿಯು ಉಪನಿರ್ದೇಶಕ ಪುಟ್ಟಸ್ವಾಮಿ, ಡಿ.ಹೆಚ್.ಓ ಡಾ.ರೇಣುಪ್ರಸಾದ್ ಕ್ಷೇತ್ರ ಶಿಕ್ಷಣಾಧಿಕಾರಿಗಳು ಉಪಸ್ಥಿತರಿದ್ದರು.

**ಐತಿಹಾಸಿಕ ಸ್ಥಳಗಳಿಗೆ ಮಕ್ಕಳ ಪ್ರವಾಸ**

ಬೇರೆ ಜಿಲ್ಲೆಗಳಿಂದ ಆಗಮಿಸುವ ವಿದ್ಯಾರ್ಥಿಗಳಿಗೆ ಜಿಲ್ಲೆಯ ಐತಿಹಾಸಿಕ ಮಹತ್ವನ್ನು ತಿಳಿಸಿಕೊಡಬೇಕು. ಇದಕ್ಕಾಗಿ ಬ್ರೋಚರ್, ಬ್ಯಾನರ್‌ಗಳನ್ನು ಸ್ಪರ್ಧೆಗಳು ನಡೆಯುವ ಸ್ಥಳದಲ್ಲಿ ಅಳವಡಿಸಬೇಕು. ಇದಕ್ಕಾಗಿ ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳ ನೇತೃತ್ವದಲ್ಲಿ ಸಮಿತಿ ರಚಿಸಬೇಕು. ಆಯ್ದ ವಿದ್ಯಾರ್ಥಿಗಳಿಗೆ ಜಿಲ್ಲೆಯ ಐತಿಹಾಸಿ ಸ್ಥಳಗಳಿಗೆ ಪ್ರವಾಸ ಏರ್ಪಡಿಸಬೇಕು. ರಾಜ್ಯ ಮಟ್ಟದ ಪ್ರತಿಭಾ ಕಾರಂಜಿಗೆ ಆಗಮಿಸವ ವಿದ್ಯಾರ್ಥಿ ಹಾಗೂ ಶಿಕ್ಷಕರು ಜಿಲ್ಲೆಯಿಂದ ಸವಿ ನೆನಪುಗಳೊಂದಿಗೆ ಮರಳುವಂತೆ ಕಾರ್ಯಕ್ರಮ ಆಯೋಜಿಸುವಂತೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ತಿಳಿಸಿದರು.

> ಪ್ರತಿಭಾ ಕಾರಂಜಿ ನಡೆಯುವ ಸ್ಥಳದಲ್ಲಿ ತಾತ್ಕಾಲಿಕವಾಗಿ ಆರೋಗ್ಯ ಕೇಂದ್ರ ಸ್ಥಾಪನೆ ಮಾಡಬೇಕು. ಇಬ್ಬರು ವೈದ್ಯರು ಸೇರಿದಂತೆ ಅಗತ್ಯ ವೈದ್ಯಕೀಯ ಸಿಬ್ಬಂದಿ, ಔಷಧೋಪಚಾರಗಳು ಸ್ಥಳದಲ್ಲಿ ಲಭ್ಯವಿರಬೇಕು. ತುರ್ತು ಸೇವೆಗಾಗಿ ಆಂಬ್ಯುಲೆನ್ಸ್ ಇರಿಸುವಂತೆ ಜಿಲ್ಲಾಧಿಕಾರಿ ಸೂಚಿಸಿದರು.

# ನಿವೃತ್ತ ನೌಕರರಿಗೆ ಆರ್ಥಿಕ ನಷ್ಟದ ಬೇಡಿಕೆ ಈಡೇರಿಸುವಂತೆ ಮನವಿ

• ಉದಯವಾಹಿನಿ, ಹುಣಸಗಿ


ಉದಯವಾಹಿನಿ ಚಿತ್ರ

ಏಳನೇ ವೇತನ ಆಯೋಗದ ವರದಿಯಂತೆ ಪರಿಷ್ಕೃತ ವೇತನದ ಮೇಲೆ ನಿವೃತ್ತಿ ಆರ್ಥಿಕ ಸೌಲಭ್ಯಗಳಾದ ಡಿ.ಸಿ.ಆರ್.ಜಿ, ಕಮ್ಯುಟೇಶನ್, ಗಳಿಕೆ ರಜೆ ನಗದೀಕರಣಗಳ ಸೌಲಭ್ಯಗಳ ಲೆಕ್ಕಾಚಾರದ ವ್ಯತ್ಯಾಸದ ಮೊತ್ತವನ್ನು ಮಾತ್ರ ಕೊಡಬೇಕೆಂದು ನಿವೃತ್ತ ಶಿಕ್ಷಕ ರಾಜಕುಮಾರ ಬಿರಾದಾರ ಮನವಿ ಮಾಡಿದರು. ಕರ್ನಾಟಕ ನಿವೃತ್ತ ನೌಕರರ ವೇದಿಕೆ ಕೇಂದ್ರ, ಸಮಿತಿ, ಬೆಂಗಳೂರು ಹಾಗೂ ಪಟ್ಟಣದ ನಿವೃತ್ತ ನೌಕರರು ಸೇರಿ ಮಾನ್ಯ ಮುಖ್ಯಮಂತ್ರಿಗಳಿಗೆ ಬರೆದ ಮನವಿ ಪತ್ರವನ್ನು ಮಹಾತ್ಮಾ ಗಾಂಧೀಜಿ ಇವರ ಪುಣ್ಯತಿಥಿ ದಿನಾಚರಣೆ ಸಂದರ್ಭದಲ್ಲಿ ತಹಶೀಲ್ದಾರ ಮೂಲಕ ಮನವಿ ಸಲ್ಲಿಸಿ ಮಾತನಾಡಿ,

**ನಿವೃತ್ತಿ ವೇತನದ ವ್ಯತ್ಯಾಸವನ್ನು ಕೇಳುತ್ತಿಲ್ಲ**

ದಿನಾಂಕ 1-7-2022 ರಿಂದ 31-7-2024 ರ ಅವಧಿಯಲ್ಲಿ 25 ತಿಂಗಳು ಸೇವೆಸಲ್ಲಿಸಿ ನಿವೃತ್ತರಾದ ನೌಕರರಿಗೆ 7ನೇ ವೇತನ ಆಯೋಗದ ಅನುಷ್ಠಾನದಲ್ಲಿ ನಿವೃತ್ತಿ ಉಪಲಬ್ದಗಳನ್ನು ಪಾವತಿಸುವ ಸಂದರ್ಭದಲ್ಲಿ ಆರ್ಥಿಕ ನಷ್ಟವಾಗಿರುತ್ತದೆ.

ಈ ದಿಸೆಯಲ್ಲಿ ನಾವೆಲ್ಲರೂ ತಮ್ಮಲ್ಲಿ ಕೇಳಿಕೊಳ್ಳುವು ದೇನೆಂದರೆ ಪ್ರಸ್ತುತ ಸೇವೆಯಲ್ಲಿರುವ ಅಧಿಕಾರಿ ನೌಕರರಂತೆ ನಾವು ದಿನಾಂಕ 1-7-2022 ರಿಂದಲೇ ಪಡೆಯಬೇಕಿದ್ದ ನಿವೃತ್ತಿ ವೇತನದ ವ್ಯತ್ಯಾಸವನ್ನು ಕೇಳುತ್ತಿಲ್ಲ, ಬದಲಾಗಿ ನಾವು ಕೇಳುತ್ತಿರುವುದು ಡಿ.ಸಿ.ಆರ್.ಜಿ.. ಕಮ್ಯುಟೇಶನ್, ಗಳಿಕೆ ರಜೆ ನಗದೀಕರಣಗಳ ಸೌಲಭ್ಯಗಳ ಲೆಕ್ಕಾಚಾರದ ವ್ಯತ್ಯಾಸದ ಮೊತ್ತವನ್ನು ಮಾತ್ರ ಕೊಡಿ ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ನಾಗಪ್ಪ ಹಡಿಕ್ಯಾಳ, ಎಂ ಶಾಂತಪ್ಪ, ಪ್ರಾಣೇಶ, ಚಂದ್ರಶೇಖರ ಹೊಕ್ರಾಣಿ ಶಾಂತಪ್ಪ ಮೇಟಿ, ರಾಜಶೇಖರ, ಶಂಕರ ಅಂಗಡಿ, ಬಾಪುಗೌಡ, ಸಿದ್ದಪ್ಪ, ನೀಲಕಂಠಪ್ಪ, ಸಂಗಪ್ಪ, ಆನಂದ, ಅಮರಪ್ಪ, ನಾಗರಾಜ, ಮಲ್ಹಾರಾವ, ಅಮರೇಶ ಮಾಲಗತ್ತಿ, ಭೀಮಣ್ಣ ವಾಲ್ಮೀಕಿ, ಪರಶುರಾಮ, ಶೇಕಪ್ಪ ಚಬನೂರ ಸೇರಿದಂತೆ ಇತರರು ಇದ್ದರು.

# ಶುದ್ಧ ಭಸ್ಮ ತಯಾರಿಗೆ ಸನಾತನ ಮಾದರಿ

• ಉದಯವಾಹಿನಿ, ಕಾಸರಗೋಡು


ಉದಯವಾಹಿನಿ ಚಿತ್ರ


ಎಲ್ಲಾವೂ ಕಲಬೆರಕೆಯಾಗುತ್ತಿರುವ ಇತ್ತೀಚಿನ ದಿನಗಳಲ್ಲಿ ಶುದ್ಧ ಭಸ್ಮ ತಯಾರಿಗಾಗಿ ಸನಾತನ ಮಾದರಿಯನ್ನು ಅನು ಸರಿಸುತ್ತಿರುವ ಕಾರ್ಯವೊಂದು ನಡೆಯುತ್ತಿದೆ.

ದೇಸಿ ದನದ ಸಗಣಿಯಿಂದ ಬೆರಣಿ ತಟ್ಟಿ, ನಿಗದಿತ ದಿನಗಳಲ್ಲಿ ಅದನ್ನು ಸುಟ್ಟು ತಯಾರಿ ಸುವ ಭಸ್ಮ ಪ್ರಾಕೃತಿಕವಾಗಿರುತ್ತದೆ ಎಂಬುದನ್ನು ಇಲ್ಲಿ ಸಾರಲಾಗಿದೆ. ಏತಡ್ಕ ಸದಾಶಿವ ದೇವಾಲಯ ದಲ್ಲಿ ನಡೆಯಲಿರುವ ಬ್ರಹ್ಮಕಲಶೋತ್ಸವದ ಪೂರ್ವ ಭಾವಿಯಾಗಿ ನಡೆದ ಈ ಕ್ರಮಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ. ಶಿವಾರ್ಪಣಂ ಎಂಬ ಯೋಜನೆಯನ್ವಯ ಈ ಕ್ರಮ ಕೈಗೊಳ್ಳಲಾಗಿದೆ.

ಕಾರ್ಯಕರ್ತರು ದೇಸಿ ಗೋಮಯವನ್ನು ಸಂಗ್ರಹಿಸಿ ಬೆರಣಿ ತಟ್ಟಿ ನೀಡಿದ್ದರು. ಸೋಮ ಪ್ರದೋಷದಂದು ಇದಕ್ಕೆ ಅಗ್ನಿ ಸ್ಪರ್ಶ ಮಾಡಿ ಅಲ್ಲಿ ಲಭಿಸುವ ಭಸ್ಮವನ್ನು ದೇವಕಾರ್ಯಗಳಿಗೆ ಬಳಸಲಾಗುತ್ತಿದೆ. ಹಿಂದೆ ಪ್ರತಿ ಮನೆ ಗಳಲ್ಲೂ ಶುದ್ಧಭಸ್ಮ ತಯಾರಿಸಲಾಗುತ್ತಿತ್ತು. ಅಂಥ ಪದ್ಧತಿಯನ್ನು ನೆನಪಿಸುವ ಕಾರ್ಯವನ್ನು ಮಾಡಲಾಗುತ್ತಿದೆ. ಈ ಕೌಶಲವನ್ನು ನಾಡಿಗೆ ಪರಿಚಯಿಸಲಾಗುತ್ತಿದೆ ಎಂದು ಬ್ರಹ್ಮಕಲಶೋತ್ಸವ ಸಮಿತಿ ಉಪಾಧ್ಯಕ್ಷ ಪತ್ತಡ್ಕ ಗಣಪತಿ ಭಟ್ ತಿಳಿಸಿದರು. ಅಗ್ನಿಸ್ಪರ್ಶ ಯೋಜನೆ ಪ್ರಕಾರ ಪತ್ತಡ್ಕ ಗಣಪತಿ ಭಟ್ ಅವರು ಅಗ್ನಿ ಸ್ಪರ್ಶ ನಡೆಸಿ ಚಟುವಟಿಕೆಗೆ ಚಾಲನೆ ನೀಡಿದರು. ಪಳ್ಳತ್ತಡ್ಕ ವಲಯದ 263ನೇ ಪ್ರತಿರುದ್ರ ಪಾರಾಯಣ 21 ಮಂದಿ ರುದ್ರ ಪಾಠಕರಿಂದ ನಡೆಯಿತು.

# ಮಡಿವಾಳ ಮಾಚಿದೇವರು ಸಮಾಜ ಸುಧಾರಣೆ ಮಾಡುವುದರಲ್ಲಿ ಪ್ರಮುಖ ಪಾತ್ರ

• ಉದಯವಾಹಿನಿ, ಚಿಂಚೋಳಿ


ಉದಯವಾಹಿನಿ ಚಿತ್ರ

ಮಡಿವಾಳ ಮಾಚಿದೇವರು 12ನೇ ಶತಮಾನದಲ್ಲಿ ಸಮಾಜದಲ್ಲಿನ ಮೇಲುಕೀಳು, ಅನ್ಯಾಯ,ಮಹಿಳಾ ದೌರ್ಜನ್ಯಗಳು ವಚನಗಳ ಮೂಲಕ ತಡೆಗಟ್ಟಲು ಪ್ರಯತ್ನಿಸಿ ಸಮಾಜ ಸುಧಾರಣೆ ಮಾಡುವುದರಲ್ಲಿ ಮಾಚಿದೇವರು ಪ್ರಮುಖ ಪಾತ್ರವಹಿಸಿದ್ದರು ಎಂದು ಪುರಸಭೆ ಅಧ್ಯಕ್ಷ ಆನಂದಕುಮಾರ ಟೈಗರ್ ಹೇಳಿದರು. ಪಟ್ಟಣದ ತಹಶೀಲ್ ಕಾರ್ಯಾಲಯದಲ್ಲಿ ಹಮ್ಮಿಕೊಂಡ ತಾಲ್ಲೂಕಾಡಳಿತ ವತಿಯಿಂದ ಹಮ್ಮಿಕೊಂಡ ಮಡಿವಾಳ ಮಾಚಿದೇವರು ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಮಾತ ನಾಡಿದ ಅವರು, ನಾವೆಲ್ಲರೂ ಮಡಿವಾಳ ಮಾಚಿದೇವರು ಆದರ್ಶ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಜಯಂತ್ಯೋತ್ಸವ ಕಾರ್ಯಕ್ರಮವನ್ನು ತಹಶೀಲ್ದಾರ್ ಸುಬ್ಬಣ್ಣ ಜಮಖಂಡಿಯವರು ಉದ್ಘಾಟಿಸಿ ಮಾತನಾಡಿದ ಅವರು, ಮಡಿವಾಳ ಮಾಚಿದೇವರು ಸೇರಿದಂತೆ ಹಲವಾರು ಶರಣರು ವಿಶ್ವ ಗುರು ಬಸವಣ್ಣನವರ ಸಮಾಜ ಸೇವೆ ಕ್ರಾಂತಿ ಸಮಾನತೆ ನೋಡಿ ಅವರ ಜೋತೆಗೂಡಿ ಸಮಾಜ ಸುಧಾರಕರಾಗಿದ್ದರು. ಮಡಿವಾಳ ಸಮಾಜ ಚಿಕ್ಕ ಸಮಾಜ ಬಹಳ ಮುಗ್ಧ ಸಮಾವಾಗಿದ್ದು ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕು ಆಗ ಸಮಾಜ ಬದಲಾವಣೆ ಮಾಡಲು ಸಾಧ್ಯವಾಗುತ್ತದೆ,ಅಂಬೇಡ್ಕರ್ ಅವರು ಪ್ರತಿಯೊಂದು ಜಾತಿಧರ್ಮಗಳಿಗೆ ಸಮಾನವಾದ ಮೀಸಲಾತಿ ನೀಡಿದ್ದಾರೆ ಸದುಪಯೋಗ ಪಡೆದುಕೊಳ್ಳಬೇಕು. ಯಾವುದೇ ಮಹಾಪುರುಷರಿಗೆ ಒಂದು ಜಾತಿಗೆ ಸೀಮಿತಗೊಳಿಸದೆ ಇಡಿ ಸಮಾಜದ ಸುಧಾರಣೆಗೆ ದುಡಿದವರು ಮಹಾಪುರುಷರು ಶರಣು ಈಗ ನಾವೆಲ್ಲರೂ ಜಾತಿಗಳ ಮೇಲೆ ಹಂಚ್ಚಿಕೊಂಡಿದ್ದು ನೋವಿನ ಸಂಗತಿಯಾಗಿದೆ ಎಂದರು. ಕಾಶಿನಾಥ ಮಡಿವಾಳ,ಪುರಸಭೆ ಮುಖ್ಯಾಧಿಕಾರಿ ಕಾಶಿನಾಥ ಧನ್ನಿ ಮಾತನಾಡಿದರು.

**ಪ್ರಮುಖರು:** ಮಡಿವಾಳ ಸಮಾಜದ ಅಧ್ಯಕ್ಷ ಮಲ್ಲಿಕಾರ್ಜುನ ಮಡಿವಾಳ, ತಾಪಂ.ಎಡಿ ನಾಗೇಂದ್ರಪ್ಪಾ, ಕಸಾಪ ಅಧ್ಯಕ್ಷ ಸುರೇಶ ದೇಶಪಾಂಡೆ, ಕಿರಣಕುಮಾರ ಕೊಳ್ಳೂರಕರ, ಅನೀಲ ಕುಮಾರ, ಮಧುಕರ ಕೊಳ್ಳೂರಕರ, ನಾಗಪ್ಪ, ರಮೇಶ ಅಧಿಕಾರಿಗಳು ಮುಖಂಡರು ಇದ್ದರು.

**ಮಕ್ಕಳಿಗೆ ಉನ್ನತ ಮಟ್ಟದ ಶಿಕ್ಷಣ ನೀಡಿ**

ಮಾಚಿದೇವರು 300ಕ್ಕಿಂತ ಹೆಚ್ಚು ವಚನ ಗಳು ಬರೆದರು, ಸಮಾಜವನ್ನು ತಿದ್ದುವ ಕೆಲಸ ಮಾಡಿದರು, 12ನೇ ಶತಮಾನದಲ್ಲಿ ಬಸವಣ್ಣ ನವರು ಅಂತರ್ಜಾತಿ ವಿವಾಹ ಮಾಡಿಸಿ ಸಮಾನತೆ ದೊರಕಿಸಿಕೊಡುವ ಕೆಲಸ ಮಾಡಿದರು, ಮಡಿವಾಳ ಮಾಚಿದೇವರ ಆದರ್ಶ ತತ್ವಗಳನ್ನು ನಿಜಜೀವನದಲ್ಲಿ ಅಳವಡಿಸಿಕೊಂಡು ಮಡಿವಾಳ ಸಮಾಜದವರು ತಮ್ಮ ತಮ್ಮ ಮಕ್ಕಳಿಗೆ ಉನ್ನತಮಟ್ಟದ ಶಿಕ್ಷಣ ನೀಡಬೇಕು ಆಗ ಮಾತ್ರ ಸಮಾಜ ಮುಖ್ಯವಾಹಿನಿಗೆ ಬರಲು ಸಾಧ್ಯ.

# ಬಸವರಾಜಪ್ಪ ವಿಭೂತಿಹಳ್ಳಿ ಸಚಿವರ ವಿರುದ್ಧ ನೀಡಿರುವ ಹೇಳಿಕೆ ಖಂಡನೀಯ

• ಉದಯವಾಹಿನಿ, ಯಾದಗಿರಿ



ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಅವರು ಅಭಿವೃದ್ಧಿಗೆ ಅತ್ಯಂತ ನಿಷ್ಠೆ ಪ್ರಾಮಾಣಿಕತೆಯಿಂದ ಕೆಲಸ ಮಾಡಿದ್ದು, ಜಿಲ್ಲೆಯನ್ನು ಪ್ರಗತಿ ಪಥದಲ್ಲಿ ಕೊಂಡೊಯ್ಯಲು ಪ್ರಯತ್ನಿಸುತ್ತಿದ್ದಾರೆ. ಆದರೆ ನೂತನ ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜಪ್ಪ ವಿಭೂತಿಹಳ್ಳಿ ಸಚಿವರ ವಿರುದ್ಧ ನೀಡಿರುವ ಹೇಳಿಕೆ ಖಂಡನಾರ್ಹ ಎಂದು ಪ್ರಶಾಂತ ಗೌಡ ದೊಡಮನಿ ಆಕ್ರೋಶ ವ್ಯಕ್ತಪಡಿಸಿರದ್ದಾರೆ. ಇವರಿಗೆ ಕ್ಷೇತ್ರದಲ್ಲಾಗುತ್ತಿರುವ ಅಭಿವೃದ್ಧಿ ಕಾರ್ಯಗಳು ಕಣ್ಣಿ ಕಾಣಿಸುತ್ತಿಲ್ಲಾ ಅನಿಸುತ್ತಿದೆ. ಕ್ಷೇತ್ರದ ಜನತೆ ಎಲ್ಲಾವನ್ನೂ ಗಮನಿಸುತ್ತಾರೆ ಎಂಬ ಪ್ರಜ್ಞೆ ಇರಲಿ. ಸಚಿವ ದರ್ಶನಾಪುರ ಅವರು ಜನರ ಸಮಸ್ಯೆಗಳಿಗೆ ನಿರಂತರ ಸ್ಪಂದಿಸುವ ಜನನಾಯಕರಾಗಿದ್ದು. ಅದು ಇಡೀ ರಾಜ್ಯಕ್ಕೆ ಗೊತ್ತಿದೆ. ನಾಲಿಗೆ ಹರಿಬಿಟ್ಟರೆ ನೀವೇನು ದೊಡ್ಡವರಾಗುವುದಿಲ್ಲ. ದರ್ಶನಾಪುರ ಕುಟುಂಬದ ಬಗ್ಗೆ ಇಲ್ಲ ಸಲ್ಲದ ಆರೋಪ ಮಾಡುವುದು ನಿಮಗೆ ಶೋಭೆ ತರುವಂತದಲ್ಲ, ಆದ್ದರಿಂದ ಕೂಡಲೇ ಬಸವರಾಜಪ್ಪ ವಿಭೂತಿಹಳ್ಳಿ ಕ್ಷೇಮೆ ಯಾಚಿಸಬೇಕು ಎಂದು ಆಗ್ರಹಿಸಿದ್ದಾರೆ.

# ಸಂಸದರಿಗೆ ಮನವಿಗಳ ಮಹಾಪೂರ

• ಉದಯವಾಹಿನಿ, ಚಿಂಚೋಳಿ


ಉದಯವಾಹಿನಿ ಚಿತ್ರ

ತಾಲ್ಲೂಕಿನ ಚಿಮ್ಮಾನಚೋಡ ಗ್ರಾಮದಲ್ಲಿ ಕಾಂಗ್ರೇಸ್ ಪಕ್ಷದ ಪ್ರಮುಖ ಕಾರ್ಯಕರ್ತರ ಸಭೆಗೆ ಬೀದರ ಸಂಸದ ಸಾಗರ್ ಖಂಡ್ರೆಯವರು ಆಗಮಿಸಿದ ಸುದ್ದಿ ತಿಳಿದ ಸಾರ್ವಜನಿಕರು ಮೂಲಭೂತ ಸೌಕರ್ಯ ಸೇರಿದಂತೆ ಹಲವು ಸಮಸ್ಯೆಗಳು ಲಿಖಿತ ರೂಪದಲ್ಲಿ ಬೀದರ ಸಂಸದ ಸಾಗರ್ ಖಂಡ್ರೆಯವರಿಗೆ ಮನವಿಗಳ ಮಹಾಪೂರವೇ ಹರಿದು ಬಂದಿದವು ಆದರೆ ಸಂಸದರು ಜನರ ಸಮಸ್ಯೆಗಳ ಮನವಿಗಳು ಪಡೆದುಕೊಂಡು ಪ್ರತಿಯೊಂದು ಮನವಿಗಳಿಗೂ ಸ್ವಂದಿಸಿ ಅವರ ಸಮಸ್ಯೆಗಳು ಆಲಿಸಿದರು.

ಕೆಪಿಸಿಸಿ ಉಪಾಧ್ಯಕ್ಷ ಸುಭಾಷ್ ರಾಠೋಡ್, ಅಬ್ದುಲ್ ಬಾಷೀದ್, ಆನಂದಕುಮಾರ ಟೈಗರ್, ಲಕ್ಷ್ಮಿದೇವಿ ಕೊರವಿ, ಸಂತೋಷ ಗುತ್ತೇದಾರ, ಕಾಂಗ್ರೇಸ್ ಪಕ್ಷದ ಪ್ರಮುಖರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಮತ್ತೊಮ್ಮೆ ನಾನೇ ರಾಜ್ಯಾಧ್ಯಕ್ಷನಾಗಿ ಮುಂದುವರಿಯುವೆ: ವಿಜಯೇಂದ್ರ ಟಾಂಗ್

• ಉದಯವಾಹಿನಿ, ಕಲಬುರಗಿ

ರಾಜಕೀಯ ಪಕ್ಷ ಅಂದಮೇಲೆ ಕಷ್ಟ ಸಂಕಷ್ಟ ಎರಡು ಇರುತ್ತೆ, ಐದಾರು ಜನ ಹಿರಿಯರನ್ನ ವಿಶ್ವಾಸಕ್ಕೆ ತೆಗೆದುಕೊಂಡು ಹೋಗೋಕೆ ಆಗಿಲ್ಲ, ನನ್ನ ಕಡೆಯಿಂದ ಪ್ರಯತ್ನ ನಡೆಯುತ್ತಿದೆ ಎಂದು ಬಿವೈ ವಿಜಯೇಂದ್ರ ಹೇಳಿದರು.

ಕಲಬುರಗಿಯಲ್ಲಿ ಮಾತನಾಡಿದ ಅವರು, ನನ್ನಲ್ಲೂ ಕೆಲ ನ್ಯೂನ್ಯತೆಗಳಿರಬಹುದು, ಎಲ್ಲಾರನ್ನೂ ಕೂಡ ಜೊತೆ ಕರೆದುಕೊಂಡು ಹೋಗುತ್ತೇನೆ, ಸ್ವಲ್ಪ ತಲೆ ಕೆಡಿಸಿಕೊಳ್ಳ ಬೇಕಾಗುತ್ತೆ ಎಂದು ಹೇಳಿದರು. ಯತ್ನಾಳ್ ಅಂಡ್ ಟೀಮ್‌ಗೆ ಗಾಣಗಾಪುರದ ದತ್ತಾತ್ರೇಯ ಅವರಿಗೆ ಒಳ್ಳೆಯದು ಮಾಡಲಿ, ರಾಜ್ಯಾದ್ಯಕ್ಷ ಸ್ಥಾನಕ್ಕೆ ಸ್ಪರ್ಧೆನು ಮಾಡುತ್ತೇನೆ, ನಾನೇ ಮುಂದುವರೆಯುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಎರಡನೇ ಬಾರಿಯೂ ರಾಜ್ಯಾಧ್ಯಕ್ಷನಾಗಿಯೂ ಕೂಡ ಮುಂದುವರೆಯುತ್ತೇನೆ, ಘೋಷಣೆಯಾಗಿರೋ ಯಾವ ಜಿಲ್ಲಾಧ್ಯಕ್ಷ ಸ್ಥಾನವು ಬದಲಾಗಲ್ಲ, ಯಾರಿಗೂ ನೋವಿದೆ ಅವರು ನಮ್ಮ ರಾಷ್ಟ್ರೀಯ ಉಪಾಧ್ಯಕ್ಷ ಲಕ್ಷ್ಮಣ ಅವರಿಗೆ ಪತ್ರ ಬರೆಯಲಿ, ಅಮಿತ್ ಶಾ ಅಲ್ಲ ಲಕ್ಷ್ಮಣ ಅವರಿಗೆ ಪತ್ರ ಬರೆಯಬೇಕು, ಜಿಲ್ಲಾಧ್ಯಕ್ಷ ಆಯ್ಕೆಯಲ್ಲಿ ನಾನೂ ಮೂಗು ತೂರಿಸಿಲ್ಲ, ಜಿಲ್ಲಾಧ್ಯಕ್ಷ ಸ್ಥಾನ ರಾಜ್ಯಾಧ್ಯಕ್ಷ ಸ್ಥಾನದ ಬಗ್ಗೆ ಇಷ್ಟರ ಮಟ್ಟಿಗೆ ಚರ್ಚೆಯಾಗ್ತಿರೋದು ಒಳ್ಳೆಯದು, ಚುನಾವಣೆಯಾಗಲಿ ನಾನು ಚುನಾವಣೆಗೆ ನಿಲ್ಲೇನೆ ಎಂದು ಹೇಳಿದರು.

# ಕೊಠಡಿ ಕೊರತೆ: ಬಯಲಲ್ಲೇ ಪಾಠ

• ಉದಯವಾಹಿನಿ, ಕವಿತಾಳ


ಉದಯವಾಹಿನಿ ಚಿತ್ರ

ಇಲ್ಲಿಗೆ ಸಮೀಪದ ಹಿರೇಹಣಿಗಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೊಠಡಿಗಳ ಕೊರತೆಯಿಂದ ಮಕ್ಕಳು ಬಯಲಿನಲ್ಲಿ ಕುಳಿತು ಪಾಠ ಕೇಳುವಂತಾಗಿದೆ. ಹೊಸದಾಗಿ ನಾಲ್ಕು ಕೊಠಡಿಗಳು ಮಂಜೂರಾಗಿದ್ದರೂ ಹಳೇ ಶಾಲೆ ಹತ್ತಿರ ಜಾಗದ ಕೊರತೆ ಮತ್ತು ಹೊರ ವಲಯದ ಹೊಸ ಶಾಲೆಯ ಹತ್ತಿರ ಕೊಠಡಿ ನಿರ್ಮಿಸಲು ಸ್ಥಳೀಯರ ವಿರೋಧದ ನಡುವೆ ನಿರ್ಮಾಣ ಕಾಮಗಾರಿ ಸ್ಥಗಿತವಾಗಿದೆ.

ಹೊರ ವಲಯದಲ್ಲಿ ನಿರ್ಮಿಸಿದ 4 ಕೊಠಡಿಗಳು ಹಳೇ ಶಾಲೆಯಿಂದ ದೂರದಲ್ಲಿರುವ ಕಾರಣ ದಶಕಗಳಿಂದ ಪಾಳು ಬಿದ್ದಿವೆ. ಹಿಂದೆ ಅಲ್ಲಿ ತರಗತಿಗಳು ನಡೆದರೂ ಮದ್ಯಾಹ್ನದ ಬಿಸಿಯೂಟ ಮಾಡಲು ರಾಜ್ಯ ಹೆದ್ದಾರಿ ಹಾಯ್ದು ಹಳೇ ಶಾಲೆಗೆ ಬರಬೇಕಾದ ಕಾರಣ ಅಲ್ಲಿನ ಕೊಠಡಿಗಳು ನಿರುಪಯುಕ್ತವಾಗಿವೆ. ಸದ್ಯ ಪಾಳು ಬಿದ್ದ 4 ಕೊಠಡಿಗಳನ್ನು ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕಾಮಗಾರಿಯಲ್ಲಿ ತೊಡಗಿಸಿಕೊಂಡ ಕಾರ್ಮಿಕರು ಬಳಿಸಿಕೊಳ್ಳುತ್ತಿದ್ದಾರೆ. ದಶಕ ಗಳಿಂದ ಪಾಳು ಬಿದ್ದ ಹೊಸ ಶಾಲೆ ಹತ್ತಿರ ಮತ್ತೆ ಹೊಸದಾಗಿ ಕಟ್ಟಡ ನಿರ್ಮಿಸುವುದು ಎಷ್ಟು ಸೂಕ್ತ ಹಳೇ ಶಾಲೆ ಸಂಪೂರ್ಣ ತೆರವುಗೊಳಿಸಿ ಹೊಸದಾಗಿ ನಿರ್ಮಿಸಬೇಕು ಎಂದು ಗ್ರಾಮದ ವಿರೇಶ ಹೊಟೇಲ್ ಒತ್ತಾಯಿಸಿದರು.

**ಒಂದೆಡೆ ಕೂಡಿಸಿ ಪಾಠ**

ಎಲ್‌ಕೆಜಿ, ಯುಕೆಜಿಯ 23 ಮಕ್ಕಳು ಸೇರಿದಂತೆ 7ನೇ ತರಗತಿಯವರೆಗೆ ಒಟ್ಟು 242 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಐದು ಕೊಠಡಿಗಳಿದ್ದು ಸದ್ಯ 4 ಮತ್ತು 5ನೇ ತರಗತಿಯ ಮಕ್ಕಳನ್ನು ಒಂದೆಡೆ ಕೂಡಿಸಿ ಪಾಠ ಮಾಡಲಾಗುತ್ತಿದೆ. ಎಲ್ ಕೆಜಿ, ಯುಕೆಜಿ ಮಕ್ಕಳನ್ನು ಅಂಗನವಾಡಿ ಕೇಂದ್ರದಲ್ಲಿ ಕೂಡಿಸಲಾಗುತ್ತಿದೆ.

# ಫೆ.4.ರಿಂದ ಗೋನಾಲ ದುರ್ಗಾದೇವಿ ಜಾತ್ರಾ ಮಹೋತ್ಸವ ಆರಂಭ

• ಉದಯವಾಹಿನಿ, ವಡಗೇರಾ




ಉದಯವಾಹಿನಿ ಚಿತ್ರ

ಪ್ರತಿವರ್ಷದಂತೆ ಈ ವರ್ಷವೂ ಕಲ್ಯಾಣ ಕರ್ನಾಟಕ ಭಾಗದ ಯಾದಗಿರಿ ಜಿಲ್ಲೆಯ ವಡಗೇರಾ ತಾಲ್ಲೂಕಿನ ಪ್ರಸಿದ್ಧ ಕ್ಷೇತ್ರವಾದ ಗೋನಾಲ ಗ್ರಾಮದ ಆದಿಶಕ್ತಿ ಶ್ರೀ ದುರ್ಗಾದೇವಿಯ ಜಾತ್ರೆಯು ಫೆ. 4 ರಿಂದ ಆರಂಭವಾಗಲಿದೆ ಎಂದು ಶ್ರೀ ದುರ್ಗಾದೇವಿ ದೇವಸ್ಥಾನದ ಪರಮ ಪೂಜ್ಯ ಮರಿಸ್ವಾಮಿ ತಾತನವರು ತಿಳಿಸಿದ್ದಾರೆ.

ಫೆ. 4.ರಂದು ಮಂಗಳವಾರ ಬೆಳಿಗ್ಗೆ 6 ಗಂಟೆಯಿಂದ 7.30 ರವರೆಗೆ ಕಳಸಾ ಪೂಜೆ ಹಾಗೂ 10. ಗಂಟೆಗೆ ಕೃಷ್ಣಾ ನದಿಗೆ ಗಂಗಾ ಸ್ನಾನಕ್ಕೆ ತೆರಳಿ ನಂತರ ಅಮ್ಮನವರಿಗೆ ವಿವಿಧ ಪೂಜಾ ಕಾರ್ಯಕ್ರಮಗಳು ನೆರವೇರಲಿವೆ ಮಧ್ಯಾಹ್ನ 12. ಗಂಟೆಗೆ ಕೋಳಿ ಹುಂಜಗಳ ಅಗ್ನಿ ಪ್ರವೇಶ ಜರುಗುವುದು 1.ಗಂಟೆಯಿಂದ.11.30.ರವರೆಗೆ ಭಕ್ತರ ಜ್ಯೋತಿ ಹರಕೆಯು ನೆರವೇರುವುದು ಅಂದು ಸಾಯಂಕಾಲ 5. 30. ಕ್ಕೆ ಉಚ್ಚಾಯಿ ಮಹೋತ್ಸವ ಜರುಗುವುದು ರಾತ್ರಿ ಭಜನಾ ಕಾರ್ಯಕ್ರಮಗಳು ನಡೆಯುವವು ಫೆ.5. ರಂದು ಬೆಳಿಗ್ಗೆ 4. ಗಂಟೆಗೆ ಕೈಯಿಂದ ಪಾಯಸ ತಿರುಸುವ ಪವಾಡ ಜರುಗುವುದು ಬೆಳಗ್ಗೆ 9:00 ಗಂಟೆಯಿಂದ ಮಧ್ಯಾಹ್ನ 1. ಗಂಟೆಯವರೆಗೆ ಮಕ್ಕಳ ಜವಳಾ ಕಾರ್ಯಕ್ರಮ ಜರುಗುತ್ತವೆ ಸಾಯಂಕಾಲ 5:30ಕ್ಕೆ ಶ್ರೀ ದುರ್ಗಾ ದೇವಿಯ ಮಹಾ ರಥೋತ್ಸವ ಅತ್ಯಂತ ಸಡಗರ ಸಂಭ್ರಮದಿಂದ ಜರಗುವುದು ರಥೋತ್ಸವದ ನಂತರ ಜೋಗುತಿ ಕುಣಿತ ರಾತ್ರಿ ಭಜನಾ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗುತ್ತವೆ ಈ ಜಾತ್ರಾ ಮಹೋತ್ಸವದಲ್ಲಿ ಕರ್ನಾಟಕ ಸೇರಿದಂತೆ ಆಂಧ್ರ , ತೆಲಂಗಾಣ, ಮಹಾರಾಷ್ಟ್ರ, ಗುಜರಾತ್, ಇನ್ನಿತರ ಪ್ರದೇಶಗಳಿಂದ ಭಕ್ತರು ಮತ್ತು ಜನಪ್ರತಿನಿಧಿಗಳು ವಿವಿಧ ಪಕ್ಷದ ರಾಜಕೀಯ ಮುಖಂಡರು ಸುತ್ತಮುತ್ತಲು ಗ್ರಾಮದ ಭಕ್ತಾದಿಗಳು ಭಾಗವಹಿಸಲಿದ್ದಾರೆ.

ಪರಸ್ಥಳದಿಂದ ಬಂದಂತ ಭಕ್ತರಿಗೆ ದೇವಸ್ಥಾನದ ವತಿಯಿಂದ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ದೇವಸ್ಥಾನದ ಭಕ್ತಾದಿಗಳು ತಿಳಿಸಿದ್ದಾರೆ. ಈ ಜಾತ್ರಾ ಮಹೋತ್ಸವಕ್ಕೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ರೀ ದುರ್ಗಾದೇವಿಯ ಕೃಪಾಶೀರ್ವಾದ ಪಡೆದುಕೊಳ್ಳುವಂತೆ ಗೋನಾಲ ಗ್ರಾಮಸ್ಥರು ಕೋರಿದ್ದಾರೆ.

# ಮುಸ್ಲಿಂ ಮತಕ್ಕಾಗಿ ಇಷ್ಟು ಕೀಳು ಮಟ್ಟಕ್ಕೆ ಇಳಿದಿರೋದು ಸರಿಯಲ್ಲ

## ಮಲ್ಲಿಕಾರ್ಜುನ ಖರ್ಗೆಗೆ ವಯಸ್ಸು 80 + ಆದರೂ 2 ವರ್ಷದ ಹುಡುಗನ ರೀತಿ ಆಡುತ್ತಿದ್ದಾರೆ: ಈಶ್ವರಪ್ಪ ವ್ಯಂಗ್ಯ

• ಉದಯವಾಹಿನಿ, ಶಿವಮೊಗ್ಗ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಯಸ್ಸು 80 ಪ್ಲಸ್ ಆಗಿದೆ. ಆದರೆ 2 ವರ್ಷದ ಹುಡುಗನ ರೀತಿ ಆಡುತ್ತಿದ್ದಾರೆ. ಹಿಂದು ಸಮಾಜದ ಮೇಲೆ ಯಾಕೆ ನಿಮಗೆ ಚಿಂತೆ ಎಂದು ಕೆ.ಎಸ್.ಈಶ್ವರಪ್ಪ ಹೇಳಿದರು. ಶಿವಮೊಗ್ಗದಲ್ಲಿ ಮಾತನಾಡಿದ ಅವರು, ಈ ಸಮಾಜದಲ್ಲಿ ಪುಣ್ಯಕ್ಷೇತ್ರದ ಬಗ್ಗೆ, ಹಸು ಬಗ್ಗೆ, ನದಿ ಬಗ್ಗೆ ಹಗುರವಾಗಿ ಮಾತನಾಡುವ ಅನೇಕರು ಕಾಂಗ್ರೇಸ್ ನಲ್ಲಿದ್ದಾರೆ. ಮೋದಿ ಬಗ್ಗೆ ಅಮಿತ್ ಶಾ ಬಗ್ಗೆ ಟೀಕೆ ಮಾಡಲು ನೀವು ಯಾರು? ಇಡೀ ಹಿಂದು ಸಮಾಜದ ಬಗ್ಗೆ, ನಮ್ಮ ತೀರ್ಥ ಕ್ಷೇತ್ರದ ಬಗ್ಗೆ ಹಗುರವಾಗಿ ಮಾತನಾಡಬೇಡಿ ಎಂದರು. ಎರಡು ವರ್ಷದ ಮಗು ಹಾಡಿದ ಹಾಗೇ ಆಡಬೇಡಿ. ದಯವಿಟ್ಟು ಖರ್ಗೆಯವರೇ ಟೀಕೆ ಮಾಡಬೇಡಿ. ಮುಸ್ಲಿಂ ಮತಕ್ಕಾಗಿ ಇಷ್ಟು ಕೀಳು ಮಟ್ಟಕ್ಕೆ ಇಳಿದಿರೋದು ಸರಿಯಲ್ಲ. ನೀವು ದೊಡ್ಡ ರಾಜಕಾರಣಿ. ನೀವು ಬಾಯಿ ಮುಚ್ಚಿಕೊಂಡು ಇರಿ ಅಂತ ಹೇಳಬೇಕಾಗುತ್ತದೆ ಎಂದು ವಾಗ್ದಾಳಿ ನಡೆಸಿದರು.

ಇದುವರೆಗೂ ಚುನಾವಣೆ ನಡೆಸಿಕೊಂಡು ಬರುತ್ತಿರುವುದು ಭಾರತೀಯ ಜನತಾ ಪಕ್ಷದಲ್ಲಿ ಮಾತ್ರ. ಪ್ರಜಾಪ್ರಭುತ್ವ ವ್ಯವಸ್ಥೆ ಇರುವುದು ಭಾರತೀಯ ಜನತಾ ಪಕ್ಷದಲ್ಲಿ ಮಾತ್ರ. ರಾಜ್ಯದ ರಾಜಕಾರಣವೇ ಕುಲಗೆಟ್ಟು ಹೋಗಿದೆ. ಬಿಜೆಪಿ ಪರಿಸ್ಥಿತಿ ನೋಡಿ ನಮ್ಮ ಪಕ್ಷ ಹೀಗಾಗಿದೆಯಲ್ಲ ಎಂದು ತುಂಬಾ ನೋವಿದೆ. ಪಕ್ಷ ಕಟ್ಟುವಲ್ಲಿ ಎಷ್ಟೋ ಜನರ ನೋವು ಬಲಿದಾನ ಆಗಿದೆ. ಅವರೆಲ್ಲರ ತಪಸ್ಸು ಅವರೆಲ್ಲರ ಬಲಿದಾನದ ಪಕ್ಷ. ಕೆಲವು ರಾಜಕಾರಣಿಗಳ ಕೈಗೆ ಸಿಕ್ಕಿದೆ. ಸಿದ್ಧಾಂತದ ರಾಜಕಾರಣ ಮತ್ತೆ ಬರುತ್ತದೆ ಎಂಬ ನಂಬಿಕೆ ಇದೆ. ಪಕ್ಷ ಶುದ್ಧೀಕರಣ ಆಗ ಬೇಕಿದೆ. ಪಕ್ಷಾತೀತವಾಗಿ ಎಲ್ಲಾ ರಾಜಕೀಯದವರು ಬರುತ್ತಿದ್ದಾರೆ. ಬಿಜೆಪಿ ಶುದ್ಧೀಕರಣ ಆಗುತ್ತದೆ. ನಾನು ಬಿಜೆಪಿ ಪಕ್ಷ ಶುದ್ಧೀಕರಣ ಆಗಬೇಕು ಅಂದಮೇಲೆ ಎಲ್ಲರೂ ಮಾತನಾಡುತ್ತಿದ್ದಾರೆ ಎಂದರು. ಕೋಟಾ ಗ್ರಾಮದಲ್ಲಿ ಇಂದು ಹಸುವಿನ ಬಾಲ ಕಟ್ ಮಾಡಿದ್ದಾರೆ.



ಅವರು ಮನುಷ್ಯರಿಗೆ ಹುಟ್ಟಿದ್ದಾರೋ ಅಥವಾ ದನಕ್ಕೆ ಹುಟ್ಟಿದ್ದಾರೋ ಗೊತ್ತಿಲ್ಲ. ಬಾಲ್ ಕಟ್ ಮಾಡಿದವರು ಯಾರಿಗೆ ಹುಟ್ಟಿದ್ದಾರೋ ಗೊತ್ತಿಲ್ಲ. ಅವರು ನನ್ನ ಕೈಗೆ ಸಿಕ್ರೆ ಅವರ ಕೈ ಕಾಲು ಕಟ್ ಮಾಡ್ತೀನಿ. ನಿಮ್ಮ ತಾಯಿ ಕೆಚ್ಚಲು ಕಡಿದ್ರೆ ಸುಮ್ಮನೆ ಇರ್ತೀರಾ? ಹಿಂದೂಗಳ ತಾಳ್ಮೆ ನೀತಿ ಸಂಹಿತೆ ಕಾಯ್ತಿದೆ. ರಾಜ್ಯದಲ್ಲಿ ಮುಂದೆ ದೊಡ್ಡ ಬೆಂಕಿ ಹಚ್ಚಿಕೊಳ್ಳುತ್ತದೆ. ಪೊಲೀಸ್ ಇಲಾಖೆ ಈ ಕೂಡಲೇ ಇವರನ್ನ ಬೆನ್ನತ್ತಿ ಬಂಧಿಸಬೇಕು.

ಹೊನ್ನಾವರದಲ್ಲಿ ಒಂದು ಗ್ಯಾಂಗ್ ಇದೆ ಅಂತ. ಅಲ್ಲಿಗೆ ಹೋಗಿ ಬಂಧಿಸಿ ಅವ ರಿಗೆ ಸರಿಯಾದ ಶಿಕ್ಷೆ ಕೊಡಿ. ಅಂತಹ ದುಷ್ಕರ್ಮಿಗಳಿಗೆ ಕೈ ಕಾಲ್ ಕಟ್ ಮಾಡಬೇಕಾಗುತ್ತದೆ ಎಂದು ಕಿಡಿಕಾರಿದರು.

ಶಿವಮೊಗ್ಗದ ಆಶ್ರಯ ಮನೆಗಳಿಗೆ ಸಂಬಂಧಿಸಿದಂತೆ ಮಾತ ನಾಡಿದ ಅವರು, ಒಬ್ಬರಿಗೆ ಒಬ್ಬರು ಟೀಕೆ ಮಾಡುವುದು ರಾಜಕಾರಣದಲ್ಲಿ ತಪ್ಪಲ್ಲ.

ಆದರೆ ನಾವು ದ್ವೇಷ ಮಾಡಿಲ್ಲ. ಸ್ನೇಹದಿಂದಲೇ ರಾಜಕಾರಣ ಮಾಡಿ ದ್ದೇವೆ. ಗೆಲುವು ಸೋಲು ರಾಜಕಾರಣದಲ್ಲಿ ಇದ್ದಿದ್ದೇ, ಯಾರೂ ಕೂಡ ಸಿದ್ಧಾಂತ ಬಿಡುವ ಪ್ರಶ್ನೆ ಬರುವುದಿಲ್ಲ. ಆದರೆ ಆ ಬಡವರು 7 ವರ್ಷ ಆಗಿದೆ. ಹಣ ನೀಡಿ, ಕೊಟ್ಟಿರುವ ಹಣವನ್ನದರೂ ವಾಪಾಸ್ ಕೊಡಿ ಎನ್ನುವ ನಿಟ್ಟಿನಲ್ಲಿ ಕೆಲವರು ಇದ್ದಾರೆ. ರೆಡಿಯಾಗಿರುವ ಮನೆಯನ್ನಾದರೂ ಅವರಿಗೆ ಕೊಡಿ ಎನ್ನುವಂತೆ ಶಾಸಕರು ಹೇಳಿದ್ದಾರೆ.

ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ನಂತರ ಕೊಡುವ ಯೋಚನೆಯಲ್ಲಿರುವ ಸಚಿವರ ಯೊಚನೆ ಇದೆ, ಇಬ್ಬರದೂ ಸರಿ ಇದೆ ಎಂದರು.

> ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಯಸ್ಸು 80 ಪ್ಲಸ್ ಆಗಿದೆ. ಆದರೆ 2 ವರ್ಷದ ಹುಡುಗನ ರೀತಿ ಆಡುತ್ತಿದ್ದಾರೆ ಪುಣ್ಯಕ್ಷೇತ್ರದ ಬಗ್ಗೆ, ಹಸು ಬಗ್ಗೆ, ನದಿ ಬಗ್ಗೆ ಹಗುರವಾಗಿ ಮಾತನಾಡುವ ಅನೇಕರು ಕಾಂಗ್ರೇಸ್ ನಲ್ಲಿದ್ದಾರೆ'ಹಿಂದು ಸಮಾಜದ ಬಗ್ಗೆ, ನಮ್ಮ ತೀರ್ಥ ಕ್ಷೇತ್ರದ ಬಗ್ಗೆ ಹಗುರವಾಗಿ ಮಾತನಾಡಲು ನೀವ್ಯಾರ್ರೀ?
> -ಕೆ.ಎಸ್.ಈಶ್ವರಪ್ಪ, ಮಾಜಿ ಡಿಸಿಎಂ

**ನಿಮಗೆ ಯಾಕೆ ಚಿಂತೆ?**

ಕುಂಭಮೇಳದ ಬಗ್ಗೆ, ಹಿಂದು ಧರ್ಮದ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆಗೆ ಸಂಬಂಧಿಸಿದಂತೆ ಮಾಜಿ ಡಿಸಿಎಂ ಈಶ್ವರಪ್ಪ ವಾಗ್ದಾಳಿ ನಡೆಸಿದ್ದಾರೆ. ನಿಮಗೆ ವಯಸ್ಸು 80 + ಆಗಿದೆ. ಆದರೂ ವಯಸ್ಸಿಗೆ ತಕ್ಕ ಹಾಗೆ ಮಾತಾಡುವುದಿಲ್ಲ. 2 ವರ್ಷದ ಹುಡುಗನ ರೀತಿ ಆಡುತ್ತಿದ್ದೀರಿ. ಹಿಂದು ಸಮಾಜದ ಮೇಲೆ ನಿಮಗೆ ಯಾಕೆ ಚಿಂತೆ ಎಂದು ಪ್ರಶ್ನಿಸಿದ್ದಾರೆ.

# ಮಹಾಕುಂಭ ಮೇಳಕ್ಕೆ 77 ದೇಶಗಳ ರಾಜತಾಂತ್ರಿಕ ನಿಯೋಗ

## ಭಾರತದ ಸ್ಲೋವಾಕ್ ರಾಯಭಾರಿ ರಾಬರ್ಟ್ ಮ್ಯಾಕ್ಸಿಯಾನ್ ಮಹಾಕುಂಭ ಮೇಳದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ

**ಪ್ರಯಾಗ್‌ರಾಜ್:** ಉತ್ತರ ಪ್ರದೇಶದ ಪ್ರಯಾಗ್ ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳವು ಜಗತ್ತಿನ ಗಮನ ಸೆಳೆದಿದೆ.

ಮಹಾಕುಂಭ ಮೇಳದ ನಿಮಿತ್ತ ಸುಮಾರು 77 ದೇಶಗಳ ಸುಮಾರು 118 ರಾಜತಾಂತ್ರಿಕ ಸದಸ್ಯರ ನಿಯೋಗವು ಪ್ರಯಾಗ್‌ರಾಜ್‌ಗೆ ಭೇಟಿ ನೀಡಿದೆ. ಇವರೆಲ್ಲರೂ ಪ್ರಯಾಗರಾಜ್ ವಿಮಾನ ನಿಲ್ದಾಣಕ್ಕೆ ಬಂದಿಳಿದು ಮಹಾ ಕುಂಭಮೇಳದಲ್ಲಿ ಭಾಗಿಯಾಗಿದ್ದಾರೆ.

ಭಾರತದ ಸ್ಲೋವಾಕ್ ರಾಯಭಾರಿ ರಾಬರ್ಟ್ ಮ್ಯಾಕ್ಸಿಯಾನ್ ಅವರು ಮಹಾಕುಂಭ ಮೇಳದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ. ಈ ಕಾರ್ಯಕ್ರಮವನ್ನು ಆಯೋಜಿಸಿದ್ದಕ್ಕಾಗಿ ಭಾರತ ಸರ್ಕಾರವನ್ನು ಅಭಿನಂದಿಸಿದ್ದಾರೆ. ಮಹಾಕುಂಭ ಮೇಳಕ್ಕಾಗಿ ನಾನು ತುಂಬಾ ಉತ್ಸುಕನಾಗಿದ್ದೇನೆ.

ಈ ಮಹಾನ್ ಆಧ್ಯಾತ್ಮಿಕ ಕಾರ್ಯಕ್ರಮವನ್ನು ಆಯೋಜಿಸಿದ್ದಕ್ಕಾಗಿ ನಾನು ಭಾರತ ಸರ್ಕಾರವನ್ನು ಅಭಿನಂದಿಸಲು ಬಯಸುತ್ತೇನೆ. ನಾನು ಭಾರತದ ಅಭಿಮಾನಿ. ಭಾರತವು ನನ್ನ ಎರಡನೇ ಮನೆ ಇದ್ದಂತೆ ಎಂದು ಹೊಗಳಿದ್ದಾರೆ. ಭಾರತದಲ್ಲಿ ಅರ್ಜೆಂಟೀನಾದ ರಾಯಭಾರಿ ಮರಿಯಾನೊ ಕೌಸಿನೊ ಅವರು ಈ ಸಮಾರಂಭದಲ್ಲಿ ಭಾಗವಹಿಸಲು ಅವಕಾಶ ಸಿಕ್ಕಿದ್ದಕ್ಕೆ ಸಂತಸ ವ್ಯಕ್ತಪಡಿಸಿದ್ದಾರೆ. ಸಾಂಸ್ಕೃತಿಕ ಮತ್ತು ಸಾರ್ವಜನಿಕ ರಾಜತಾಂತ್ರಿಕತೆಯನ್ನು ಅನುಸರಿಸುವುದೇ ರಾಜತಾಂತ್ರಿಕ ಜೀವನ.

ನಮಗೆ ಆತಿಥ್ಯ ನೀಡಿದ ಉತ್ತರ ಪ್ರದೇಶ ರಾಜ್ಯಕ್ಕೆ ನಾವು ಆಭಾರಿಯಾಗಿದ್ದೇವೆ ಎಂದು ಹೊಗಳಿದ್ದಾರೆ.

ವಿದೇಶಾಂಗ ವ್ಯವಹಾರಗಳ ಸಚಿವರು ವರ್ಷಕ್ಕೊಮ್ಮೆ ಭಾರತದ ಪ್ರಮುಖ ಆಚರಣೆಗಳಿಗೆ ನಮ್ಮನ್ನು ಆಹ್ವಾನಿಸುತ್ತಾರೆ. ನಾನು ಕಳೆದ ಬಾರಿ ದೀಪಾವಳಿಗೆ ಆಹ್ವಾನ ಪಡೆದಿದ್ದೆ. ಆದರೆ, ಸುಮಾರು 144 ವರ್ಷಗಳಿಗೊಮ್ಮೆ ನಡೆಯುವ ಇಂತಹ ಕಾರ್ಯಕ್ರಮಕ್ಕೆ ನನ್ನ ಮಕ್ಕಳು ಕೂಡ ಭೇಟಿ ನೀಡಲು ಸಾಧ್ಯವಿಲ್ಲ ಎಂದು ಭಾರತದಲ್ಲಿನ ಬೊಲಿವಿಯಾ ಮಿಷನ್ ಮುಖ್ಯಸ್ಥ ಕ್ರಿಶ್ಚಿಯನ್ ವಿಲ್ಲಾರ್ರಿಯಲ್ ಕೂಡ ಸ್ಮರಿಸಿದ್ದಾರೆ. ಈ ಮಹತ್ವದ ಸಮಾರಂಭದಲ್ಲಿ ಭಾಗವಹಿಸಲು ಮತ್ತು ಸಂಪ್ರದಾಯಗಳನ್ನು ಅನುಸರಿಸಲು ನನಗೆ ತುಂಬಾ ಸಂತೋಷವಾಗಿದೆ ಎಂದು ಭಾರತದ ಅರ್ಜೆಂಟೀನಾದ ರಾಯಭಾರಿ ಮರಿಯಾನೊ ಕೌಸಿನೊ ಹೇಳಿದ್ದಾರೆ. ಮೇಳದ ಸರ್ಕ್ಯೂಟ್ ಹೌಸ್‌ನಲ್ಲಿ ವಿವಿಧ ದೇಶಗಳ ಮಿಷನ್ ಮುಖ್ಯಸ್ಥರ ಪ್ರತಿನಿಧಿಗಳನ್ನು ಯೋಗಿ ಭೇಟಿಯಾಗಲಿದ್ದಾರೆ. ಕೋಲ್ಡ್‌ಪ್ಲೇ ಖ್ಯಾತಿಯ ಫ್ರಂಟ್ ಮ್ಯಾನ್ ಕ್ರಿಸ್ ಮಾರ್ಟಿನ್ ಮತ್ತು ಗೆಳತಿ ಡಕೋಟಾ ಜಾನ್ಸನ್ ಕೂಡ ಇತ್ತೀಚೆಗೆ ಪ್ರಯಾಗರಾಜ್‌ನಲ್ಲಿ ನಡೆದ ಮಹಾ ಕುಂಭಮೇಳದಲ್ಲಿ ಭಾಗವಹಿಸಿದ್ದರು. ಈ ವಿಡಿಯೋ ಅನ್ನು ಇನ್‌ಸ್ಟಾಗ್ರಾಂನಲ್ಲಿ ಶೇರ್ ಮಾಡಿಕೊಂಡಿದ್ದರು. ಅಪ್ಪಟ ಭಾರತೀಯ ಸಂಪ್ರದಾಯದಲ್ಲಿ ಅವರು ಮಿಂಚಿದ್ದರು.



### ಜೀವಮಾನದಲ್ಲಿ ಒಮ್ಮೆ ಸಿಗುವ ಅನುಭವ

**ಈ ಮಹತ್ವದ ಸಮಾರಂಭದಲ್ಲಿ ಭಾಗವಹಿಸಲು ಮತ್ತು ಇಲ್ಲಿನ ಸಂಪ್ರದಾಯಗಳನ್ನು ಅನುಸರಿಸಲು ನನಗೆ ತುಂಬಾ ಸಂತೋಷವಾಗಿದೆ ಎಂದು ಅವರು ಹೇಳಿಕೊಂಡಿದ್ದಾರೆ. ಚಿನ್ನದ ಬೆಲೆ ದಿಢೀರ್ 50,000 ರೂಪಾಯಿಗೆ ಕುಸಿತ ಕಾಣುವ... ಮಹಾಕುಂಭ ಮೇಳವು ಜೀವಮಾನದಲ್ಲಿ ಒಮ್ಮೆ ಸಿಗುವ ಅನುಭವ ಇದು ಎಂದು ಭಾರತದಲ್ಲಿರುವ ಜಿಂಬಾಬ್ವೆ ರಾಯಭಾರಿ ಸ್ಟೆಲ್ಲಾ ನ್ಕೊಮೊ ಬಣ್ಣಿಸಿದ್ದಾರೆ.**

### ಪ್ರಯಾಗ್‌ರಾಜ್‌ಗೆ ಭೇಟಿ

**ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಇಂದು ಪ್ರಯಾಗ್‌ರಾಜ್‌ಗೆ ಭೇಟಿ ನೀಡಿದ್ದಾರೆ. ಮಹಾಕುಂಭದ ಸಂದರ್ಭದಲ್ಲಿ ಕಾಲ್ತುಳಿತದ ನಂತರ ಅವರ ಮೊದಲ ಬಾರಿಗೆ ಪ್ರಯಾಗ್ ರಾಜ್‌ಗೆ ಭೇಟಿ ನೀಡಿದ್ದಾರೆ. ಪ್ರಯಾಗ್‌ರಾಜ್‌ನ ಸೆಕ್ಟರ್-21ರ ಸತುವಾ ಬಾಬಾ ಆಶ್ರಮ ಮತ್ತು ಸೆಕ್ಟರ್-5ರ ಭಾರತ್ ಸೇವಾಶ್ರಮ್ ಶಿಬಿರಕ್ಕೂ ಭೇಟಿ ನೀಡಿದ್ದಾರೆ.**

**ಮೇಳದ ಬಗ್ಗೆ ಮೆಚ್ಚುಗೆಯ ಮಾತು**

# ಟ್ಯಾಕ್ಸ್ ಬಾಣ ಬಿಟ್ಟ ಟ್ರಂಪ್, ನಲುಗಿ ಹೋದ ಭಾರತ ವಿರೋಧಿ ಕೆನಡಾ

**ವಾಷಿಂಗ್ಟನ್:** ಡೊನಾಲ್ಡ್ ಟ್ರಂಪ್ ಅಮೆರಿಕ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಮನಸ್ಸಿಗೆ ಬಂದಂತೆ ಆದೇಶ ನೀಡುತ್ತಿದ್ದಾರೆ ಎಂಬ ಆರೋಪ ಇದೆ. ಆದರೆ ಎದರಾಳಿಗಳ ಮಾತಿಗೆ ಕೇರ್ ಮಾಡದ ಟ್ರಂಪ್ ಮಾತ್ರ ತಮ್ಮ ಮನಸ್ಸಿಗೆ ಬಂದ ಆದೇಶಗಳನ್ನು ಹೊರಡಿಸುತ್ತಲೇ ಇದ್ದಾರೆ.

ಇಷ್ಟೆಲ್ಲಾ ಕಿರಿಕ್ ನಡುವೆ ಡೊನಾಲ್ಡ್ ಟ್ರಂಪ್ ಅವರು ಬಿಟ್ಟಿರುವ ಟ್ಯಾಕ್ಸ್ ಬಾಣಕ್ಕೆ ಭಾರತ ವಿರೋಧಿ ಕೆನಡಾ ನಲುಗಿ ಹೋಗಿದೆ. ಸಹಜವಾಗಿ ಅಮೆರಿಕ ಇಡೀ ಜಗತ್ತಿನ ವ್ಯವಹಾರದ ಮೇಲೆ ಪ್ರಭಾವ ಹೊಂದಿರುತ್ತದೆ. ಹೀಗಾಗಿ ಡೊನಾಲ್ಡ್ ಟ್ರಂಪ್ ಅವರ ಅಧಿಕಾರ ಸ್ವೀಕಾರದ ನಂತರ ಶತ್ರುಗಳಿಗೆ ನಡುಕ ಶುರುವಾಗಿತ್ತು. ಅದರಲ್ಲೂ ಮೊದಲಿನಿಂದ ಕೂಡ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೋ ಮತ್ತು ಡೊನಾಲ್ಡ್ ಟ್ರಂಪ್ ಅವರ ನಡುವೆ ಕಿರಿಕಿರಿ ಕಿರಿಕ್ ನಡೆಯುತ್ತಲೇ ಇತ್ತು. ಹೀಗಿದ್ದಾಗ ಟ್ರಂಪ್ ಚುನಾವಣೆ ಗೆದ್ದಿದ್ದೇ ತಡ ಕೆನಡಾಗೆ ಮೊದಲ ಶಾಕ್ ಕೊಟ್ಟರು.

ಇಷ್ಟೆಲ್ಲದರ ಮಧ್ಯೆ ಕೆಲ ದಿನಗಳ ಹಿಂದಷ್ಟೇ ಅಧಿಕಾರ ವಹಿಸಿಕೊಂಡಿರುವ ಟ್ರಂಪ್ ಕೆನಡಾ, ಮೆಕ್ಸಿಕೋ, ಚೀನಾಗೆ ಒಟ್ಟೊಟ್ಟಿಗೆ ಇದೀಗ ಆಘಾತ ನೀಡಲು ಸಜ್ಜಾಗಿದ್ದಾರೆ. ಹೌದು, ಡೊನಾಲ್ಡ್ ಟ್ರಂಪ್ ಇದೀಗ ಅಮೆರಿಕದ ಜನರ ಮೇಲೆ ತೆರಿಗೆ ಭಾರ ಹಾಕುವ ಬದಲು ಅಮೆರಿಕದ ಜೊತೆಗೆ ವ್ಯವಹಾರ ನಡೆಸುವ ದೇಶಗಳ ಮೇಲೆ ತೆರಿಗೆ ಹಾಕಲು ಮುಂದಾಗಿದ್ದಾರೆ. ಇದೇ ಕಾರಣಕ್ಕೆ ಕೆನಡಾ ಮತ್ತು ಮೆಕ್ಸಿಕೋಗೆ ಶೇಕಡಾ 25 ರಷ್ಟು ತೆರಿಗೆ ವಿಧಿಸಲು ನಿರ್ಧಾರ ಮಾಡಿದ್ದಾರೆ.

ಅಂದರೆ ಕೆನಡಾ ಮತ್ತು ಮೆಕ್ಸಿಕೋ ದೇಶಗಳಿಂದ ಅಮೆರಿಕಗೆ ಬರುವ ವಸ್ತುಗಳ ಮೇಲೆ ಶೇಕಡಾ 25 ರಷ್ಟು ತೆರಿಗೆ ಹಾಕಲಾಗುತ್ತದೆ. ಹಾಗೇ ಚೀನಾ ಮೂಲಕ ಬರುವ ವಸ್ತುಗಳ ಮೇಲೆ ಶೇಕಡಾ 10 ರಷ್ಟು ತೆರಿಗೆ ಬೀಳಲಿದೆಯಂತೆ. ಇನ್ನೇನು ಕೆಲವೇ ಗಂಟೆಗಳಲ್ಲಿ ಡೊನಾಲ್ಡ್ ಟ್ರಂಪ್ ಅವರು ಹೊಸ ತೆರಿಗೆ ನಿಯಮ ಘೋಷಣೆ ಮಾಡಿ, ಕೆನಡಾ, ಮೆಕ್ಸಿಕೋ ಚೀನಾ ವಿರುದ್ಧ ಹೆಚ್ಚಿನ ಸುಂಕ ವಿಧಿಸುವ ಸಾಧ್ಯತೆ ಇದೆ.

ಹೀಗಿದ್ದಾಗ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೋ ಕೂಡ ಅಮೆರಿಕ ಮೊದಲು ಘೋಷಣೆಯನ್ನ ಮಾಡಲಿ, ಆ ಬಳಿಕ ನಾವು ಕೂಡ ನಮ್ಮ ನಿರ್ಧಾರ ತಿಳಿಸುತ್ತೇವೆ ಎಂಬ ಪ್ರತಿಕ್ರಿಯೆ ನೀಡಿದ್ದಾರೆ. ಮೆಕ್ಸಿಕೋ ಕೂಡ ಟ್ರಂಪ್ ಆಡಳಿತದ ಜೊತೆಗೆ ಚರ್ಚೆ ನಡೆಸುತ್ತಿದ್ದೇವೆ ಅಂತಾ ಮಾಹಿತಿಯನ್ನ ನೀಡಿದ್ದು, ಜಾಗತಿಕ ಮಟ್ಟದಲ್ಲಿ ಈ ವಿಚಾರ ದೊಡ್ಡ ಸದ್ದು ಮಾಡುತ್ತಿದೆ.

**ಅಮೆರಿಕದ ಅಕ್ಕಪಕ್ಕದ ದೇಶಗಳು ಶೇಕ್**



# ಬಜೆಟ್ ಮಂಡನೆ ಆರಂಭವಾಗುತ್ತಿದ್ದಂತೆಯೇ ಕಲಾಪದಿಂದ ಹೊರ ನಡೆದ ವಿಪಕ್ಷಗಳು

**ನವದೆಹಲಿ:** ಕೇಂದ್ರ ಸರ್ಕಾರವು ಜನ ವಿರೋಧಿ ಬಜೆಟ್ ಮಂಡನೆ ಮಾಡುತ್ತಿವೆ ಎಂದು ವಿರೋಧ ಪಕ್ಷಗಳು ಕಲಾಪದಿಂದ ಹೊರ ನಡೆದ ಘಟನೆ ಲೋಕಸಭೆಯಲ್ಲಿ ನಡೆಯಿತು. ಬೆಳಗ್ಗೆ 11 ಗಂಟೆಗೆ ಸರಿಯಾಗಿ ಹಣಕಾಸು ಸಚಿವೆ ನಿರ್ಮಲಾ ಸೀತರಾಮನ್ ಅವರು ಬಜೆಟ್ ಮಂಡಿಸಲು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಸೂಚನೆ ನೀಡಿದರು.

ಈ ವೇಳೆ ತಮ ಆಸನದಿಂದ ಎದ್ದು ನಿಂತು ಬಜೆಟ್ ಪುಸ್ತಕ ಓದಲು ನಿರ್ಮಲಾ ಸೀತರಾಮನ್ ಮುಂದಾಗುತ್ತಿದ್ದಂತೆ ಪ್ರತಿ ಪಕ್ಷಗಳ ಸದಸ್ಯರು ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ಸದನದಿಂದ ಹೊರನಡೆದರು.

ಇದು ಸಂಪೂರ್ಣವಾಗಿ ಜನ ವಿರೋಧಿ ಬಜೆಟ್. ಈ ಬಜೆಟ್‌ನಿಂದ ಯಾವುದೇ ಜನರಿಗೂ ಅನುಕೂಲವಾಗಿಲ್ಲ. ಕೇವಲ ಕಾರ್ಪೋರೇಟರ್‌ಗಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಬಜೆಟ್ ಮಂಡನೆ ಮಾಡಲಾಗುತ್ತಿದೆ ಎಂದು ಗದ್ದಲ ಎಬ್ಬಿಸಿದರು.




ಈ ವೇಳೆ ಸ್ಪೀಕರ್ ಓಂ ಬಿರ್ಲಾ ಅವರು, ಇದು ನಿಮಗೆ ಶೋಭೆ ತರುವುದಿಲ್ಲ. ಹಣಕಾಸು ಸಚಿವರು ಬಜೆಟ್ ಮಂಡನೆ ಮಾಡುವುದನ್ನು ದೇಶದ ಜನತೆ ಎದುರು ನೋಡುತ್ತಿದ್ದಾರೆ. ನೀವು ನಿಮ ಘನತೆಗೆ ತಕ್ಕಂತೆ ನಡೆದುಕೊಳ್ಳಿ ಎಂದು ಸಿಟ್ಟಿನಿಂದಲೇ ಹೇಳಿದರು. ಗದ್ದಲದ ನಡುವೆಯೇ ಸೀತಾರಾಮನ್ ಬಜೆಟ್ ಮಂಡಿಸಲು ಮುಂದಾಗುತ್ತಿದ್ದಂತೆ ಪ್ರತಿಪಕ್ಷಗಳು ಸದನದಿಂದ ಹೊರನಡೆದರು.

# ಫಿಲಿಡೆಲ್ಫಿಯಾದಲ್ಲಿ ಮೆಡಿಕಲ್ ಜೆಟ್ ಪತನ ಆರು ಮಂದಿ ಸಾವು: ಹಲವು ಮನೆಗಳಿಗೆ ಬೆಂಕಿ

**ಫಿಲಿಡೆಲ್ಫಿಯಾ:** ಅಮೆರಿಕದಲ್ಲಿ ಮತ್ತೊಂದು ವಿಮಾನ ಅಪಘಾತ ಸಂಭವಿಸಿದೆ. ಫಿಲಡೆಲ್ಫಿಯಾದಲ್ಲಿ ಮೆಡಿಕಲ್ ಜೆಟ್ ಪತನಗೊಂಡ ಹಿನ್ನೆಲೆಯಲ್ಲಿ ಅದರಲ್ಲಿದ್ದ ಆರು ಮಂದಿ ಸಾವನ್ನಪ್ಪಿದ್ದಾರೆ.



ಜೆಟ್ಸ್ ಕಂಪನಿಗೆ ನೋಂದಾಯಿಸಲಾದ ವಿಮಾನವು ಮಿಸೌರಿಯ ಸ್ಪ್ರಿಂಗ್‌ಫೀಲ್ಡ್‌ಗೆ ಹೋಗುವ ಮಾರ್ಗದಲ್ಲಿ ಸಂಜೆ 6:06 ಕ್ಕೆ ಟೇಕ್ ಆಫ್ ಆಗಿತ್ತು . ಅಲ್ಲಿಂದ 1,600 ಅಡಿ ಎತ್ತರವನ್ನು ತಲುಪಿದ ನಂತರ 30 ಸೆಕಂಡುಗಳಲ್ಲಿ ರಾಡಾರ್‌ನಿಂದ ಬೇಗನೆ ಕಣ್ಮರೆಯಾಯಿತು. ವಿಮಾನ ಪತನಗೊಂಡ ಪರಿಣಾಮ ಭಾರೀ ಬೆಂಕಿ ಹೊತ್ತಿಕೊಂಡಿದೆ. ಈ ಪರಿಣಾಮ ಆ ಪ್ರದೇಶದಲ್ಲಿನ ಮನೆಗಳು ಮತ್ತು ಕಾರುಗಳು ಸುಟ್ಟು ಭಸ್ಮವಾಗಿವೆ ಎಂದು ತಿಳಿದು ಬಂದಿದೆ. ನಾಲ್ವರು ಸಿಬ್ಬಂದಿ, ಒಬ್ಬ ಮಕ್ಕಳ ವೈದ್ಯಕೀಯ ರೋಗಿ ಮತ್ತು ರೋಗಿಯ ಬೆಂಗಾವಲು ಸಿಬ್ಬಂದಿಯೊಂದಿಗೆ ಅಪಘಾತಕ್ಕೀಡಾಗಿದೆ.

ರೋನ್‌ಹರ್ಸ್ಟ್ ನೆರೆಹೊರೆಯಲ್ಲಿರುವ ರೂಸ್‌ವೆಲ್ಟ್ ಮಾಲ್ ಬಳಿಯ ಅಪಘಾತ ಸಂಭವಿಸಿದ ನಂತರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಂಕಿ ಕಾಣಿಸಿಕೊಂಡಿತು. ತುರ್ತು ಸಿಬ್ಬಂದಿ ಬೆಂಕಿಯನ್ನು ನಿಯಂತ್ರಿಸಲು ಕೂಡಲೇ ಕಾರ್ಯ ಪ್ರವೃತ್ತರಾದರು. ಜನರು ಜಮಾಯಿಸುತ್ತಿದ್ದಂತೆ ಸಂಚಾರ ನಿರ್ಬಂಧಿಸಲಾಯಿತು. ಜೆಟ್ ನೆಲಕ್ಕೆ ಅಪ್ಪಳಿಸಿದಾಗ ಸಣ್ಣ ಭೂಕಂಪದಂತೆ ಭಾಸವಾದಂತೆ ಅನ್ನಿಸಿತು ಎಂದು ಪ್ರತ್ಯಕ್ಷ ದರ್ಶಿಗಳು ತಿಳಿಸಿದ್ದಾರೆ.

ವಿಮಾನದ ಜೆಟ್ ರೆಸ್ಕ್ಯೂ, ಮೆಕ್ಸಿಕೋ ಮೂಲದ ಕಂಪನಿಯಾಗಿದ್ದು, ಜಾಗತಿಕ ಏರ್ ಆಂಬ್ಯುಲೆನ್ಸ್ ಸೇವೆಗಳಲ್ಲಿ ಪರಿಣತಿ ಹೊಂದಿದೆ.

2019 ರಲ್ಲಿ ಡೊಮಿನಿಕನ್ ಗಣರಾಜ್ಯದಲ್ಲಿ ಗುಂಡು ಹಾರಿಸಿದ ನಂತರ ಬೇಸ್‌ಬಾಲ್ ಹಾಲ್ ಆಫ್ ಫೇಮ್ ಡೇವಿಡ್ ಒರ್ಟಿಜ್ ಅವರನ್ನು ಈ ಕಂಪನಿಯು ಬೋಸ್ಟನ್‌ಗೆ ಸಾಗಿಸಿತ್ತು ಮತ್ತು ತೀವ್ರವಾಗಿ ಅಸ್ವಸ್ಥರಾದ ಅಔಗಿಖಆ-19 ರೋಗಿಗಳನ್ನು ಏರ್‌ಲಿಫ್ಟ್ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿತ್ತು.

# ಛತ್ತೀಸ್‌ಗಢದಲ್ಲಿ ಹಕ್ಕಿ ಜ್ವರ ಹೆಚ್ಚಳ : 17,000 ಕೋಳಿಗಳು, ಕ್ವಿಲ್‌ಗಳ ನಾಶ

**ರಾಯಗಢ:** ಛತ್ತೀಸ್‌ಗಢದ ರಾಯಗಢ ಜಿಲ್ಲೆಯ ಸರ್ಕಾರಿ ಕೋಳಿ ಸಾಕಣೆ ಕೇಂದ್ರದಲ್ಲಿ ಹಕ್ಕಿ ಜ್ವರ ಪತ್ತೆಯಾದ ನಂತರ ಕನಿಷ್ಠ 17,000 ಕೋಳಿಗಳು ಮತ್ತು ಕ್ವಿಲ್‌ಗಳನ್ನು ಕೊಲ್ಲಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೀಡಿತ ಪ್ರದೇಶದ 10 ಕಿ.ಮೀ ವ್ಯಾಪ್ತಿಯಲ್ಲಿ ಅಧಿಕಾರಿಗಳು ಜಾಗರೂಕತೆಯನ್ನು ಹೆಚ್ಚಿಸಿದ್ದಾರೆ ಎಂದು ಅವರು ಹೇಳಿದರು. ಇತ್ತೀಚೆಗೆ ಇಲ್ಲಿನ ಚಕ್ರಧರ್ ನಗರದಲ್ಲಿರುವ ಕೋಳಿ ಸಾಕಣೆ ಕೇಂದ್ರದಲ್ಲಿ ಕೆಲವು ಕೋಳಿಗಳು ಸತ್ತಿರುವುದು ಕಂಡುಬಂದ ನಂತರ, ಮಾದರಿಗಳನ್ನು ಪರೀಕ್ಷೆಗಾಗಿ ಭೋಪಾಲ್ ಮೂಲದ ರಾಷ್ಟ್ರೀಯ ಹೈ-ಸೆಕ್ಯುರಿಟಿ ಪ್ರಾಣಿ ರೋಗಗಳ ಸಂಸ್ಥೆಗೆ ಕಳುಹಿಸಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಶುಕ್ರವಾರ ರಾತ್ರಿ, ಪರೀಕ್ಷೆಗಳು 51 ವೈರಸ್ ಅನ್ನು ದೃಢಪಡಿಸಿದವು, ನಂತರ ರಾಯಗಢ ಕಲೆಕ್ಟರ್ ಕಾರ್ತಿಕೇಯ ಗೋಯೆಲ್ ಅವರು ಪರಿಸ್ಥಿತಿಯನ್ನು ನಿಭಾಯಿಸಲು ಕಾರ್ಯತಂತ್ರವನ್ನು ರೂಪಿಸಲು ಹಿರಿಯ ಅಧಿಕಾರಿಗಳೊಂದಿಗೆ ತುರ್ತು ಸಭೆ ನಡೆಸಿದರು ಎಂದು ಅದು ಹೇಳಿದೆ. ಪ್ರಮಾಣಿತ ಕಾರ್ಯವಿಧಾನದ ಪ್ರಕಾರ, ಪುರಸಭೆ ಮತ್ತು ಪಶುವೈದ್ಯಕೀಯ ಮತ್ತು ಆರೋಗ್ಯ ಇಲಾಖೆಗಳ ಸಿಬ್ಬಂದಿ ರಾತ್ರಿಯಿಡೀ ಜಂಟಿ ಕಾರ್ಯಾಚರಣೆ ನಡೆಸಿ, 5,000 ಕೋಳಿಗಳು ಮತ್ತು 12,000 ಕ್ವಿಲ್‌ಗಳನ್ನು ಕೊಂದು, 17,000 ಮೊಟ್ಟೆಗಳು ಮತ್ತು ಕೋಳಿ ಆಹಾರವನ್ನು ಜಮೀನಿನಲ್ಲಿ ನಾಶಪಡಿಸಿದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸೂರ್ಯೋದಯಕ್ಕೂ ಮುನ್ನ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಮತ್ತು ಸೋಂಕು ಆ ಪ್ರದೇಶದ ಹೊರಗೆ ಹರಡದಂತೆ ನೋಡಿಕೊಳ್ಳಲು ಸಂಬಂಧಪಟ್ಟ ಇಲಾಖೆಗಳನ್ನು ಸಕ್ರಿಯಗೊಳಿಸಲಾಗಿದೆ ಎಂದು ಅವರು ಹೇಳಿದರು. ಪೀಡಿತ ಆವರಣವನ್ನು ಸ್ವಚ್ಛಗೊಳಿಸಲಾಗಿದೆ ಎಂದು ಅವರು ಹೇಳಿದರು. ಪೀಡಿತ ಕೋಳಿ ಸಾಕಣೆ ಕೇಂದ್ರವನ್ನು ಮುಚ್ಚಲಾಯಿತು, ಮತ್ತು ಜಮೀನಿನ 1 ಕಿಮೀ ವ್ಯಾಪ್ತಿಯನ್ನು ಸೋಂಕಿತ ವಲಯ ಮತ್ತು 10 ಕಿಮೀ ವ್ಯಾಪ್ತಿಯ ಕಣ್ಗಾವಲು ವಲಯ ಎಂದು ಘೋಷಿಸಲಾಗಿದೆ ಎಂದು ಅಧಿಕಾರಿ ಹೇಳಿದರು. ಕಣ್ಗಾವಲು ವಲಯದಲ್ಲಿ ಕೂಡ ಕೋಳಿ ಮತ್ತು ಮೊಟ್ಟೆ ಅಂಗಡಿಗಳನ್ನು ಮುಚ್ಚಲಾಗುವುದು ಎಂದು ಹೇಳಿಕೆ ತಿಳಿಸಿದೆ. ಪಕ್ಷಿ ಜ್ವರ ಹರಡುವಿಕೆಯಿಂದ ಯಾವುದೇ ಮಾನವ ಜನಸಂಖ್ಯೆಗೆ ತೊಂದರೆಯಾಗಿಲ್ಲ ಎಂದು ಅಧಿಕಾರಿಗಳು ದೃಢಪಡಿಸಿದ್ದಾರೆ.

ರಾಯಗಢ ಆರೋಗ್ಯ ಇಲಾಖೆಯ ಡಾ. ಭಾನು ಪಟೇಲ್ ಅವರು ಹಕ್ಕಿ ಜ್ವರ ವೈರಸ್ ಮುಖ್ಯವಾಗಿ ಪಕ್ಷಿಗಳು ಮತ್ತು ಪ್ರಾಣಿಗಳಲ್ಲಿ ಹರಡುತ್ತದೆ ಮತ್ತು ಭಾರತದಲ್ಲಿ ಮನುಷ್ಯರಿಗೆ ಸೋಂಕು ಹರಡಿದ ಯಾವುದೇ ಪ್ರಕರಣಗಳು ಕಂಡುಬಂದಿಲ್ಲ ಎಂದು ಹೇಳಿದರು.


**ಶಿಷ್ಟಾಚಾರದ ಪ್ರಕಾರ, ಸೋಂಕಿತ ವಲಯ ದೊಳಗೆ ಕೋಳಿ ಪಕ್ಷಿಗಳು, ಮೊಟ್ಟೆಗಳು ಮತ್ತು ಕೋಳಿ ಆಹಾರವನ್ನು ನಾಶಪಡಿಸಲಾಗುತ್ತದೆ ಮತ್ತು ಅವುಗಳ ಚಲನೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗುತ್ತದೆ. ಇದಕ್ಕಾಗಿ, ಪಶುಸಂಗೋಪನಾ ಇಲಾಖೆಯು ಕೋಳಿ ಪಕ್ಷಿಗಳ ಮಾಲೀಕರಿಗೆ ಪರಿಹಾರವನ್ನು ನೀಡುತ್ತದೆ ಎಂದು ತಿಳಿಸಿದರು.**



# 2025-26ರ ಬಜೆಟ್: ಷೇರು ಮಾರುಕಟ್ಟೆ ಚೇತರಿಕೆ

**ನವದೆಹಲಿ:** ದೇಶದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2025-26 ರ ಬಜೆಟ್ ಮಂಡಿಸಿದ್ದಾರೆ. ಎಲ್ಲರ ಕಣ್ಣು ಷೇರು ಮಾರುಕಟ್ಟೆಯತ್ತ ನೆಟ್ಟಿದೆ. ಬಜೆಟ್‌ಗೂ ಮುನ್ನ ಷೇರುಪೇಟೆ ವೇಗ ಪಡೆದುಕೊಂಡಿದೆ.

ಜನವರಿ 31 ರಂದು ನಿರ್ಮಲಾ ಸೀತಾರಾಮನ್ ಆರ್ಥಿಕ ಸಮೀಕ್ಷೆಯನ್ನು ಮಂಡಿಸಿದ್ದಾರೆ . ಇದು ಷೇರು ಮಾರುಕಟ್ಟೆಯ ಮೇಲೆ ಸಕಾರಾತ್ಮಕ ಪರಿಣಾಮ ಬೀರಿದೆ. ಆರ್ಥಿಕ ಸಮೀಕ್ಷೆಯ ನಂತರ ಷೇರುಪೇಟೆಯಲ್ಲಿ ಏರಿಕೆ ಕಂಡು ಬಂದಿದೆ. ಈಗ ಬಜೆಟ್ ನಂತರವೂ ಜನ ಏರಿಕೆಯ ನಿರೀಕ್ಷೆಯಲ್ಲಿದ್ದಾರೆ. ಬಜೆಟ್‌ಗೂ ಮುನ್ನ ಷೇರುಪೇಟೆಯಲ್ಲಿ ಭಾರಿ ಏರಿಕೆ ಕಂಡುಬಂದಿದೆ. ಸೆನ್ಸೆಕ್ಸ್ 253ಕ್ಕೂ ಹೆಚ್ಚು ಅಂಕ ಗಳಿಸಿದೆ. ಮೋದಿ ಸರ್ಕಾರದ ಬಜೆಟ್‌ನಿಂದ ಷೇರುಪೇಟೆ ಮತ್ತೆ ವೇಗ ಪಡೆಯಲಿದೆ ಎಂದು ನಿರೀಕ್ಷಿಸಲಾಗಿದೆ. ಬಜೆಟ್ ಮೊದಲು,



ಆಲ್ಸಿಡ್ ಇನ್ವೆಸ್ಟ್‌ಮೆಂಟ್ಸ್ ಷೇರುಗಳು 7.5 ಸಾವಿರಕ್ಕಿಂತ ಹೆಚ್ಚು ಏರಿದೆ. ಬೆಳಗ್ಗೆ 9:54ಕ್ಕೆ ಈ ಷೇರು 1 ಲಕ್ಷದ 61 ಸಾವಿರ ರೂ.ಗೂ ಅಧಿಕ ವಹಿವಾಟು ನಡೆಸುತ್ತಿದೆ.

ಕಳೆದ 10 ವರ್ಷಗಳಲ್ಲಿ ಒಟ್ಟು 14 ಬಜೆಟ್‌ಗಳನ್ನು ಮಂಡಿಸಲಾಗಿದೆ. ಬಜೆಟ್ ದಿನದಂದು 8 ಬಾರಿ ಷೇರು ಮಾರುಕಟ್ಟೆ ಕುಸಿದಿದೆ. ಆದರೆ ಷೇರು ಮಾರುಕಟ್ಟೆ 6 ಬಾರಿ ಏರಿಕೆ ಕಂಡಿದೆ.

2024-25 ರ ಆರ್ಥಿಕ ಸಮೀಕ್ಷೆಯ ಪ್ರಸ್ತುತಿಯ ನಂತರ, ಷೇರು ಮಾರುಕಟ್ಟೆಯಲ್ಲಿ ಮಧ್ಯಾಹ್ನದ ವಹಿವಾಟಿನಲ್ಲಿ ಏರಿಕೆ ಕಂಡು ಬಂದಿದೆ. ವಹಿವಾಟಿನ ಮುಕ್ತಾಯದ ವೇಳೆಗೆ, ಬಿಎಸ್‌ಇ ಸೆನ್ಸೆಕ್ಸ್ ಮತ್ತು ಎನ್‌ಎಸ್‌ಇ ನಿಫ್ಟಿ ಹಸಿರು ಬಣ್ಣದಲ್ಲಿ ವಹಿವಾಟು ನಡೆಸುತ್ತಿದ್ದವು. ಸೆನ್ಸೆಕ್ಸ್ 740.76 ಪಾಯಿಂಟ್ ಏರಿಕೆ ಕಂಡು 77,500.57ಕ್ಕೆ ತಲುಪಿದೆ. ನಿಫ್ಟಿ 258.90 0 20 ಅಂಕಗಳಿಗೆ ತಲುಪಿದೆ. ಶನಿವಾರದ ಆರಂಭಿಕ ಷೇರುಪೇಟೆಯ ವಹಿವಾಟಿನಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಏರಿಕೆಯಾಗಿರುವುದು ಕಂಬಂದಿವೆ.

ಬಿಎಸ್‌ಇ ಸೆನ್ಸೆಕ್ಸ್ ಆರಂಭಿಕ ವಹಿವಾಟಿನಲ್ಲಿ 136.44 ಅಂಕಗಳ ಜಿಗಿತ ಕಂಡು ಬಂದಿದ್ದು, 77,637.01ಕ್ಕೆ ತಲುಪಿತು. ಎನ್‌ಎಸ್‌ಇ ನಿಫ್ಟಿ 20.2 ಅಂಕಗಳ ಏರಿಕೆಯಾಗಿ 23,528.60ಕ್ಕೆ ತಲುಪಿದೆ. ಐಟಿಸಿ ಹೋಟೆಲ್ಸ್, ಇಂಡಸ್‌ಇಂಡ್ ಬ್ಯಾಂಕ್, ಮಹೀಂದ್ರಾ ಮಹೀಂದ್ರಾ, ಸನ್ ಫಾರ್ಮಾ, ಅಲ್ಟ್ರಾಟೆಕ್ ಸಿಮೆಂಟ್ ಮತ್ತು ಎನ್‌ಟಿಪಿಸಿ ಅತಿ ಹೆಚ್ಚು ಲಾಭ ಗಳಿಸಿದೆ. ಟೈಟಾನ್, ಕೋಟಕ್ ಮಹೀಂದ್ರಾ ಬ್ಯಾಂಕ್, ನೆಸ್ಲೆ, ಏಷ್ಯನ್ ಪೇಂಟ್ಸ್, ಎಚ್‌ಸಿಎಲ್ ಟೆಕ್ ಮತ್ತು ಐಸಿಐಸಿಐ ಬ್ಯಾಂಕ್ ಷೇರುಗಳ ಮೌಲ್ಯವು ಇಳಿಕೆ ಕಂಡು ಬಂದಿದೆ.

**ಬಜೆಟ್‌ಗೂ ಮುನ್ನ ಷೇರುಪೇಟೆ ಜಿಗಿತ**

# ಕಿನ್ನರ್ ಮುಖ್ಯಸ್ಥರಾಗಿ ಮಮತಾ ಕುಲಕರ್ಣಿ ಪಟ್ಟಾಭಿಷೇಕ: ಭುಗಿಲೆದ್ದ ವಿವಾದ

**ಲಖನೌ:** ಕಿನ್ನರ ಅಖಾಡದ ಸ್ಥಾಪಕ ಸದಸ್ಯ ಎಂದು ಹೇಳಿಕೊಳ್ಳುವ ರಿಷಿ ಅಜಯ್ ದಾಸ್ ಅವರು ಕಿನ್ನರ ಅಖಾಡದ ಆಚಾರ್ಯ ಮಹಾಮಂಡಲೇಶ್ವರ ಡಾ. ಲಕ್ಷ್ಮೀ ನಾರಾಯಣ ತ್ರಿಪಾಠಿ ಅವರನ್ನು ಉಚ್ಚಾಟಿಸಿದ್ದಾರೆ.

ಬಾಲಿವುಡ್ ಮಾಜಿ ನಟಿ ಮಮತಾ ಕುಲಕರ್ಣಿ ಅವರನ್ನು ಕಿನ್ನರ್ ಅಖಾಡದ ಮಹಾಮಂಡಲೇಶ್ವರ ಎಂದು ಪಟ್ಟಾಭಿಷೇಕ ಮಾಡಿರುವುದು ವಿವಾದಕ್ಕೆ ಕಾರಣವಾಗಿದೆ. ಇದಾದ ಬೆನ್ನಲ್ಲೇ ವಾಗ್ದಾಳಿ ನಡೆಸಿರುವ ತ್ರಿಪಾಠಿ, ಅಜಯ್ ದಾಸ್ ಅಖಾಡದ ಸದಸ್ಯತ್ವ ಕೂಡಾ ಪಡೆದಿಲ್ಲ ಎಂದು ಹೇಳಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಇಂದು ನಿನ್ನೆಯ ಪತ್ರವೊಂದನ್ನು ಪೋಸ್ಟ್ ಮಾಡಿರುವ ಅಜಯ್ ದಾಸ್, ನಟಿಯನ್ನು ಕಿನ್ನರ್ ಅಖಾಡದ ಮಹಾಮಂಡಳೇಶ್ವರ ಆಗಿ ಮಾಡಿರುವುದರಿಂದ ತ್ರಿಪಾಠಿ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಕಿನ್ನರ ಅಖಾಡದ ಮಹತ್ವವನ್ನು ಎತ್ತಿಹಿಡಿಯುವ ಯಾವುದೇ ಕೆಲಸವನ್ನು ತ್ರಿಪಾಠಿ ಮಾಡಲಿಲ್ಲ, ಬದಲಿಗೆ ದೇಶ ದ್ರೋಹ ಆರೋಪದ ಮೇರೆಗೆ ದೇಶ ತೊರೆದಿದ್ದ ಬಾಲಿವುಡ್ ನಟಿಯನ್ನು ಮಹಾಮಂಡಲೇಶ್ವರಿಯನ್ನಾಗಿ ಮಾಡಲಾಗಿದೆ ಎಂದು ತ್ರಿಪಾಠಿ ವಿರುದ್ಧ ರಿಷಿ ಅಜಯ್ ದಾಸ್ ವಾಗ್ದಾಳಿ ನಡೆಸಿದ್ದಾರೆ. ಈ ಹೇಳಿಕೆ ಕುರಿತು ಪ್ರತಿಕ್ರಿಯಿಸಿರುವ ತ್ರಿಪಾಠಿ, ಅಜಯ್ ದಾಸ್ ಅಖಾಡದ ಸದಸ್ಯರೂ ಕೂಡಾ ಆಗಿಲ್ಲ. ಅಖಾಡ ನನ್ನಿಂದ ನೋಂದಣಿಯಾಗಿದೆ. ಕಿನ್ನರ ಅಖಾಡದ ಪರವಾಗಿ ಪತ್ರ ನೀಡಲು ದಾಸ್ ಅವರಿಗೆ ಯಾವುದೇ ಹಕ್ಕಿಲ್ಲ ಎಂದು ತ್ರಿಪಾಠಿ ಹೇಳಿದ್ದಾರೆ.

# 183 ಬಂಧಿತ ಪ್ಯಾಲೆಸ್ಟೀನಿಯನ್ನರ ಬಿಡುಗಡೆ

## ಮೊದಲ ಹಂತದಲ್ಲಿ 33 ಒತ್ತೆಯಾಳುಗಳು ಮತ್ತು ಸುಮಾರು 2,000 ಕೈದಿಗಳ ಬಿಡುಗಡೆಗೆ ಒಪ್ಪಿಗೆ ನೀಡಲಾಗಿತ್ತು

**ಟೆಲ್ ಅವೀವ್:** ಹಮಾಸ್ ಜೊತೆಗಿನ ಕದನ ವಿರಾಮ ಒಪ್ಪಂದದ ಭಾಗವಾಗಿ ಶನಿವಾರ ಬಂಧಿತರಾಗಿದ್ದ ಎಲ್ಲಾ 183 ಪ್ಯಾಲೆಸ್ಟೀನಿಯನ್ನರನ್ನು ಬಿಡುಗಡೆ ಮಾಡಲಾಗಿದೆ ಎಂದು ಇಸ್ರೇಲಿ ಜೈಲು ಪ್ರಾಧಿಕಾರ ತಿಳಿಸಿದೆ. ಅಕ್ಟೋಬರ್ 7, 2023 ರ ದಾಳಿಯ ನಂತರ ಬಂಧಿಸಲ್ಪಟ್ಟ ಮತ್ತು ವಿಚಾರಣೆಯಿಲ್ಲದೆ ಬಂಧಿತರಾಗಿದ್ದ 111 ಮಂದಿ ಸೇರಿದಂತೆ ಬಹುತೇಕ ಎಲ್ಲರನ್ನೂ ಗಾಜಾಗೆ ಬಿಡುಗಡೆ ಮಾಡಲಾಗಿದೆ. ಆಕ್ರಮಿತ ವೆಸ್ಟ್ ಬ್ಯಾಂಕ್‌ನಲ್ಲಿ ಎರಡು ಡಜನ್‌ಗಿಂತಲೂ ಹೆಚ್ಚು ಜನರು ಹರ್ಷೋದ್ಗಾರದಿಂದ ಮರಳಿದರು. ಇನ್ನೂ ಜೀವಾವಧಿ ಶಿಕ್ಷೆಗೊಳಗಾಗಿರುವ ಏಳು ಮಂದಿಯನ್ನು ಗಡೀಪಾರು ಮಾಡುವ ಮೊದಲು ಈಜಿಪ್ಟ್‌ಗೆ ಕಳುಹಿಸಲಾಯಿತು.

ಶನಿವಾರ ಬಿಡುಗಡೆಯಾದ ಪ್ರಮುಖರಲ್ಲಿ ಮಾನವೀಯ ನೆರವಿನ ಕಾರ್ಯಕರ್ತ ಮೊಹಮ್ಮದ್ ಎಲ್-ಹಲಾಬಿಯೂ ಸೇರಿದ್ದಾರೆ. ಅವರು 12 ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿದ್ದರು.

ಕ್ರಿಶ್ಚಿಯನ್ ನೆರವಿನ ಸಂಸ್ಥೆಯಾದ ವರ್ಲ್ಡ್ ವಿಷನ್‌ನ ಗಾಜಾ ಶಾಖೆಯ ಪ್ಯಾಲೇಸ್ಟಿನಿಯನ್ ಮ್ಯಾನೇಜರ್ ಆಗಿ ಕೆಲಸ ಮಾಡಿದ್ದರು. 2016 ರಲ್ಲಿ ಅವರನ್ನು ಬಂಧಿಸಲಾಗಿತ್ತು. ಹಮಾಸ್‌ಗೆ ಹತ್ತಾರು ಮಿಲಿಯನ್ ಡಾಲರ್‌ಗಳನ್ನು ಕಳುಹಿಸಿದ ಆರೋಪ ಅವರ ಮೇಲಿದೆ. ಆದರೆ, ಈ ಆರೋಪವನ್ನು ಎಲ್-ಹಲಾಬಿ, 47, ಮತ್ತು ವರ್ಲ್ಡ್ ವಿಷನ್ ನಿರಾಕರಿಸಿದ್ದರು. ಅವರು ಯಾವುದೇ ತಪ್ಪು ಮಾಡಿಲ್ಲ ಎಂಬುದು ಸ್ವತಂತ್ರ ವಿಚಾರಣೆಯಿಂದ ತಿಳಿದುಬಂದಿತ್ತು.

ಇದಕ್ಕೂ ಮುನ್ನಾ ಮೂವರು ಇಸ್ರೇಲಿ ಒತ್ತೆಯಾಳುಗಳನ್ನೂ ಹಮಾಸ್ ಬಿಡುಗಡೆ ಮಾಡಿತು.

ಇದು ಇಸ್ರೇಲ್ ಮತ್ತು ಹಮಾಸ್ ನಡುವಿನ ಕದನ ವಿರಾಮ ಒಪ್ಪಂದದ ಆರು ವಾರಗಳ ಆರಂಭಿಕ ಹಂತದಲ್ಲಿ ನಾಲ್ಕನೇ ಬಾರಿಗೆ ಒತ್ತೆಯಾಳುಗಳ ವಿನಿಮಯವಾಗಿದೆ. ಮೊದಲ ಹಂತದಲ್ಲಿ 33 ಒತ್ತೆಯಾಳುಗಳು ಮತ್ತು ಸುಮಾರು 2,000 ಕೈದಿಗಳ ಬಿಡುಗಡೆಗೆ ಒಪ್ಪಿಗೆ ನೀಡಲಾಗಿತ್ತು. ಇಸ್ರೇಲ್ ಮತ್ತು ಹಮಾಸ್ ಮುಂದಿನ ವಾರ ಕದನ ವಿರಾಮದ 2ನೇ ಹಂತದ ಮಾತುಕತೆಯನ್ನು ಪ್ರಾರಂಭಿಸಲು ಸಜ್ಜಾಗಿವೆ. ಇದರಲ್ಲಿ ಉಳಿದ ಒತ್ತೆಯಾಳುಗಳನ್ನು ಬಿಡುಗಡೆ ಮಾಡಲು ಮತ್ತು ಅನಿರ್ದಿಷ್ಟವಾಗಿ ಕದನ ವಿರಾಮವನ್ನು ವಿಸ್ತರಣೆಯಾಗುವ ಸಾಧ್ಯತೆಯಿದೆ.

200 ಪ್ಯಾಲೆಸ್ಟೀನಿಯನ್ ಬಂಧಿತರ ಬದಲಿಗೆ ಹಮಾಸ್ ನಿಂದ ನಾಲ್ವರು ಇಸ್ರೇಲಿ ಮಹಿಳಾ ಸೈನಿಕರ ಬಿಡುಗಡೆ. ಯುಎನ್ ತಜ್ಞರು ಮತ್ತು ಮಾನವ ಹಕ್ಕುಗಳ ಸಂಘಟನೆಗಳು ಸೇರಿದಂತೆ ಅನೇಕರು ಜನಾಂಗೀಯ ಹತ್ಯೆ ಎಂದು ಕರೆಯುವ ಯುದ್ಧದಲ್ಲಿ 18,000 ಕ್ಕೂ ಹೆಚ್ಚು ಮಕ್ಕಳು, ಸಾವಿರಕ್ಕೂ ಹೆಚ್ಚು ಆರೋಗ್ಯ ಕಾರ್ಯಕರ್ತರು 46,913 ಪ್ಯಾಲೆಸ್ಟೀನಿಯನ್ನರ ಹತ್ಯೆಯಾಗಿದೆ.



**ಕದನ ವಿರಾಮ ಒಪ್ಪಂದ**

- **ಕದನ ವಿರಾಮ ಒಪ್ಪಂದ: ಇಸ್ರೇಲ್ ನಿಂದ 183 ಬಂಧಿತ ಪ್ಯಾಲೆಸ್ಟೀನಿಯನ್ನರ ಬಿಡುಗಡೆ**
- **ಮೊದಲ ಹಂತದಲ್ಲಿ 33 ಒತ್ತೆಯಾಳುಗಳು ಮತ್ತು ಸುಮಾರು 2,000 ಕೈದಿಗಳ ಬಿಡುಗಡೆಗೆ ಒಪ್ಪಿಗೆ ನೀಡಲಾಗಿತ್ತು.**

## ಮಿನಿ ನ್ಯೂಸ್

### ಭದ್ರತಾ ಪಡೆ ಗುಂಡಿಗೆ 8 ನಕ್ಸಲರು ಬಲಿ

**ರಾಯ್ಪುರ:** ಭದ್ರತಾ ಪಡೆ ನಡೆಸಿದ ಮಿಂಚಿನ ಕಾರ್ಯಾಚರಣೆಯಲ್ಲಿ ಎಂಟು ನಕ್ಸಲರು ಗುಂಡಿಕ್ಕಿ ಹತ್ಯೆ ಮಾಡಿರುವ ಘಟನೆ ಛತ್ತೀಸ್‌ಗಢದ ಬಿಜಾಪುರದಲ್ಲಿ ಸಂಭವಿಸಿದೆ. ಬೆಳಗ್ಗೆ ಭದ್ರತಾ ಪಡೆಗಳೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಎಂಟು ನಕ್ಸಲರು ಸಾವನ್ನಪ್ಪಿರುವುದನ್ನು ಪೊಲೀಸರು ಖಚಿತಪಡಿಸಿದ್ದಾರೆ.

ಗಂಗಲೂರ್ ಪೊಲೀಸ್ ಠಾಣೆ ಪ್ರದೇಶದ ಅರಣ್ಯದಲ್ಲಿ ಬೆಳಿಗ್ಗೆ 8:30ರ ಸುಮಾರಿಗೆ ಭದ್ರತಾ ಸಿಬ್ಬಂದಿಯ ಜಂಟಿ ತಂಡ ನಕ್ಸಲ ವಿರೋಧಿ ಕಾರ್ಯಾಚರಣೆ ನಡೆಸುತ್ತಿದ್ದಾಗ ಗುಂಡಿನ ಚಕಮಕಿ ಪ್ರಾರಂಭವಾಗಿದೆ . ಈ ಪ್ರದೇಶದಲ್ಲಿ ಪಶ್ಚಿಮ ಬಸ್ತಾರ್ ವಿಭಾಗದ ಮಾವೋವಾದಿಗಳ ಉಪಸ್ಥಿತಿಯ ಬಗ್ಗೆ ಗುಪ್ತಚರ ಮಾಹಿತಿಯ ನಂತರ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಯಿತು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

### ಕುಂಭ ಮೇಳಕ್ಕೆ ಹೊಸ ಅಧಿಕಾರಿಗಳ ನೇಮಕ

**ಪ್ರಯಾಗ ರಾಜ್:** ಮಹಾಕುಂಭದಲ್ಲಿ ಕಾಲ್ತುಳಿತ ಮತ್ತು 30 ಜನರ ಸಾವಿನ ನಂತರ, ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ್ ಸರ್ಕಾರವು ಪ್ರತಿಪಕ್ಷಗಳ ಕೆಂಗಣ್ಣಿಗೆ ಗುರಿಯಾಗಿದೆ. ಸಾಮಾಜಿಕ ಜಾಲತಾಣಗಳಲ್ಲೂ ಯೋಗಿ ಸರ್ಕಾರದ ಮೇಲೆ ಪ್ರಶ್ನೆಗಳು ಎದ್ದಿವೆ. ಇದೀಗ ಯೋಗಿ ಸರ್ಕಾರ ಮತ್ತು ಆಡಳಿತವು ಮುಂಬರುವ ಶಾಹಿ ಸ್ನಾನ್-ಅಮೃತ್ ಸ್ನಾನದಲ್ಲಿ ಇಂತಹ ಘಟನೆಗಳು ಸಂಭವಿಸದಂತೆ ನೋಡಿಕೊಳ್ಳಲು ಸಂಪೂರ್ಣವಾಗಿ ಸಜ್ಜಾಗಿದೆ.

ರಾಜ್ಯ ಸರ್ಕಾರ ಈಗ ತನ್ನ ಸಂಪೂರ್ಣ ಶಕ್ತಿಯನ್ನು ಬಳಸಿಕೊಳ್ಳುತ್ತಿದೆ. ಮುಂಬರುವ ಬಸಂತ್ ಪಂಚಮಿಯಂದು ರಾಜ ಸ್ನಾನದ ಬಗ್ಗೆ ಯೋಗಿ ಸರ್ಕಾರ ಮಹತ್ವದ ನಿರ್ಧಾರವನ್ನು ತೆಗೆದುಕೊಂಡಿದೆ.

ಮಹಾಕುಂಭದಲ್ಲಿ ಬಸಂತ್ ಪಂಚಮಿಯ ದಿನದಂದು ನಡೆಯುವ ಅಮೃತ ಸ್ನಾನದ ದೃಷ್ಟಿಯಿಂದ, ಯೋಗಿ ಸರ್ಕಾರವು ಮಹಾಕುಂಭ ಪ್ರದೇಶದಲ್ಲಿ ಏಳು ಎಸ್ಪಿ ಮತ್ತು ಎಎಸ್ಪಿ ಮಟ್ಟದ ಅಧಿಕಾರಿಗಳನ್ನು ಹೆಚ್ಚುವರಿ ನಿಯೋಜನೆ ಮಾಡಿದೆ .ಈಗ ಯೋಗಿ ಸರ್ಕಾರವು ಎಳ್ಳು ಕಾಳಿನಷ್ಟು ನಿರ್ಲಕ್ಷ್ಯ-ಅಜಾಕೂರತೆ, ಯಾವುದೇ ಅಹಿತಕರ ಘಟನೆ ಬಯಸುವುದಿಲ್ಲ ಎಂಬ ಸಂದೇಶವು ಸ್ಪಷ್ಟವಾಗಿದೆ.

ಪ್ರಯಾಗ್ರಾಜ್ ಮಹಾಕುಂಭ ಪ್ರದೇಶದಲ್ಲಿ ಸರ್ಕಾರವು ದಕ್ಷ ಅಧಿಕಾರಿಗಳನ್ನು ಹೆಚ್ಚುವರಿ ನಿಯೋಜನೆ ಮಾಡಿದೆ.

### ಅಪಘಾತ: ಸಾವಿನ ಸಂಖ್ಯೆ 9ಕ್ಕೆ ಏರಿಕೆ

**ಉತ್ತರ ಪ್ರದೇಶ:** ವಾರಣಾಸಿ-ಗಾಜಿಪುರ ಹೆದ್ದಾರಿಯಲ್ಲಿ ಸಂಭವಿಸಿದ ಭೀಕರ ಅಪಘಾತದಲ್ಲಿ ಗಾಯಗೊಂಡ ಮತ್ತೊಬ್ಬ ಮಹಿಳೆ ಸಾವನ್ನಪ್ಪಿದ್ದಾರೆ. ಇದರೊಂದಿಗೆ ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ ಒಂಬತ್ತಕ್ಕೇರಿದೆ. ಆಸ್ಪತ್ರೆಯಲ್ಲಿ ದಾಖಲಾಗಿರುವ ಇನ್ನು ಕೆಲವರ ಸ್ಥಿತಿ ಚಿಂತಾಜನಕವಾಗಿದೆ ಎನ್ನಲಾಗಿದೆ. ಅಪಘಾತವು ಎಷ್ಟು ಭೀಕರವಾಗಿದೆಯೆಂದರೆ, ಛಿದ್ರಗೊಂಡ ದೇಹಗಳು ಮತ್ತು ಅಂಗಗಳು ರಸ್ತೆಯ ಮೇಲೆ ಬಿದ್ದು ರಸ್ತೆಯಲ್ಲಿ ರಕ್ತದ ಕಾಲುವೆ ಹರಿದಿದೆ. ಲಾರಿ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ. ಮಧ್ಯಾಹ್ನ ಮಹಾಕುಂಭದಿಂದ ಗೋರಖ್‌ಪುರಕ್ಕೆ ಹಿಂತಿರುಗುತ್ತಿದ್ದ ಪಿಕಪ್‌ನ ವಾಹನದ ಆಕ್ಸಲ್ ಕಟ್ಟಾಗಿದ್ದು, ಹಿಂದಿನಿಂದ ವೇಗವಾಗಿ ಬರುತ್ತಿದ್ದ ಟ್ರಕ್ ಅದಕ್ಕೆ ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಿಕಪ್ ವಾಹನದ ಮೇಲೆ ವೇಗವಾಗಿ ಬರುತ್ತಿದ್ದ ಟ್ರಕ್ ಡಿಕ್ಕಿ ಹೊಡೆದ ರಭಸಕ್ಕೆ 8 ಮಂದಿ ಸ್ಥಳದಲ್ಲಿ ಸಾವನ್ನಪ್ಪಿದ್ದಾರೆ, 12 ಜನರು ಗಾಯಗೊಂಡಿದ್ದಾರೆ. ಮೃತರಲ್ಲಿ ನಾಲ್ವರು ಮಹಿಳೆಯರು, ನಾಲ್ವರು ಪುರುಷರು ಹಾಗೂ ಒಂದು ಮಗು ಸೇರಿದ್ದಾರೆ. ಅವರ ಬಟ್ಟೆಯಿಂದ ಶವಗಳನ್ನು ಗುರುತಿಸಲಾಗಿದೆ. ಇವರೆಲ್ಲರೂ ಗೋರಖ್‌ಪುರದ ನಿವಾಸಿಗಳು ಎನ್ನಲಾಗಿದೆ.

### 27 ವರ್ಷದ ನೀಲಿ ಚಿತ್ರ ತಾರೆ ಸಾವು

**ಬ್ರೆಜಿಲ್ :** ಅದೆಷ್ಟು ವಿಚಿತ್ರ ರೀತಿಯಲ್ಲಿ ಸಾವು ಸಂಭವಿಸಬಹುದು ಎಂಬುದು ಊಹೆಗೂ ನಿಲುಕದ್ದು ಎಂಬುದನ್ನು ಈ ವಿಲಕ್ಷಣ ಘಟನೆ ಮತ್ತೊಮ್ಮೆ ಸಾಬೀತುಪಡಿಸಿದೆ. 27 ವರ್ಷದ ನೀಲಿ ಚಿತ್ರತಾರೆ, ಎಂದೇ ಖ್ಯಾತರಾಗಿರುವ ಆಯನಾ ಬಿಯಾಟ್ರಿಜ್ ಪೆರೇರಾ ಅಲ್ವೆಸ್ ಮೃತ ದುರ್ದೈವಿ. ಇಬ್ಬರು ಪುರುಷ ನೀಲಿ ಚಿತ್ರತಾರೆಯರೊಂದಿಗೆ ಚಿತ್ರೀಕರಣದಲ್ಲಿ ತೊಡಗಿದ್ದಾಗ ಬಾಲ್ಕನಿಯಿಂದ ಆಯತಪ್ಪಿ ಬಿದ್ದು ಈ ಘಟನೆ ಸಂಭವಿಸಿದೆ ಎಂದು ಹೇಳಲಾಗುತ್ತಿದೆ.

ಆದರೆ ಈ ಸಾವು ನಿಗೂಢ ರೀತಿಯಲ್ಲಿ ಸಂಭವಿಸಿರುವುದರಿಂದ ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಜ.23ರಂದು ಈ ಘಟನೆ ನಡೆದಿದ್ದು, ಚಿತ್ರೀಕರಣದ ವೇಳೆ ಆಕೆಯೊಂದಿಗೆ ನಟಿಸುತ್ತಿದ್ದ ಇನ್ನಿಬ್ಬರು ಪುರುಷ ನಟರ ಹೇಳಿಕೆಯನ್ನು ಪೊಲೀಸರು ದಾಖಲಿಸಿಕೊಂಡಿದ್ದಾರೆ. ಹೇಳಿಕೆ ದಾಖಲಿಸಿಕೊಳ್ಳುವಾಗ, ಇಬ್ಬರು ಪುರುಷ ನಟರು ಭಿನ್ನ ಹೇಳಿಕೆ ನೀಡಿರುವುದು ಅನುಮಾನಕ್ಕೆ ದಾರಿ ಮಾಡಿಕೊಟ್ಟಿದೆ.

### ಹರಿಯಾಣದಲ್ಲಿ ಕಾಲುವೆಗೆ ಉರುಳಿದ ಕ್ರೂಸರ್, ಹತ್ತು ಮಂದಿ ನಾಪತ್ತೆ


**ಹರಿಯಾಣ:** ದಟ್ಟ ಮಂಜಿನಿಂದಾಗಿ ಕ್ರೂಸರ್ ಕಾಲುವೆಗೆ ಉರುಳಿರುವ ಘಟನೆ ಹರ್ಯಾಣದ ಫತೇಹಾಬಾದ್‌ನಲ್ಲಿ ನಡೆದಿದೆ. ಕ್ರೂಸರ್‌ನಲ್ಲಿ 12 ಮಂದಿ ಪ್ರಯಾಣಿಸುತ್ತಿದ್ದರು. 10 ಮಂದಿ ನಾಪತ್ತೆಯಾಗಿದ್ದಾರೆ. 10 ವರ್ಷದ ಬಾಲಕನನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ.

55 ವರ್ಷ ವಯಸ್ಸಿನ ವ್ಯಕ್ತಿಯ ದೇಹ ಸಿಕ್ಕಿದೆ. ಪಂಜಾಬ್‌ನಲ್ಲಿ ಮದುವೆ ಸಮಾರಂಭವೊಂದರಲ್ಲಿ ಭಾಗವಹಿಸಿ ಪ್ರಯಾಣಿಕರು ಹಿಂತಿರುಗುತ್ತಿದ್ದರು. ರಾತ್ರಿ 10 ಗಂಟೆ ಸುಮಾರಿಗೆ ಸರ್ದಾರೆವಾಲಾ ಗ್ರಾಮದ ಬಳಿ ಸೇತುವೆ ದಾಟುತ್ತಿದ್ದಾಗ ದಟ್ಟ ಮಂಜು ಕವಿದಿದ್ದರಿಂದ ಚಾಲಕನ ನಿಯಂತ್ರಣ ತಪ್ಪಿದೆ. ಪರಿಣಾಮ ವಾಹನ ಸೇತುವೆಯಿಂದ ಆಯತಪ್ಪಿ ಕಾಲುವೆಗೆ ಬಿದ್ದಿದೆ. ಪಂಜಾಬ್‌ನಲ್ಲಿ ಮದುವೆ ಸಮಾರಂಭವೊಂದರಲ್ಲಿ ಭಾಗವಹಿಸಿ ಪ್ರಯಾಣಿಕರು ಹಿಂತಿರುಗುತ್ತಿದ್ದರು. ರಾತ್ರಿ 10 ಗಂಟೆ ಸುಮಾರಿಗೆ ಸರ್ದಾರೆವಾಲಾ ಗ್ರಾಮದ ಬಳಿ ಸೇತುವೆ ದಾಟುತ್ತಿದ್ದಾಗ ದಟ್ಟ ಮಂಜು ಕವಿದಿದ್ದರಿಂದ ಚಾಲಕನ ನಿಯಂತ್ರಣ ತಪ್ಪಿದೆ. ಪರಿಣಾಮ ವಾಹನ ಸೇತುವೆಯಿಂದ ಆಯತಪ್ಪಿ ಕಾಲುವೆಗೆ ಬಿದ್ದಿದೆ.

ವಾಹನದ ಚಾಲಕನನ್ನು ಜರ್ನೈಲ್ ಸಿಂಗ್ ಎಂದು ಗುರುತಿಸಲಾಗಿದ್ದು, ವಾಹನವು ನೀರಿನಲ್ಲಿ ಮುಳುಗುವ ಮುನ್ನವೇ ವಾಹನದಿಂದ ಜಿಗಿದಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆದರೆ, ಕಾಲುವೆಗೆ ಬಿದ್ದಾಗ ಇತರ 12 ಪ್ರಯಾಣಿಕರು ವಾಹನದೊಳಗೆ ಇದ್ದರು.

ರಕ್ಷಣಾ ತಂಡಗಳು 10 ವರ್ಷದ ಅರ್ಮಾನ್‌ನನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದು, 55 ವರ್ಷದ ಬಲ್ಬೀರ್ ಸಿಂಗ್ ಅವರ ದೇಹವನ್ನು ಕಾಲುವೆಯಿಂದ ಹೊರತೆಗೆಯಲಾಯಿತು. ಅಪಘಾತದ ಬಗ್ಗೆ ಮಾಹಿತಿ ಪಡೆದ ಸ್ಥಳೀಯರು, ಪೊಲೀಸರೊಂದಿಗೆ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯದಲ್ಲಿ ಸಹಕರಿಸಿದರು. ಮುಳುಗುಗಾರರು ಮತ್ತು ರಕ್ಷಣಾ ಸಿಬ್ಬಂದಿ ರಾತ್ರಿಯಿಡೀ ಶೋಧ ಮುಂದುವರೆಸಿದರು.

## ಕಾಶಿಗೆ ಬಂದ ರಾಜ್ ಬಿ ಶೆಟ್ಟಿ, ಆ್ಯಂಕರ್ ಅನುಶ್ರೀ



ಮಹಾ ಕುಂಭಮೇಳದಲ್ಲಿ ನಟ ರಾಜ್ ಬಿ ಶೆಟ್ಟಿ, ಅನುಶ್ರೀ ಭಾಗಿಯಾದ ಬಳಿಕ ಸದ್ಯ ಕಾಶಿಯಲ್ಲಿದ್ದಾರೆ. ಸ್ನೇಹಿತರ ಜೊತೆ ರಾಜ್ ಮತ್ತು ಅನುಶ್ರೀ ಕಾಲ ಕಳೆಯುತ್ತಿದ್ದಾರೆ. ಕಾಶಿಗೆ ಭೇಟಿ ನೀಡಿರುವ ಪೋಸ್ಟ್ ಸೋಶಿಯಲ್ ಮೀಡಿಯಾದಲ್ಲಿ ಸದ್ದು ಮಾಡುತ್ತಿದೆ. ಕುಂಭಮೇಳದಲ್ಲಿ ಅನುಶ್ರೀ, ರಾಜ್ ಬಿ ಶೆಟ್ಟಿ ಮತ್ತು ಸ್ನೇಹಿತರು ಪವಿತ್ರ ಸ್ನಾನ ಮಾಡಿ ದೇವರ ದರ್ಶನ ಪಡೆದ ಬಳಿಕ ಪ್ರಯಾಗ್‌ರಾಜ್‌ನಿಂದ ಕಾಶಿಗೆ ಆಗಮಿಸಿದ್ದಾರೆ. ಅಲ್ಲಿನ ಬೀದಿ ನಾಯಿ ಜೊತೆ ಸಮಯ ಕಳೆಯುತ್ತಾ ನಟ ಕ್ಯಾಮೆರಾಗೆ ಪೋಸ್ ನೀಡಿದ್ದಾರೆ. ಈ ಕುರಿತ ಸುಂದರ ಪೋಸ್ಟ್‌ವೊಂದನ್ನು ಹಂಚಿಕೊಂಡಿದ್ದಾರೆ. ಇನ್ನೂ ಅನುಶ್ರೀ ರಿಯಾಲಿಟಿ ಶೋ ನಿರೂಪಣೆಯಲ್ಲಿ ಬ್ಯುಸಿಯಿದ್ರೆ, ರಾಜ್ ಬಿ ಶೆಟ್ಟಿ ಕೈಯಲ್ಲಿ ಹಲವು ಸಿನಿಮಾಗಳಿವೆ. ಕನ್ನಡ, ಮಲಯಾಳಂ, ಹಿಂದಿ ಚಿತ್ರಗಳಲ್ಲಿ ರಾಜ್ ಬಿ ಶೆಟ್ಟಿ ತೊಡಗಿಸಿಕೊಂಡಿದ್ದಾರೆ. ಇನ್ನೂ ಕನ್ನಡದ ಟೋಬಿ, ಮಲಯಾಳಂ ‘ಟರ್ಬೊ’ ಚಿತ್ರದಲ್ಲಿನ ರಾಜ್ ಬಿ ಶೆಟ್ಟಿ ನಟನೆ ನೋಡಿ ಫ್ಯಾನ್ಸ್ ಮೆಚ್ಚಿಕೊಂಡಿದ್ದಾರೆ. ಅವರ ಮುಂಬರುವ ಸಿನಿಮಾಗಾಗಿ ಅಭಿಮಾನಿಗಳು ಎದುರು ನೋಡುತ್ತಿದ್ದಾರೆ.

## ರಿಮೇಕ್ ಮಾಡಿ ಕೈ ಸುಟ್ಟುಕೊಂಡ ನಿರ್ಮಾಪಕ

ಬಾಲಿವುಡ್‌ನಲ್ಲಿ ರಿಮೇಕ್ ಸಿನಿಮಾಗಳಿಗೆ ಬರವಿಲ್ಲ. ದಕ್ಷಿಣದ ಅನೇಕ ಸೂಪರ್ ಹಿಟ್ ಚಿತ್ರಗಳನ್ನು ಬಾಲಿವುಡ್ ಮಂದಿ ರಿಮೇಕ್ ಮಾಡಿದ್ದಾರೆ. ಈ ರೀತಿ ಮಾಡಿ ಕೈ ಸುಟ್ಟುಕೊಂಡವರೇ ಹೆಚ್ಚು. ಈಗ ಬಾಲಿವುಡ್‌ನಲ್ಲಿ ಮತ್ತೊಂದು ಬಿಗ್ ಬಜೆಟ್ ಚಿತ್ರ ಫ್ಲಾಪ್ ಆಗೋ ಸೂಚನೆ ಸಿಕ್ಕಿದೆ. ಅದು ಶಾಹಿದ್ ಕಪೂರ್ ನಟನೆಯ ‘ದೇವ’ ಚಿತ್ರ. ಈ ಸಿನಿಮಾ ವಿಶ್ವ ಬಾಕ್ಸ್ ಆಫೀಸ್‌ನಲ್ಲಿ ಮೊದಲ ದಿನ ಗಳಿಕೆ ಮಾಡಿದ್ದು ಕೇವಲ 5 ಕೋಟಿ ರೂಪಾಯಿ. ಶಾಹಿದ್ ಕಪೂರ್ ಅವರು ಬೇಡಿಕೆಯ ಹೀರೋ ಎನಿಸಿಕೊಂಡಿದ್ದರು, ಆದರೆ, ನಂತರ ಕೆಲವು ಫ್ಲಾಪ್ ಕೊಟ್ಟು ಅವರು ಕಷ್ಟಕ್ಕೆ ಸಿಲುಕಿದ್ದರು. ‘ಕಬೀರ್ ಸಿಂಗ್’ ಗೆಲುವಿನ ಬಳಿಕ ಅವರು ಮತ್ತೆ ಬಾಲಿವುಡ್‌ನಲ್ಲಿ ಮಾರುಕಟ್ಟೆ ಸೃಷ್ಟಿಸಿಕೊಂಡರು. ಈ ಕಾರಣಕ್ಕೆ ಹಲವು ನಿರ್ಮಾಪಕರು ಅವರ ಕಾಲ್‌ಶೀಟ್‌ಗಾಗಿ ಬೇಡಿಕೆ ಇಟ್ಟಿದ್ದರು.



ಅದೇ ರೀತಿ ‘ದೇವ’ ಚಿತ್ರವನ್ನು ಬಿಗ್ ಬಜೆಟ್‌ನಲ್ಲಿ ಮಾಡಲಾಯಿತು. ಆದರೆ, ಇದರಿಂದ ನಿರ್ಮಾಪಕರಿಗೆ ನಷ್ಟ ಉಂಟಾಗುವ ಸೂಚನೆ ಸಿಕ್ಕಿದೆ. ಜನವರಿ 31ರಂದು ರಿಲೀಸ್ ಆದ ‘ದೇವ’ ಸಿನಿಮಾದ ಬಜೆಟ್ 50 ಕೋಟಿ ರೂಪಾಯಿ. ಆದರೆ, ಸಿನಿಮಾ ಮೊದಲ ದಿನ ಗಳಿಸಿದ್ದು 5 ಕೋಟಿ ರೂಪಾಯಿ ಮಾತ್ರ. ಹೀಗೆ ಮುಂದುವರಿದರೆ ಸಿನಿಮಾ ನಷ್ಟ ಅನುಭವಿಸುವ ಸೂಚನೆ ಸಿಕ್ಕಿದೆ. ಇದು ಮಲಯಾಳಂನ ‘ಮುಂಬೈ ಪೊಲೀಸ್’ ಚಿತ್ರದ ರಿಮೇಕ್. ಬಾಲಿವುಡ್‌ನವರು ಮತ್ತೊಂದು ರಿಮೇಕ್ ಮಾಡಿ ಸೋಲು ಅನುಭವಿಸಿದರು ಎನ್ನುವ ಮಾತು ಕೇಳಿ ಬಂದಿದೆ. ಜೀ ಸ್ಟುಡಿಯೋ ಹಾಗೂ ರಾಯ್ ಕಪೂರ್ ಫಿಲ್ಮ್ಸ್ ನಿರ್ಮಾಣ ಸಂಸ್ಥೆ ಅಡಿಯಲ್ಲಿ ಸಿದ್ದಾರ್ಥ್ ರಾಯ್ ಕಪೂರ್ ಹಾಗೂ ಉಮೇಶ್ ಬನ್ಸಲ್ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.



## ವ್ಹೀಲ್‌ಚೇರ್‌ನಲ್ಲಿ ಬಂದ ರಶ್ಮಿಕಾ ಮಂದಣ್ಣಗೆ ವಿಕ್ಕಿ ಕೌಶಲ್ ಆರೈಕೆ

ಕೊಡಗಿನ ಬೆಡಗಿ ರಶ್ಮಿಕಾ ಮಂದಣ್ಣ ನಟನೆಯ ‘ಛಾವಾ’ ಸಿನಿಮಾ ರಿಲೀಸ್‌ಗೆ ಸಿದ್ಧವಾಗಿದೆ. ಇತ್ತೀಚೆಗೆ ಅವರು ಜಿಮ್‌ನಲ್ಲಿ ಕಾಲಿಗೆ ಏಟು ಮಾಡಿಕೊಂಡಿದ್ದು, ಅದನ್ನು ಲೆಕ್ಕಿಸದೇ ‘ಛಾವಾ’ ಚಿತ್ರದ ಪ್ರಚಾರಕ್ಕೆ ನಟಿ ಸಾಥ್ ನೀಡುತ್ತಿದ್ದಾರೆ. ಈ ವೇಳೆ, ಸಿನಿಮಾ ಸಮಾರಂಭಕ್ಕೆ ವ್ಹೀಲ್‌ಚೇರ್‌ನಲ್ಲಿ ಬಂದ ರಶ್ಮಿಕಾಗೆ ವಿಕ್ಕಿ ಕೌಶಲ್ ಆರೈಕೆ ಮಾಡಿದ್ದಾರೆ. ವಿಕ್ಕಿ ಕೌಶಲ್ ಹಾಗೂ ರಶ್ಮಿಕಾ ನಟನೆಯ ‘ಛಾವಾ’ ಸಿನಿಮಾದ ಪ್ರಚಾರ ಕೆಲಸ ಭರದಿಂದ ನಡೆಯುತ್ತಿದೆ. ಇನ್ನೂ ಮೊದಲ ಬಾರಿಗೆ ಐತಿಹಾಸಿಕ ಸಿನಿಮಾದಲ್ಲಿ ನಟಿಸಿರುವ ಹಿನ್ನೆಲೆ ನಟಿಯ ಕೆರಿಯರ್‌ನಲ್ಲಿ ಈ ಚಿತ್ರ ವಿಶೇಷವಾಗಿದೆ. ಹಾಗಾಗಿ ಕಾಲಿಗೆ ಪೆಟ್ಟು ಮಾಡಿಕೊಂಡಿದ್ದರೂ ಲೆಕ್ಕಿಸದೇ ಸಿನಿಮಾ ಪ್ರಮೋಷನ್‌ಗೆ ಆಗಮಿಸಿದ್ದಾರೆ. ರಶ್ಮಿಕಾ ಕುಳಿತಿದ್ದ ವ್ಹೀಲ್‌ಚೇರ್ ಅನ್ನು ವಿಕ್ಕಿ ಕೌಶಲ್ ತಳ್ಳಿಕೊಂಡು ಬಂದಿದ್ದಾರೆ. ಈ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ಭಾರೀ ವೈರಲ್ ಆಗಿದೆ. ವಿಕ್ಕಿ ನಡೆ ನೋಡಿ ಅನೇಕರು ಜೆಂಟಲ್ ಮ್ಯಾನ್ ಎಂದು ಹಾಡಿ ಹೊಗಳಿದ್ದಾರೆ. ಇನ್ನೂ ‘ಛಾವಾ’ ಸಿನಿಮಾದಲ್ಲಿ ಮರಾಠ ರಾಜ ಛತ್ರಪತಿ ಶಿವಾಜಿ ಮಹಾರಾಜರ ಹಿರಿಯ ಮಗ ಛತ್ರಪತಿ ಸಂಭಾಜಿ ಮಹಾರಾಜನ ಪಾತ್ರವನ್ನು ವಿಕ್ಕಿ ಕೌಶಲ್ ನಿಭಾಯಿಸಿದ್ದಾರೆ. ಸಂಭಾಜಿ ಮಹಾರಾಜರ ಶೌರ್ಯ ಅವರ ತ್ಯಾಗ ಮತ್ತು ಯುದ್ಧಗಳನ್ನು ಗೆಲ್ಲುವ ತಂತ್ರಗಳ ಬಗ್ಗೆ ಇದೆ. ಗಂಡ ಮತ್ತು ಹೆಂಡತಿಯ ನಡುವಿನ ಭಾವನಾತ್ಮಕ ಪ್ರೇಮಕಥೆಯನ್ನು ಸಹ ಒಳಗೊಂಡಿದೆ. ಮರಾಠ ಸಾಮ್ರಾಜ್ಯದಿಂದ ಸಂಭಾಜಿ ದೂರ ಇದ್ದಾಗ ಅವರ ಹೆಂಡತಿ ಎಲ್ಲವನ್ನೂ ಯಾವ ರೀತಿ ನಿರ್ವಹಿಸುತ್ತಿದ್ದರು ಎಂಬುದು ಕಥೆಯ ಹೈಲೈಟ್ ಆಗಿದೆ.

## ಕೊನೆಗೂ ಭಾವಿ ಪತಿಯನ್ನು ಪರಿಚಯಿಸಿದ ಚೈತ್ರಾ ವಾಸುದೇವನ್

‘ಬಿಗ್ ಬಾಸ್’ ಖ್ಯಾತಿಯ ಚೈತ್ರಾ ವಾಸುದೇವನ್ ಅವರು 2ನೇ ಮದುವೆಗೆ ಸಜ್ಜಾಗಿದ್ದಾರೆ. ಇದೀಗ ನಟಿ 2ನೇ ಮದುವೆಯಾಗುತ್ತಿರುವ ಹುಡುಗ ಯಾರೆಂಬುದು ರಿವೀಲ್ ಮಾಡಿದ್ದಾರೆ. ಇತ್ತೀಚೆಗೆ ಪ್ಯಾರೀಸ್‌ನಲ್ಲಿ ಭಾವಿ ಪತಿ ಜೊತೆ ನಟಿ ಫೋಟೋಶೂಟ್ ಮಾಡಿಸಿದ್ದರು. ಈ ವೇಳೆ, ತಾವು 2ನೇ ಮದುವೆ ಆಗುತ್ತಿರೋದಾಗಿ ಚೈತ್ರಾ, ಇನ್ಸ್ಟಾಗ್ರಾಂನಲ್ಲಿ ತಿಳಿಸಿದ್ದರು. ಆದರೆ ಹುಡುಗ ಯಾರು ಎಂಬುದನ್ನು ಅವರು ಸುಳಿವು ಬಿಟ್ಟು ಕೊಟ್ಟಿರಲಿಲ್ಲ. ಈಗ ಭಾವಿ ಪತಿ ಜೊತೆಗಿನ ಫೋಟೋ ಹಂಚಿಕೊಂಡಿದ್ದಾರೆ. ಜಗದೀಪ್ ಎಲ್ ಎಂಬುವರ ಜೊತೆ ಚೈತ್ರಾ ಮದುವೆಗೆ ಸಜ್ಜಾಗಿದ್ದಾರೆ. ಇಬ್ಬರೂ ಪಿಂಕ್ ಬಣ್ಣದ ಉಡುಗೆಯಲ್ಲಿ ಮಿಂಚಿದ್ದಾರೆ. ಇಬ್ಬರ ಕಣ್ ಕಣ್ಣ ಸಲಿಗೆಯ ಫೋಟೋ ನೋಡಿ ಹೊಸ ಜೋಡಿಗೆ ಅಭಿಮಾನಿಗಳು ಶುಭಕೋರಿದ್ದಾರೆ. ಇದೇ ಮಾರ್ಚ್‌ನಲ್ಲಿ ನಟಿ ದಾಂಪತ್ಯ ಜೀವನಕ್ಕೆ ಕಾಲಿಡಲಿದ್ದಾರೆ.



## ನಾಗಭೂಷಣ್ ಎದುರು ತೊಡೆತಟ್ಟಿದ ಗರುಡ ರಾಮ್

ಡಾಲಿ ಪಿಕ್ಚರ್ಸ್ ನಿರ್ಮಾಣದಡಿ ಮೂಡಿ ಬರುತ್ತಿರುವ ‘ವಿದ್ಯಾಪತಿ’ ಸಿನಿಮಾಗೀಗ ಬಹುಬೇಡಿಕೆಯ ಖಳನಾಯಕ ಗರುಡ ರಾಮ್ ಎಂಟ್ರಿ ಕೊಟ್ಟಿದ್ದಾರೆ. ಕೆಜಿಎಫ್, ಸಲಾರ್, ಬಘೀರ ಸೇರಿದಂತೆ ತೆಲುಗು ಹಾಗೂ ತಮಿಳು ಚಿತ್ರಗಳಲ್ಲಿ ಬ್ಯುಸಿಯಾಗಿರುವ ಖಡಕ್ ವಿಲನ್ ಗರುಡ ರಾಮ್ ಅವರು ನಾಗಭೂಷಣ್ ಎದುರು ತೊಡೆ ತಟ್ಟಿದ್ದಾರೆ. ರಾಮಚಂದ್ರ ರಾಜು ಹೆಸರಿಗಿಂತ ಗರುಡ ಎಂದೇ ಖ್ಯಾತಿಗಳಿಸಿರುವ ಅವರು ‘ವಿದ್ಯಾಪತಿ’ ಸಿನಿಮಾದಲ್ಲಿ ಖಳನಾಯಕನಾಗಿ ಅಬ್ಬರಿಸಲು ರೆಡಿಯಾಗಿದ್ದಾರೆ. ಗರುಡ ರಾಮ್ ಎಂಟ್ರಿಯ ಮೇಕಿಂಗ್ ವಿಡಿಯೋ ಮೂಲಕ ಚಿತ್ರತಂಡ ಅವರನ್ನು ಸ್ವಾಗತಿಸಿದ್ದು, ಸಿಕ್ಸ್ ಪ್ಯಾಕ್‌ನಲ್ಲಿ ರಾಮಚಂದ್ರ ರಾಜು ಕಾಣಿಸಿಕೊಂಡಿದ್ದಾರೆ. ಗರುಡ ರಾಮ್ ಹಾಗೂ ನಾಗಭೂಷಣ್ ಇವರಿಬ್ಬರ ಜುಗಲ್‌ಬಂಧಿ ಹೇಗಿರಲಿದೆ ಎಂಬ ನಿರೀಕ್ಷೆ ಹುಟ್ಟಿಸಿದೆ. ಇಕ್ಕಟ್ ಕಥೆ ಹೇಳಿದ್ದ ಇಶಾಂ ಮತ್ತು ಹಸೀಂ ಖಾನ್ ‘ವಿದ್ಯಾಪತಿ’ ಸಿನಿಮಾಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಜೊತೆಗೆ ಸಿನಿಮಾವನ್ನು ಇವರೆ ಬರೆದು, ಸಂಕಲನದ ಜವಾಬ್ದಾರಿಯನ್ನು ತಾವೇ ಹೊತ್ತುಕೊಂಡಿದ್ದಾರೆ. ಆಕ್ಷನ್ ಕಾಮಿಡಿ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ನಾಗಭೂಷಣ್‌ಗೆ ನಾಯಕಿಯಾಗಿ ಉಪಾಧ್ಯಕ್ಷ ಬ್ಯೂಟಿ ಮಲೈಕಾ ವಸೂಪಾಲ್ ಕಾಣಿಸಿಕೊಳ್ಳಲಿದ್ದಾರೆ. ಕರಾಟೆ ಮಾಸ್ಟರ್ ಅವತಾರದಲ್ಲಿ ರಂಗಾಯಣ ರಘು ಕಾಣಿಸಿಕೊಂಡಿದ್ದಾರೆ. ಲವಿತ್ ಛಾಯಾಗ್ರಹಣ, ಡಾಸ್ಮೋಡ್ ಸಂಗೀತ ನಿರ್ದೇಶನ, ಮುರುಳಿ ನೃತ್ಯ ನಿರ್ದೇಶನ, ಸುಜಿತ್ ವೆಂಕಟರಾಮಯ್ಯ ಸಾಹಿತ್ಯ, ಅರ್ಜುನ್ ಮಾಸ್ಟರ್ ಆಕ್ಷನ್ ವಿದ್ಯಾಪತಿ ಸಿನಿಮಾಕ್ಕಿದೆ. ‘ಟಗರು ಪಲ್ಯ’ ಮೂಲಕ ಮಸ್ತ್ ಮನರಂಜನೆ ನೀಡಿದ್ದ ನಾಗಭೂಷಣ್ ಮತ್ತೊಮ್ಮೆ ಡಾಲಿ ಜೊತೆ ಕೈ ಜೋಡಿಸಿದ್ದಾರೆ. ಸದ್ಯದಲ್ಲೇ ಸಿನಿಮಾ ತೆರೆಗೆ ಬರಲಿದೆ.



## ರಾಜಮೌಳಿ ಚಿತ್ರಕ್ಕೆ ಪ್ರಿಯಾಂಕಾ ಚೋಪ್ರಾ ಸಂಭಾವನೆ ಕೇಳಿದ್ರೆ ಶಾಕ್ ಆಗೋದು ಗ್ಯಾರಂಟಿ



### ದೇಸಿ ಗರ್ಲ್ ಈಗ ದುಬಾರಿ

ಪ್ರಿಯಾಂಕಾ ಚೋಪ್ರಾ ಅವರು ಹಿಂದಿ ಸಿನಿಮಾದಲ್ಲಿ ನಟಿಸದೇ ಹಲವು ವರ್ಷಗಳೇ ಕಳೆದಿದೆ. ಹಾಲಿವುಡ್ ಸಿನಿಮಾಗಳಲ್ಲಿ ಆಯಕ್ಟೀವ್ ಆಗಿರುವ ನಟಿ ಈಗ ಮತ್ತೆ ಸೌತ್ ಸಿನಿಮಾಗೆ ಕಮ್ ಬ್ಯಾಕ್ ಮಾಡುತ್ತಿದ್ದಾರೆ. ರಾಜಮೌಳಿ ನಿರ್ದೇಶನದಲ್ಲಿ ಮಹೇಶ್ ಬಾಬು ಜೊತೆ ನಟಿಸಲು 30 ಕೋಟಿ ರೂ. ಸಂಭಾವನೆಯನ್ನು ನಟಿ ಡಿಮ್ಯಾಂಡ್ ಮಾಡಿದ್ದಾರೆ ಎನ್ನಲಾದ ಸುದ್ದಿಯೊಂದು ಸೋಶಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿದೆ. ಪ್ರಿಯಾಂಕಾಗೆ 42 ವರ್ಷವಾದ್ರೂ, ನಟಿಯ ಚಾರ್ಮ್ ಇನ್ನೂ ಕಮ್ಮಿಯಾಗಿಲ್ಲ. ಅವರಿಗೆ ಇನ್ನೂ ಬೇಡಿಕೆಯಿದೆ.

ಹಾಲಿವುಡ್‌ನಲ್ಲಿ ಆ್ಯಕ್ಷನ್ ಕ್ವೀನ್ ಆಗಿ ಮಿಂಚುತ್ತಿದ್ದಾರೆ. ಹೀಗಿರುವಾಗ ಬಹುನಿರೀಕ್ಷಿತ ಸಿನಿಮಾ ರಾಜಮೌಳಿ ಮತ್ತು ಮಹೇಶ್ ಬಾಬು ಸಿನಿಮಾದಲ್ಲಿ ನಟಿಸಲು ಪ್ರಿಯಾಂಕಾ 30 ಕೋಟಿ ರೂ. ಕೇಳಿದ್ದಾರೆ. ಅದಕ್ಕೆ ಚಿತ್ರತಂಡ ಕೂಡ ಸಮ್ಮತಿ ಸೂಚಿಸಿದೆ ಎನ್ನಲಾದ ವಿಚಾರವೊಂದು ಚರ್ಚೆಗೆ ಗ್ರಾಸವಾಗಿದೆ.ಇನ್ನೂ ಭಾರತದ ಯಾವುದೇ ನಟಿ ಇಷ್ಟು ಸಂಭಾವನೆ ಪಡೆದಿಲ್ಲ. ಹಾಗಾಗಿ ಪ್ರಿಯಾಂಕಾ ಭಾರತದ ಅತ್ಯಂತ ದುಬಾರಿ ನಟಿ ಎನಿಸಿಕೊಂಡಿದ್ದಾರೆ. ಮಹೇಶ್ ಬಾಬು ಈ ಸಿನಿಮಾಗೆ ಕಳೆದ 2 ವರ್ಷಗಳಿಂದ ತಯಾರಿ ನಡೆಯುತ್ತಿದೆ. ಇತ್ತೀಚೆಗೆ ಈ ಚಿತ್ರದ ಮುಹೂರ್ತ ನೆರವೇರಿದೆ. ಸಿನಿಮಾದ ಶೂಟಿಂಗ್ ಕೂಡ ಶುರುವಾಗಿದೆ.

## ಟಿ20 ಕ್ರಿಕೆಟ್‌ನಲ್ಲಿ ದಾಖಲೆ ಬರೆದ ಪಾಕ್ ಮೂಲದ ವೇಗಿ

### 6 ಎಸೆತಗಳಲ್ಲಿ 3 ವಿಕೆಟ್

ಪುಣೆಯಲ್ಲಿ ನಡೆದ ಭಾರತ-ಇಂಗ್ಲೆಂಡ್ ನಡುವಿನ ನಾಲ್ಕನೇ ಟಿ20 ಪಂದ್ಯದಲ್ಲಿ ಇಂಗ್ಲೆಂಡ್ ವೇಗಿ ಸಾಕಿಬ್ ಮಹಮೂದ್ ತಮ್ಮ ಮೊದಲ ಓವರ್‌ನಲ್ಲಿ ಮೂರು ಪಡೆದು ಸಂಚಲನ ಮೂಡಿಸಿ ದಲ್ಲದೆ ಆ ಓವರ್‌ನಲ್ಲಿ ಯಾವುದೇ ರನ್ ಬಿಟ್ಟುಕೊಡದೆ ಚುಟುಕು ಮಾದರಿಯಲ್ಲಿ ದಾಖಲೆ ಕೂಡ ನಿರ್ಮಿಸಿದರು. ಪುಣೆಯಲ್ಲಿ ನಡೆದ ಭಾರತ ಮತ್ತು ಇಂಗ್ಲೆಂಡ್ ನಡುವಿನ ಐದು ಪಂದ್ಯಗಳ ಟಿ20 ಸರಣಿಯ ನಾಲ್ಕನೇ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು 15 ರನ್‌ಗಳಿಂದ ಮಣಿಸಿದ ಟೀಂ ಇಂಡಿಯಾ ಸರಣಿಯಲ್ಲಿ 3-1 ಮುನ್ನಡೆ ಸಾಧಿಸಿದಲ್ಲದೆ ಇನ್ನೊಂದು ಪಂದ್ಯ ಬಾಕಿ ಇರುವಂತೆಯೇ ಸರಣಿಯನ್ನು ವಶಪಡಿಸಿಕೊಂಡಿತು. ಈ ಮೂಲಕ ತವರಿನಲ್ಲಿ ಸತತ 17 ನೇ ಸರಣಿಯನ್ನು ಗೆದ್ದುಕೊಂಡ ದಾಖಲೆಯನ್ನು ಬರೆಯಿತು. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಟೀಂ ಇಂಡಿಯಾದ ಗೆಲುವಿಗೆ ಹಾರ್ದಿಕ್ ಪಾಂಡ್ಯ ಹಾಗೂ ಶಿವಂ ದುಬೆ ಸಿಡಿಸಿದ ಅರ್ಧಶತಕದ ಇನ್ನಿಂಗ್ಸ್ ಪ್ರಮುಖ ಕಾರಣವಾಯಿತು. ಈ ಇಬ್ಬರು ಆಟಗಾರರು ಇನ್ನಿಂಗ್ಸ್ ನಿಭಾಯಿಸದಿದ್ದರೆ, ತಂಡಕ್ಕೆ ಸೋಲು ಕಟ್ಟಿಟ್ಟ ಬುತ್ತಿ ಎಂಬುದು ಖಾತ್ರಿಯಾಗಿತ್ತು. ಇದಕ್ಕೆ ಕಾರಣ ಈ ಸರಣಿಯಲ್ಲಿ ಚೊಚ್ಚಲ ಪಂದ್ಯವನ್ನಾಡಿದ ವೇಗಿ ಸಾಕಿಬ್ ಮಹಮೂದ್.

ಭಾರತ ವಿರುದ್ಧದ ಸರಣಿಗೆ ತಂಡದಲ್ಲಿ ಆಯ್ಕೆಯಾಗಿದ್ದರೂ ಸಾಕಿಬ್ ಮಹಮೂದ್‌ಗೆ ಮೊದಲ ಮೂರು ಪಂದ್ಯಗಳಲ್ಲಿ ಆಡುವ ಅವಕಾಶ ಸಿಕ್ಕಿರಲಿಲ್ಲ. ಆದರೆ ನಾಲ್ಕನೇ ಪಂದ್ಯದಲ್ಲಿ ಪ್ಲೇಯಿಂಗ್ 11ನಲ್ಲಿ ಸ್ಥಾನ ಪಡೆದಿದ್ದ ಸಾಕಿಬ್, ತನ್ನ ಮೊದಲ ಓವರ್‌ನಲ್ಲೇ ಟೀಂ ಇಂಡಿಯಾಕ್ಕೆ ಹ್ಯಾಟ್ರಿಕ್ ಆಘಾತ ನೀಡಿದರು. ಭಾರತದ ಇನ್ನಿಂಗ್ಸ್‌ನ ಎರಡನೇ ಓವರ್ ಬೌಲ್ ಮಾಡಿದ ಸಾಕಿಬ್ ಮಹಮೂದ್ ಅದೇ ಓವರ್‌ನಲ್ಲಿ ಮೂರು ವಿಕೆಟ್‌ಗಳನ್ನು ಪಡೆದು ಭಾರತದ ಅಗ್ರ ಕ್ರಮಾಂಕವನ್ನು ಧ್ವಂಸಗೊಳಿಸಿದರು. ಮೊದಲ ಎಸೆತದಲ್ಲಿ ಸಂಜು ಸ್ಯಾಮ್ಸನ್ (1) ಮತ್ತು ಎರಡನೇ ಎಸೆತದಲ್ಲಿ ತಿಲಕ್ ವರ್ಮಾ (0) ಅವರನ್ನು ಔಟ್ ಮಾಡಿದ ಅವರು ಓವರ್‌ನ ಕೊನೆಯ ಎಸೆತದಲ್ಲಿ ನಾಯಕ ಸೂರ್ಯಕುಮಾರ್ ಯಾದವ್ (0) ಅವರನ್ನು ಔಟ್ ಮಾಡಿದರು. ಕುತೂಹಲಕಾರಿ ವಿಷಯವೆಂದರೆ ಶಕೀಬ್ ಈ ಓವರ್‌ನಲ್ಲಿ ಯಾವುದೇ ರನ್ ಬಿಟ್ಟುಕೊಡಲಿಲ್ಲ, ಅಂದರೆ ಅವರು ಮೇಡನ್ ಓವರ್ ಬೌಲ್ ಮಾಡಿದರು. ಇದರೊಂದಿಗೆ, ಅವರು ಭಾರತ ವಿರುದ್ಧದ ಟಿ20 ಅಂತರರಾಷ್ಟ್ರೀಯ ಪಂದ್ಯದಲ್ಲಿ ಮೊದಲ ಓವರ್‌ನಲ್ಲಿ ಮೂರು ವಿಕೆಟ್ ಪಡೆದ ಇಂಗ್ಲೆಂಡ್ ಅಥವಾ ಯಾವುದೇ ತಂಡದ ಮೊದಲ ಬೌಲರ್ ಎನಿಸಿಕೊಂಡರು. ಇದಲ್ಲದೆ, ಇನ್ನಿಂಗ್ಸ್‌ನ ಎರಡನೇ ಓವರ್ ಎಸೆದು ಅದೇ ಓವರ್‌ನಲ್ಲಿ ಮೂರು ವಿಕೆಟ್‌ಗಳನ್ನು ಪಡೆಯುವ ಮೂಲಕ ಅವರು ಜಮೈಕಾದ ಜೆರೋಮ್ ಟೇಲರ್ ದಾಖಲೆಯನ್ನು ಸರಿಗಟ್ಟಿದರು. ಈ ಹಿಂದೆ ಜೆರೋಮ್ ಟೇಲರ್ 2007 ರಲ್ಲಿ ನಡೆದಿದ್ದ ದಕ್ಷಿಣ ಆಫ್ರಿಕಾ ವಿರುದ್ಧದ ಪಂದ್ಯದ ಎರಡನೇ ಓವರ್‌ನಲ್ಲಿ ಮೂರು ವಿಕೆಟ್ ಪಡೆದು ಈ ಸಾಧನೆ ಮಾಡಿದ್ದರು.



ವಾಸ್ತವವಾಗಿ ಸಾಕಿಬ್ ಮಹಮೂದ್ ಪಾಕಿಸ್ತಾನಿ ಮೂಲದ ಕ್ರಿಕೆಟಿಗ. ಹೀಗಾಗಿಯೇ ಅವರು ಭಾರತಕ್ಕೆ ಬರಲು ಸಾಕಷ್ಟು ವೀಸಾ ಸಮಸ್ಯೆಯನ್ನು ಎದುರಿಸಬೇಕಾಯಿತು. ಅಂದಹಾಗೆ, ಸಾಕಿಬ್ ಹುಟ್ಟಿದ್ದು ಇಂಗ್ಲೆಂಡ್‌ನಲ್ಲಿಯಾದರೂ ಅವರ ಪೋಷಕರ ಮೂಲ ಸ್ಥಾನ ಪಾಕಿಸ್ತಾನ. 2019 ರಲ್ಲಿ ಟಿ20 ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಸಾಕಿಬ್ ಈ ಮಾದರಿಯಲ್ಲಿ ಇದುವರೆಗೆ 21 ವಿಕೆಟ್ ಉರುಳಿಸಿದ್ದಾರೆ.

## ಮೂರು ಶತಕ ಸಿಡಿಸಿದರೂ ಸ್ಥಿರತೆಯಿಲ್ಲ; ಅಪಾಯದಲ್ಲಿ ಸಂಜು ವೃತ್ತಿಜೀವನ



ದಕ್ಷಿಣ ಆಫ್ರಿಕಾ ವಿರುದ್ಧದ ಟಿ20 ಸರಣಿಯಲ್ಲಿ ಎರಡೆರಡು ಶತಕ ಸಿಡಿಸಿ ಸಂಚಲನ ಮೂಡಿಸಿದ್ದ ಸಂಜು ಸ್ಯಾಮ್ಸನ್‌ಗೆ, ಇನ್ನು ಮುಂದೆ ಭಾರತ ಟಿ20 ತಂಡದಲ್ಲಿ ಆರಂಭಿಕ ಸ್ಥಾನ ಖಚಿತ ಎಂದು ಹೇಳಲಾಗುತ್ತಿತ್ತು. ಆದರೆ ಇಂಗ್ಲೆಂಡ್ ವಿರುದ್ಧದ ಟಿ20 ಸರಣಿ ಬರುವ ಹೊತ್ತಿಗೆ ಇಡೀ ಪರಿಸ್ಥಿತಿಯೇ ಬದಲಾಗಿದೆ. ಇಂಗ್ಲೆಂಡ್ ವಿರುದ್ಧ ಆಡಿರುವ ನಾಲ್ಕು ಪಂದ್ಯಗಳಲ್ಲೂ ಸಂಜು ವಿಫಲರಾಗಿದ್ದಾರೆ. ಅದರಲ್ಲೂ ಆಡಿದ ನಾಲ್ಕು ಪಂದ್ಯಗಳಲ್ಲೂ ಸಂಜು ಒಂದೇ ರೀತಿಯಾಗಿ ವಿಕೆಟ್ ಒಪ್ಪಿಸಿರುವುದು ಅವರ ವೃತ್ತಿಜೀವನಕ್ಕೆ ಅಪಾಯದ ಮುನ್ಸೂಚನೆಯಾಗಿದೆ. ಅಷ್ಟಕ್ಕೂ ಸಂಜು ಸ್ಯಾಮ್ಸನ್ ಈ ನಾಲ್ಕು ಪಂದ್ಯಗಳಲ್ಲಿ ಮಾಡಿದ ತಪ್ಪೇನು ಪದೇ ಪದೇ ಸಂಜು ಎಡವುತ್ತಿರುವುದು ಎಲ್ಲಿ ಎಂಬುದನ್ನು ನೋಡುವುದಾದರೆ..

**ಸತತ ನಾಲ್ಕನೇ ಪಂದ್ಯದಲ್ಲೂ ವಿಫಲ:** ಮೇಲೆ ಹೇಳಿದಂತೆ ಟಿ20 ಸರಣಿಯ ನಾಲ್ಕೂ ಪಂದ್ಯಗಳಲ್ಲಿ ಸಂಜು ಸ್ಯಾಮ್ಸನ್ ಒಂದೇ ತಪ್ಪಿಗೆ ವಿಕೆಟ್ ಕೈಚೆಲ್ಲಿದ್ದಾರೆ. ಅಂದರೆ ಸಂಜು ಸ್ಯಾಮ್ಸನ್ ಟಿ20 ಸರಣಿಯ ಎಲ್ಲಾ ನಾಲ್ಕು ಪಂದ್ಯಗಳಲ್ಲಿ ಶಾರ್ಟ್ ಬಾಲ್ ಎದುರಿಸುವಲ್ಲಿ ವಿಫಲರಾಗಿ ವಿಕೆಟ್ ಕಳೆದುಕೊಂಡಿದ್ದಾರೆ. ಇಂಗ್ಲೆಂಡ್ ವಿರುದ್ಧದ ಪ್ರತಿ ಪಂದ್ಯದಲ್ಲೂ ಸಂಜು ಶಾರ್ಟ್ ಬಾಲ್‌ಗಳಿಗೆ ಔಟಾಗಿದ್ದಾರೆ. ಮೊದಲ ಮೂರು ಟಿ20 ಪಂದ್ಯಗಳಲ್ಲಿ ಜೋಫ್ರಾ ಆರ್ಚರ್ ಎಸೆದ ಶಾರ್ಟ್ ಪಿಚ್ ಬಾಲ್‌ಗೆ ವಿಕೆಟ್ ಒಪ್ಪಿಸಿದ್ದ ಸಂಜು, ನಾಲ್ಕನೇ ಟಿ20 ಪಂದ್ಯದಲ್ಲಿ ಸಾಕಿಬ್ ಮಹಮೂದ್ ಎಸೆದ ಮೊದಲ ಶಾರ್ಟ್ ಬಾಲ್‌ನಲ್ಲೇ ವಿಕೆಟ್ ಒಪ್ಪಿಸಿದರು. ಸಂಜು ಸ್ಯಾಮ್ಸನ್ ಪದೇಪದೇ ಶಾರ್ಟ್ ಬಾಲ್‌ಗಳನ್ನು ಆಡುವ ಯತ್ನದಲ್ಲಿ ವಿಕೆಟ್ ಕಳೆದುಕೊಳ್ಳುತ್ತಿರುವುದನ್ನು ಗಮನಿಸಿದರೆ, ಸಂಜು ಶಾರ್ಟ್ ಬಾಲ್‌ಗಳನ್ನು ಎದುರಿಸುವುದರಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂಬುದನ್ನು ಸುಲಭವಾಗಿ ತಿಳಿದುಕೊಳ್ಳಬಹುದು.

ಇದರ ಲಾಭ ಪಡೆಯುತ್ತಿರುವ ಇಂಗ್ಲೆಂಡ್ ತಂಡ ಪ್ರತಿ ಪಂದ್ಯದಲ್ಲೂ ಶಾರ್ಟ್ ಬಾಲ್‌ಗಳನ್ನು ಬಳಸಿ ಸಂಜು ಸ್ಯಾಮ್ಸನ್‌ರ ವಿಕೆಟ್ ಉರುಳಿಸುತ್ತಿದೆ. ಸಂಜುರ ಈ ವೈಫಲ್ಯ ಇದೇ ರೀತಿ ಮುಂದುವರೆದರೆ ಅವರ ಟಿ20 ವೃತ್ತಿ ಜೀವನವೂ ಬಹಳ ಸಮಯ ಉಳಿಯುವುದಿಲ್ಲ.

### ಟಿ20ಯಲ್ಲಿ ಸ್ಯಾಮ್ಸನ್ ಸಾಧನೆ

**ಸಂಜು ಸ್ಯಾಮ್ಸನ್ ಅವರ ಟಿ20 ದಾಖಲೆ ತುಂಬಾ ಆಶ್ಚರ್ಯಕರವಾಗಿದೆ. ಏಕೆಂದರೆ ಅವರು ಈ ಸ್ವರೂಪದಲ್ಲಿ ಮೂರು ಶತಕಗಳನ್ನು ಸಿಡಿಸಿದ್ದಾರೆಯಾದರೂ ಅವರ ಬ್ಯಾಟಿಂಗ್ ಸರಾಸರಿ ಕೇವಲ 25.61 ಆಗಿದೆ. ಇದರರ್ಥ ಸಂಜು ಸ್ಯಾಮ್ಸನ್ ಟಿ20 ನಲ್ಲಿ ರನ್ ಗಳಿಸುವುದಕ್ಕಿಂತ ಹೆಚ್ಚು ವಿಫಲರಾಗಿದ್ದಾರೆ. ಇದು ಅವರ ಟಿ20 ವೃತ್ತಿಜೀವನ ಅಪಾಯದಲ್ಲಿದೆ ಎಂಬುದರ ಸೂಚಕವಾಗಿದೆ. ಒಂದು ವೇಳೆ ಯಶಸ್ವಿ ಜೈಸ್ವಾಲ್ ಮುಂದಿನ ದಿನಗಳಲ್ಲಿ ಟಿ20 ತಂಡಕ್ಕೆ ಬಂದರೆ ಅಥವಾ ಶುಭ್‌ಮನ್ ಗಿಲ್‌ಗೆ ಅವಕಾಶ ಸಿಕ್ಕರೆ, ಸಂಜು ಸ್ಯಾಮ್ಸನ್ ರನ್ನು ತಂಡದಿಂದ ಹೊರಹಾಕಲು ಹೆಚ್ಚು ಸಮಯ ಹಿಡಿಯುವುದಿಲ್ಲ.**

## ಒಂದೇ ಸಮನೆ ಮೈದಾನಕ್ಕೆ ನುಗ್ಗಿದ ವಿರಾಟ್ ಕೊಹ್ಲಿ ಫ್ಯಾನ್ಸ್

ದೆಹಲಿಯ ಅರುಣ್ ಜೇಟ್ಲಿ ಸ್ಟೇಡಿಯಂನಲ್ಲಿ ನಡೆಯುತ್ತಿರುವ ದೆಹಲಿ ಮತ್ತು ರೈಲ್ವೇಸ್ ತಂಡಗಳ ನಡುವಣ ಪಂದ್ಯದ ವೇಳೆ ವಿರಾಟ್ ಕೊಹ್ಲಿ ಅಭಿಮಾನಿಗಳು ಮೈದಾನಕ್ಕೆ ನುಗ್ಗಿದ್ದಾರೆ. ಈ ಪಂದ್ಯದ ಮೂರನೇ ದಿನದಾಟದಲ್ಲಿ ರೈಲ್ವೇಸ್ ಬ್ಯಾಟಿಂಗ್ ಮಾಡುತ್ತಿದ್ದ ಸಂದರ್ಭ ಮೂವರು ಅಭಿಮಾನಿಗಳು ಒಂದೇ ಸಮನೆ ಮೈದಾನಕ್ಕೆ ನುಗ್ಗಿದ್ದಾರೆ. ಇತ್ತ ಒಂದೇ ಬಾರಿ ಮೂವರು ಅಭಿಮಾನಿಗಳು ಮೈದಾನಕ್ಕೆ ಜಿಗಿದಿದ್ದರಿಂದ ಸಿಬ್ಬಂದಿಗಳು ಯಾರನ್ನು ಹಿಡಿಯಬೇಕೆಂದು ಗೊಂದಲಕ್ಕೀಡಾದರು. ಅಷ್ಟರಲ್ಲಾಗಲೇ ಮೂವರು ಅಭಿಮಾನಿಗಳು ವಿರಾಟ್ ಕೊಹ್ಲಿ ಬಳಿಗೆ ತಲುಪಿ ಅವರ ಕಾಲಿಗೆ ನಮಿಸಿದ್ದಾರೆ.ಇದರ ನಡುವೆ ಕೆಲ ಅಭಿಮಾನಿಗಳು ಮೈದಾನಕ್ಕೆ ನುಗ್ಗಲು ಯತ್ನಿಸಿದ್ದಾರೆ. ಈ ವೇಳೆ ಎಚ್ಚೆತ್ತುಕೊಂಡ ಭದ್ರತಾ ಸಿಬ್ಬಂದಿಗಳು ಏಟಿ ರುಚಿ ತೋರಿಸಿ, ಅಭಿಮಾನಿಗಳನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇದೀಗ ಮೈದಾನಕ್ಕೆ ನುಗ್ಗಿ ವಿರಾಟ್ ಕೊಹ್ಲಿಯ ಕಾಲಿಗೆ ನಮಿಸಿದ ಅಭಿಮಾನಿಗಳ ವಿಡಿಯೋ ವೈರಲ್ ಆಗಿದೆ.

**ವಿರಾಟ್ ಕೊಹ್ಲಿ ಅಭಿಮಾನಿಗಳ ವಿಡಿಯೋ:** ಇದಕ್ಕೂ ಮುನ್ನ ಈ ಪಂದ್ಯದ ಮೊದಲ ದಿನದಾಟದಂತು ಅಭಿಮಾನಿಯೋರ್ವ ಮೈದಾನಕ್ಕೆ ನುಗಿದ್ದ. ವಿರಾಟ್ ಕೊಹ್ಲಿ ಫೀಲ್ಡಿಂಗ್ ಮಾಡುತ್ತಿದ್ದ ವೇಳೆ ಓಡಿ ಹೋದ ಯುವಕನೊಬ್ಬ ನೇರವಾಗಿ ಅವರ ಕಾಲಿಗೆ ಎರಗಿದ್ದ. ಇದೀಗ ಮತ್ತೆ ಅಭಿಮಾನಿಗಳು ಮೈದಾನಕ್ಕೆ ನುಗ್ಗುವ ಮೂಲಕ ಪಂದ್ಯಕ್ಕೆ ಅಡಚಣೆಯನ್ನು ಉಂಟು ಮಾಡಿದ್ದಾರೆ. ಇನ್ನು ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ರೈಲ್ವೇಸ್ ತಂಡವು ಪ್ರಥಮ ಇನಿಂಗ್ಸ್‌ನಲ್ಲಿ 241 ರನ್‌ಗಳಿಸಿ ಆಲೌಟ್ ಆಯಿತು. ಇದಕ್ಕುತ್ತರವಾಗಿ ಬ್ಯಾಟ್ ಬೀಸಿದ ದೆಹಲಿ ಪರ ವಿರಾಟ್ ಕೊಹ್ಲಿ ಕೇವಲ 6 ರನ್‌ಗಳಿಸಲಷ್ಟೇ ಶಕ್ತರಾಗಿದ್ದರು. ಇದಾಗ್ಯೂ ಉಳಿದ ಬ್ಯಾಟರ್‌ಗಳ ಉತ್ತಮ ಪ್ರದರ್ಶನದೊಂದಿಗೆ ದೆಹಲಿ ತಂಡ ಮೊದಲ ಇನಿಂಗ್ಸ್‌ನಲ್ಲಿ 374 ರನ್ ಕಲೆಹಾಕಿದೆ.



## ಭಾರತ- ಆಫ್ರಿಕಾ ನಡುವೆ ಟಿ20 ವಿಶ್ವಕಪ್ ಫೈನಲ್

ಮಲೇಷ್ಯಾದಲ್ಲಿ ನಡೆಯುತ್ತಿರುವ ಅಂಡರ್-19 ಮಹಿಳಾ ಟಿ20 ವಿಶ್ವಕಪ್‌ನ ಫೈನಲ್ ಪಂದ್ಯ ಅಂದರೆ ಫೆಬ್ರವರಿ 2 ರ ಭಾನುವಾರದಂದು ನಡೆಯಲಿದೆ. ಈ ಪ್ರಶಸ್ತಿ ಸುತ್ತಿನಲ್ಲಿ ಹಾಲಿ ಚಾಂಪಿಯನ್ ಟೀಂ ಇಂಡಿಯಾ ಹಾಗೂ ಇದೇ ಮೊದಲ ಬಾರಿಗೆ ಫೈನಲ್‌ಗೆ ಅರ್ಹತೆ ಪಡೆದುಕೊಂಡಿರುವ ದಕ್ಷಿಣ ಆಫ್ರಿಕಾ ತಂಡದ ನಡುವೆ ನಡೆಯಲಿದೆ. ಟೂರ್ನಿಯಲ್ಲಿ ಇದುವರೆಗೆ ಅಜೇಯವಾಗಿರುವ ಭಾರತ ತಂಡ ಫೈನಲ್ ಪಂದ್ಯದಲ್ಲೂ ಅದೇ ರೀತಿಯ ಪ್ರದರ್ಶನವನ್ನು ಮುಂದುವರೆಸಲು ಎದುರು ನೋಡುತ್ತಿದ್ದರೆ, ಇತ್ತ ಚೊಚ್ಚಲ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ದಕ್ಷಿಣ ಆಫ್ರಿಕಾ ಕೂಡ ಟೀಂ ಇಂಡಿಯಾವನ್ನು ಮಣಿಸುವ ಇರಾದೆಯಲ್ಲಿದೆ. ಈ ಟೂರ್ನಿಯಲ್ಲಿ ಉಭಯ ತಂಡಗಳು ಬಲಿಷ್ಠ ತಂಡಗಳನ್ನು ಮಣಿಸಿ ಫೈನಲ್ ಪ್ರವೇಶಿಸಿರುವುದರಿಂದ ನಾಳಿನ ಪಂದ್ಯದ ಮೇಲೆ ಎಲ್ಲರ ದೃಷ್ಟಿ ನೆಟ್ಟಿದೆ. ಭಾರತ ಹಾಗೂ ಆಫ್ರಿಕಾ ನಡುವೆ ಮಹಿಳಾ ಟಿ20 ವಿಶ್ವಕಪ್ ಫೈನಲ್ ಪಂದ್ಯ ಎಲ್ಲಿ ನಡೆಯಲಿದೆ ಭಾರತ ಹಾಗೂ ಆಫ್ರಿಕಾ ನಡುವೆ ಮಹಿಳಾ ಟಿ20 ವಿಶ್ವಕಪ್ ಫೈನಲ್ ಪಂದ್ಯ ಕೌಲಾಲಂಪುರದ ಬಯುಮಾಸ್ ಓವಲ್‌ನಲ್ಲಿ ನಡೆಯಲಿದೆ. ಭಾರತ ಹಾಗೂ ಆಫ್ರಿಕಾ ನಡುವೆ ಮಹಿಳಾ ಟಿ20 ವಿಶ್ವಕಪ್ ಫೈನಲ್ ಪಂದ್ಯ ಯಾವಾಗ ಪ್ರಾರಂಭವಾಗುತ್ತದೆ




ಭಾರತ ಹಾಗೂ ಆಫ್ರಿಕಾ ನಡುವೆ ಮಹಿಳಾ ಟಿ20 ವಿಶ್ವಕಪ್ ಫೈನಲ್ ಪಂದ್ಯ ಭಾರತೀಯ ಕಾಲಮಾನ ಮಧ್ಯಾಹ್ನ 12 ಗಂಟೆಗೆ ಆರಂಭವಾಗಲಿದೆ. ಭಾರತ ಹಾಗೂ ಆಫ್ರಿಕಾ ನಡುವೆ ಮಹಿಳಾ ಟಿ20 ವಿಶ್ವಕಪ್ ಫೈನಲ್ ಪಂದ್ಯವನ್ನು ಲೈವ್ ಸ್ಟ್ರೀಮಿಂಗ್ ವೀಕ್ಷಿಸುವುದು ಹೇಗೆ ಭಾರತ ಹಾಗೂ ಆಫ್ರಿಕಾ ನಡುವೆ ಮಹಿಳಾ ಟಿ20 ವಿಶ್ವಕಪ್ ಫೈನಲ್ ಪಂದ್ಯದ ಲೈವ್ ಸ್ಟ್ರೀಮಿಂಗ್ ಡಿಸ್ನಿ ಪ್ಲಸ್ ಹಾಟ್‌ಸ್ಟಾರ್‌ನಲ್ಲಿ ಇರಲಿದೆ.

**ಎರಡು ತಂಡಗಳು ಇಂತಿವೆ:** ಭಾರತ: ನಿಕಿ ಪ್ರಸಾದ್ (ನಾಯಕಿ), ಸನಿಕಾ ಚಲಾಕೆ, ಗೊಂಗಡಿ ತ್ರಿಶಾ, ಕಮಲಿನಿ ಜಿ, ಭಾವಿಕಾ ಅಹಿರೆ, ಈಶ್ವರಿ ಅವಸಾರೆ, ಮಿಥಿಲಾ ವಿನೋದ್, ಜೋಶಿತಾ ವಿಜೆ, ಸೋನಮ್ ಯಾದವ್, ಪರುಣಿಕಾ ಸಿಸೋಡಿಯಾ, ಕೇಸರಿ ದೃತಿ, ಆಯುಷಿ ಶುಕ್ಲಾ, ಆನಂದಿತ ಕಿಶೋರ್, ಎಂಡಿ ಶಬ್ನಮ್, ವೈಷ್ಣವಿ ಶರ್ಮಾ. **ದಕ್ಷಿಣ ಆಫ್ರಿಕಾ:** ಸಿಮೋನೆ ಲಾರೆನ್ಸ್, ಕರಾಬೊ ಮೆಸೊ, ಕೈಲಾ ರೆನೆಕೆ (ನಾಯಕಿ), ಗೆಮ್ಮಾ ಬೋಥಾ, ಸೆಶ್ನಿ ನಾಯ್ಡೂ, ಡಯಾರಾ ರಾಮ್ಲಕನ್, ಮೊನಾಲಿಸಾ ಲೆಗೊಡಿ, ನ್ಥಾಬಿಸೆಂಗ್ ನಿನಿ, ಫಾಯೆ ಕೌಲಿಂಗ್, ಜೆ-ಲೀ ಫಿಲಾಂಡರ್, ಲುಯಾಂಡಾ ನ್ಜುಜಾ, ಡೀ ವ್ಯಾನ್ ರೆನ್ಸ್‌ಬರ್ಗ್, ಮೀಕೆ ವ್ಯಾನ್ ವೂರ್ಸ್ಟ್, ಆಶ್ಲೇ ವ್ಯಾನ್ ವೈಕ್, ಶನೆಲ್ ವೆಂಟರ್.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966